بِسۡمِ اللّٰہِ الرَّحۡمٰنِ الرَّحِیۡمِ　　نَحۡمَدُہٗ وَنُصَلِّیۡ عَلٰی رَسُوۡلِہِ الۡکَرِیۡمِ　　وَعَلٰی عَبۡدِہِ الۡمَسِیۡحِ الۡمَوۡعُوۡد

وَلَقَدۡ نَصَرَکُمُ اللّٰہُ بِبَدۡرٍ وَّاَنۡتُمۡ اَذِلَّۃٌ

ಕನ್ನಡ ಬದರ್ ವಾರ ಪತ್ರಿಕೆ
WEEKLY BADAR QADIAN KANNADA

ಸಂಪಾದಕರು:
ತಾರಿಖ್ ಅಹ್ಮದ್ ಇದ್ರೀಸ್.

ಅಲ್ಲಾಹನ ಉಪದೇಶ

ಅಲ್ಲಾಹನ ಸ್ಮರಣೆಯಿಂದ ಮಾತ್ರ ಮನಶ್ಶಾಂತಿ ಪ್ರಾಪ್ತಿಯಾಗುವುದು

اَلَّذِیۡنَ اٰمَنُوۡا وَتَطۡمَئِنُّ قُلُوۡبُہُمۡ بِذِکۡرِ اللّٰہِ ؕ اَلَا بِذِکۡرِ اللّٰہِ تَطۡمَئِنُّ الۡقُلُوۡبُ ○

(ಅರ್‌ರಅ್‌ದ್ : 29)

ಅಂದರೆ: 'ಅವರು ವಿಶ್ವಾಸಿಗಳೂ ಅಲ್ಲಾಹನ ಸ್ಮರಣೆಯಿಂದ ಮನಶ್ಶಾಂತಿ ಗಳಿಸಿದವರೂ ಆಗಿದ್ದಾರೆ. ತಿಳಿದುಕೊಳ್ಳಿರಿ, ಅಲ್ಲಾಹನ ಸ್ಮರಣೆಯಿಂದ ಮಾತ್ರ ಮನಶ್ಶಾಂತಿ ಪ್ರಾಪ್ತಿಯಾಗುವುದು.

ಸಂಪುಟ: 07, ಸಂಚಿಕೆ: 46, 12 ನವೆಂಬರ್ 2026, 12 ನಬುವ್ವತ್ 1405 ಹಿಜರಿ ಶಮ್ಸಿ, 01 ಜಮಾದಿಉಸ್ಸಾನಿ 1448 ಹಿಜರಿ ಖಮರಿ. (www.akhbarbadr.in)

ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

ಮೂರು ಗುಣಗಳು ಯಾರಲ್ಲಿ ಕಂಡುಬರುತ್ತವೆಯೋ, ಅವರು ಈಮಾನ್‌ನ ಮಾಧುರ್ಯವನ್ನು (ರುಚಿಯನ್ನು) ಅನುಭವಿಸಿದವರಾಗಿದ್ದಾರೆ.

عَنْ أَنَسٍ رَضِيَ اللهُ عَنْهُ، عَنِ النَّبِيِّ صَلَّى اللهُ عَلَيْهِ وَسَلَّمَ، قَالَ: "ثَلَاثٌ مَنْ كُنَّ فِيهِ وَجَدَ حَلَاوَةَ الإِيمَانِ، أَنْ يَكُونَ اللهُ وَرَسُولُهُ أَحَبَّ إِلَيْهِ مِمَّا سِوَاهُمَا، وَأَنْ يُحِبَّ المَرْءَ لَا يُحِبُّهُ إِلَّا لِلَّهِ، وَأَنْ يَكْرَهَ أَنْ يَعُودَ فِي الكُفْرِ كَمَا يَكْرَهُ أَنْ يُقْذَفَ فِي النَّارِ"　　[صحيح البخاري/ كتاب الإيمان/حديث: 16]

ಹರ್ಝ್ರತ್ ಅನಸ್ (ರ.ಅ.) ಅವರಿಂದ ವರದಿಯಾಗಿದೆ. ಹರ್ಝ್ರತ್ ಪ್ರವಾದಿ ಮುಹಮ್ಮದ್ ಮುಸ್ತಫಾ(ಸ) ಹೀಗೆ ಹೇಳಿದ್ದಾರೆ:

ಮೂರು ಗುಣಗಳು ಯಾರಲ್ಲಿ ಕಂಡುಬರುತ್ತವೆಯೋ, ಅವರು ಈಮಾನ್‌ನ ಮಾಧುರ್ಯವನ್ನು (ರುಚಿಯನ್ನು) ಅನುಭವಿಸಿದವರಾಗಿದ್ದಾರೆ. 1. ಅಲ್ಲಾಹ್ ತಆಲಾ ಮತ್ತು ಅವರ ರಸೂಲ್(ಸ) ಅವರು, ಅವನಿಗೆ ಇತರ ಎಲ್ಲರಿಗಿಂತಲೂ ಅತ್ಯಂತ ಪ್ರಿಯರಾಗಿರಬೇಕು. 2. ಒಬ್ಬ ವ್ಯಕ್ತಿಯನ್ನು ಕೇವಲ ಸರ್ವಶಕ್ತನಾದ ಅಲ್ಲಾಹನ ಸಂತೋಷ ಮತ್ತು ಮೆಚ್ಚುಗೆಯನ್ನು ಪಡೆಯುವ ಉದ್ದೇಶದಿಂದಲೇ ಪ್ರೀತಿಸಬೇಕು. 3. ಕುಫ್ರ್‌ನ ಕಡೆಗೆ ಮರಳಿ ಹೋಗುವುದನ್ನು, ಬೆಂಕಿಗೆ ಎಸೆಯಲ್ಪಡುವುದನ್ನು ಎಷ್ಟು ಅಸಹ್ಯಪಡುವನೋ ಅಷ್ಟೇ ಅಸಹ್ಯಪಡಬೇಕು.

ಹರ್ಝ್ರತ್ ಮಸೀಹ್ ಮೌಊದ್(ಅ)ರ ಅಧ್ಯಾಪನೆ

ನಮ್ಮ ದೇವನೇ ನಮ್ಮ ಸ್ವರ್ಗ

ಹರ್ಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾತು ವಸ್ಸಲಾಮ್ ಹೇಳುತ್ತಾರೆ:

ನಮ್ಮ ದೇವನೇ ನಮ್ಮ ಸ್ವರ್ಗ. ನಮ್ಮ ಅತ್ಯುನ್ನತ ಸಂತೋಷಗಳು ನಮ್ಮ ದೇವನಲ್ಲಿವೆ. ಏಕೆಂದರೆ ನಾವು ಅವನನ್ನು ನೋಡಿರುವೆವು ಮತ್ತು ಪ್ರತಿಯೊಂದು ಸೌಂದರ್ಯವನ್ನು ನಾವು ಅವನಲ್ಲಿ ಕಂಡಿರುವೆವು. ಜೀವವನ್ನು ಬಲಿಯರ್ಪಿಸುವುದರಿಂದ (ದೇವನೆಂಬ) ಈ ಸಂಪತ್ತು ಸಿಗಬಹುದಾದರೆ ಹಾಗೆ ಪಡೆಯಲು ಅದು (ಆ ಸಂಪತ್ತು) ಅರ್ಹವಾಗಿದೆ. ಒಬ್ಬನು ತನ್ನ ಅಸ್ತಿತ್ವವನ್ನೇ ಕಳೆದುಕೊಳ್ಳುವುದರಿಂದ ಪಡೆಯಬಹುದಾಗಿದ್ದರೆ ಹಾಗೆ ಖರೀದಿಸಲು ಯೋಗ್ಯವಾದ ಮಾಣಿಕ್ಯ ಇದಾಗಿದೆ.ಎಲೈ ಭಾಗ್ಯಹೀನರೇ, ನೀವು ಈ ಕಾರಂಜಿಯ ಕಡೆಗೆ ಓಡಿ ಬನ್ನಿರಿ. ಇದು ನಿಮ್ಮ ಬಾಯಾರಿಕೆಯನ್ನು ನೀಗಿಸುವುದು. ಇದು ನಿಮ್ಮನ್ನು ರಕ್ಷಿಸುವಂತಹ ಜೀವಜಲವನ್ನೀಯುವ ಕಾರಂಜಿಯಾಗಿದೆ.ನಾನೇನು ಮಾಡಲಿ? ಈ ಶುಭವಾರ್ತೆಯನ್ನು ಜನಹೃದಯಗಳಲ್ಲಿ ಹೇಗೆ ನೆಲೆವೂರುವಂತೆ ಮಾಡಲಿ? ಇವನೇ ನಿಮ್ಮ ದೇವನು ಎಂದು ಜನರು ಆಲಿಸುವಂತೆ ಮಾಡಲು ಯಾವ ಡೋಲು ಬಾರಿಸಿ ಪೇಟೆಗಳಲ್ಲಿ ಡಂಗುರ ಸಾರಲಿ? ಜನರು ಕಿವಿಗೊಟ್ಟು ಕೇಳುವಂತೆ ಮಾಡಲು ನಾನು ಯಾವ ಮದ್ದಿನಿಂದ ಚಿಕಿತ್ಸೆ ನಡೆಸಲಿ? ನೀವು ದೇವನಿಗೆ ಸೇರಿದವರಾಗುವಿರಾದರೆ, ದೇವನು ನಿಮ್ಮವನೇ ಆಗುವನು ಎಂದು ದೃಢವಾಗಿ ಅರಿತುಕೊಳ್ಳಿರಿ. **(ಕಿಶ್ತೀ ನೂಹ್; ರೂಹಾನೀ ಖಝಾಇನ್ ಸಂಪುಟ 19, ಪುಟ 21 – 22)**

ಮತ್ತೊಂದು ಸಂದರ್ಭದಲ್ಲಿ ಹರ್ಝ್ರತ್ ಮಸೀಹ್ ಮೌಊದ್(ಅ.ಸ.) ಅವರು ಹೀಗೆ ಹೇಳಿದ್ದಾರೆ:

"ಯಾವುದೇ ಅಸ್ತಿತ್ವವು ಅತ್ಯಂತ ಉನ್ನತ ಮಟ್ಟದಲ್ಲಿ ಅನಿವಾರ್ಯವೆಂದು ಪರಿಗಣಿಸಲ್ಪಟ್ಟಾಗ, ಅದು ಆರಾಧ್ಯವಾಗಿಬಿಡುತ್ತದೆ. ಅಂತಹ ಯಾವುದೇ ಪರ್ಯಾಯವಿಲ್ಲದ ಅಸ್ತಿತ್ವವು ಕೇವಲ ಅಲ್ಲಾಹನದ್ದಾಗಿದೆ. ಯಾವುದೇ ಮನುಷ್ಯನ ಅಥವಾ ಇತರ ಸೃಷ್ಟಿಯ ಅಸ್ತಿತ್ವದ ಬಗ್ಗೆ ಹೀಗೆ ಹೇಳಲು ಸಾಧ್ಯವಿಲ್ಲ." **(ಮಲ್ಫೂಝಾತ್, ಸಂಪುಟ 8, ಪುಟ 165, ಆವೃತ್ತಿ 1984)**

ತಫ್ಸೀರ್ ಕಬೀರ್‌ನಿಂದ ಉಲ್ಲೇಖ

ಮಾನವನ ಸೃಷ್ಟಿಯ ಮೂಲ ಉದ್ದೇಶವೇ ಅಲ್ಲಾಹನ ಸ್ಮರಣೆ ಮತ್ತು ಆತನ ಝಿಕ್ರ್ ಆಗಿದೆ

ಹರ್ಝ್ರತ್ ಮುಸ್ಲಿಹ್ ಮೌಊದ್ (ರ.ಅ.) ಅವರು ಹೇಳುತ್ತಾರೆ:

"ಮಾನವನ ಸೃಷ್ಟಿಯ ಮೂಲ ಉದ್ದೇಶವೇ ಅಲ್ಲಾಹನ ಸ್ಮರಣೆ ಮತ್ತು ಆತನ ಝಿಕ್ರ್ ಆಗಿರುವುದರಿಂದ, ಮನುಷ್ಯನಿಗೆ ಅಲ್ಲಾಹನು ದೊರೆತಾಗ ಅವನಲ್ಲಿ ಯಾವುದೇ ರೀತಿಯ ಹಂಬಲವಾಗಲಿ, ತವಕವಾಗಲಿ ಉಳಿಯುವುದಿಲ್ಲ. ಬದಲಾಗಿ, ಅವನಿಗೆ ಸಂಪೂರ್ಣ ನೆಮ್ಮದಿ ಮತ್ತು ಆತ್ಮತೃಪ್ತಿ ಲಭಿಸುತ್ತದೆ. ಯಾರು ಲೌಕಿಕ ಪ್ರಾಪಂಚಿಕ ವಿಷಯಗಳ ಬೆನ್ನತ್ತಿ ಹೋಗುತ್ತಾರೋ, ಅವರಿಗೆ ಎಷ್ಟೇ ಪ್ರಗತಿ ದೊರೆತರೂ ಅವರ ಮನದ ಹಂಬಲ ಮತ್ತು ಅತೃಪ್ತಿ ಹೆಚ್ಚುತ್ತಲೇ ಹೋಗುತ್ತದೆ. ಆದರೆ ಯಾರು ಅಲ್ಲಾಹನ ಕಡೆಗೆ ಸಾಗುತ್ತಾರೋ ಮತ್ತು ಎಷ್ಟು ಹೆಚ್ಚು ಆತನ ಕಡೆಗೆ ತಮ್ಮ ಗಮನವನ್ನು ಹರಿಸುತ್ತಾರೋ, ಅಷ್ಟೇ ಅವರ ಹೃದಯದ ನೆಮ್ಮದಿ ಹೆಚ್ಚುತ್ತಾ ಹೋಗುತ್ತದೆ. ಇದರಿಂದ, ಅಲ್ಲಾಹನ ಸ್ವರೂಪದ ಅರಿವನ್ನು ಪಡೆಯುವುದನ್ನೇ ಆತನು ನಮ್ಮ ಜೀವನದ ಮೂಲ ಉದ್ದೇಶವನ್ನಾಗಿ ನಿರ್ಧರಿಸಿದ್ದಾನೆ ಎಂಬುದು ಸಾಬೀತಾಗುತ್ತದೆ. ಆದ್ದರಿಂದ, ಆ ಉದ್ದೇಶವು ಈಡೇರಿದಾಗ ಮನುಷ್ಯನಿಗೆ ನಿಜವಾದ ನೆಮ್ಮದಿ ಲಭಿಸುತ್ತದೆ. ನಮ್ಮ ಸಂಸ್ಥಾನಗಳನ್ನೇ ಉದಾಹರಣೆಯಾಗಿ ತೆಗೆದುಕೊಳ್ಳಿ. ಅವುಗಳ ರಕ್ಷಣೆಯು ಸರ್ಕಾರದ ಮೂಲಕವಾಗಿದ್ದರೂ ಸಹ, ಕೆಲವು ರಾಜಮಹಾರಾಜರ ಭಯದ ಸ್ಥಿತಿ ಎಷ್ಟಿರುತ್ತದೆ ಎಂದರೆ, ವಿದೇಶದಿಂದ ಮುಚ್ಚಿದ ವ್ಯವಸ್ಥೆಯಲ್ಲಿ ನೀರನ್ನು ತರಿಸಲಾಗುತ್ತದೆ. ಅದನ್ನು ಅವರ ಮುಂದೆ ತೆರೆದರೂ ಸಹ, ಮೊದಲು ಇತರರಿಗೆ ಕುಡಿಯಲು ನೀಡಲಾಗುತ್ತದೆ. ಆನಂತರವೇ ರಾಜರು ಕುಡಿಯುತ್ತಾರೆ. ಅದೇ ರೀತಿ, ಅವರ ಆಹಾರದ ವಿಷಯದಲ್ಲಿಯೂ ಅನೇಕ ಮುನ್ನೆಚ್ಚರಿಕೆಗಳನ್ನು ವಹಿಸಲಾಗುತ್ತದೆ. ಮೊದಲು ಅಡುಗೆ ಮಾಡಿದ ವ್ಯಕ್ತಿಗೇ

(ಪುಟ ಸಂಖ್ಯೆ–12 ರಲ್ಲಿ ಮುಂದುವರಿಸಲಾಗಿದೆ)

ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಸರ್ವಶಕ್ತನಾದ ಅಲ್ಲಾಹನು ಹುಝೂರ್ ಅವರಿಗೆ ದೀರ್ಘ ಮತ್ತು ಸಕ್ರಿಯ ಜೀವನವನ್ನು ನೀಡಲಿ ಮತ್ತು ಪ್ರತಿಕ್ಷಣ ಸಂರಕ್ಷಿಸಲಿ– **ಆಮೀನ್**

ಸಂಪಾದಕೀಯ

لَا إِلٰهَ إِلَّا اللّٰهُ مُحَمَّدٌ رَّسُوْلُ اللّٰهِ

ಹಝ್ರತ್ ಖಲೀಫತುಲ್ ಮಸೀಹ್ ಅಲ್‌ಖಾಮಿಸ್ ಅಯ್ಯದುಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಅವರ ಜಲ್ಸಾ ಸಾಲಾನಾ ಯುಕೆ 2026ರ ಸಮಾರೋಪ ಭಾಷಣದ ಸಾರಾಂಶ

ತಶಹ್ಹುದ್, ತಅವ್ವುಝ್ ಮತ್ತು ಸೂರಃ ಅಲ್‌ಫಾತಿಹಾ ಪಠಣದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಅಲ್‌ಖಾಮಿಸ್ (ಅಯ್ಯದುಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್) ಅವರು ಹೀಗೆ ಉಪದೇಶಿಸಿದರು:

ಅಲ್ಲಾಹನು ನಮ್ಮ ಮೇಲೆ ಅಪಾರ ಉಪಕಾರವನ್ನು ಮಾಡಿದ್ದಾನೆ. ಅಂದರೆ, ಪವಿತ್ರ ಪ್ರವಾದಿ ಹಝ್ರತ್ ಮುಹಮ್ಮದ್(ಸ) ಅವರ ಸತ್ಯನಿಷ್ಠ ಅನುಯಾಯಿಯಾದ ಮಸೀಹ್ ಮತ್ತು ಮಹ್ದಿ (ಅ.ಸ.) ಅವರನ್ನು ಇಸ್ಲಾಮಿನ ಬೋಧನೆಗಳನ್ನು ಜಗತ್ತಿನಾದ್ಯಂತ ಹರಡಲು ಕಳುಹಿಸಲಾದ ಈ ಕಾಲದಲ್ಲಿ ನಾವು ಜನಿಸಿದ್ದೇವೆ. ಆಗಮಿಸಿದ ಈ ಮಸೀಹ್ ಮತ್ತು ಮಹ್ದಿ (ಅ.ಸ.) ಅವರು ತಮ್ಮ ಸಂಪೂರ್ಣ ಪ್ರಯತ್ನದ ಮೂಲಕ ಅಂತಹ ಒಂದು ಜಮಾಅತ್ ಅನ್ನು ರೂಪಿಸಬೇಕಾಗಿತ್ತು; ಅದರ ಪ್ರತಿಯೊಬ್ಬ ಸದಸ್ಯನೂ ಸಂಪೂರ್ಣ ಏಕದೇವೋಪಾಸಕನಾಗಿರಬೇಕು. ಶಿರ್ಕ್ ಅನ್ನು ನಿರ್ಮೂಲನೆ ಮಾಡಲು ತನ್ನ ವೈಯಕ್ತಿಕ ಜೀವನದಲ್ಲಿ ಮಾತ್ರವಲ್ಲದೆ, ಇಡೀ ಜಗತ್ತನ್ನು ಏಕೈಕ ದೇವನ ಧ್ವಜದಡಿ ತರಲು ಸಹ ನಿರಂತರ ಪ್ರಯತ್ನಿಸಬೇಕು.

ಈ ಉದ್ದೇಶಕ್ಕಾಗಿ ಹಝ್ರತ್ ಮಸೀಹ್ ಮೌಊದ್ (ಅ.ಸ.) ಅವರು ಒಂದು ಪರಿಶುದ್ಧ ಜಮಾಅತ್ ಅನ್ನು ಸ್ಥಾಪಿಸಿದರು. ಹತ್ತು ಷರತ್ತುಗಳನ್ನು ಒಳಗೊಂಡ ಬೈಅತ್‌ನ ಮೂಲಕ ತಮ್ಮ ಅನುಯಾಯಿಗಳಿಂದ ಪ್ರತಿಜ್ಞೆ ಸ್ವೀಕರಿಸಿದರು. ನಾವು ಅಹ್ಮದೀಯ ಜಮಾಅತ್‌ಗೆ ಸೇರ್ಪಡೆಯಾಗುವಾಗಲೂ ಇದೇ ಬೈಅತ್‌ನ ಪ್ರತಿಜ್ಞೆಗಳನ್ನು ಪುನರುಚ್ಚರಿಸುತ್ತೇವೆ.

ಆ ಬೈಅತ್‌ನ ಷರತ್ತುಗಳ ಸಾರಾಂಶ ಹೀಗಿದೆ: ಜೀವಿತಾವಧಿಯುದ್ದಕ್ಕೂ ಶಿರ್ಕ್‌ನಿಂದ ಸಂಪೂರ್ಣವಾಗಿ ದೂರವಿರುವುದು. ಸುಳ್ಳು, ವ್ಯಭಿಚಾರ, ಕೆಟ್ಟ ದೃಷ್ಟಿ, ದುಷ್ಕೃತ್ಯಗಳು, ಅನೈತಿಕತೆ, ದೌರ್ಜನ್ಯ, ವಿಶ್ವಾಸಘಾತುಕತನ, ಅಶಾಂತಿ ಮತ್ತು ಬಂಡಾಯದಿಂದ ದೂರವಿರುವುದು. ಇಂದ್ರಿಯಾಸಕ್ತಿಗಳು ಮತ್ತು ಮನಸ್ಸಿನ ದುಷ್ಪ್ರೇರಣೆಗಳಿಗೆ ಒಳಗಾಗದಿರುವುದು. ಐದು ಹೊತ್ತಿನ ನಮಾಝ್‌ಗಳನ್ನು ನಿಯಮಿತವಾಗಿ ನಿರ್ವಹಿಸುವುದರ ಜೊತೆಗೆ, ಆಧ್ಯಾತ್ಮಿಕ ಪ್ರಗತಿಗಾಗಿ ತಹಜ್ಜುದ್ ನಮಾಝ್‌ನ್ನೂ ನಿರ್ವಹಿಸಲು ಪ್ರಯತ್ನಿಸುವುದು. ಪವಿತ್ರ ಪ್ರವಾದಿ ಮುಹಮ್ಮದ್(ಸ) ಅವರ ಮೇಲೆ ದರೂದ್ ಕಳುಹಿಸುವುದು ಹಾಗೂ ಪ್ರತಿದಿನ ಪಾಪಗಳ ಕ್ಷಮೆಗಾಗಿ ಅಲ್ಲಾಹನಲ್ಲಿ ಪ್ರಾರ್ಥಿಸುವುದು. ಸರ್ವಶಕ್ತನಾದ ಅಲ್ಲಾಹನು ಮಾಡಿದ ಉಪಕಾರಗಳನ್ನು ಸ್ಮರಿಸಿ, ಆತನನ್ನು ಸದಾ ಸ್ತುತಿಸುವುದು. ಸಾಮಾನ್ಯವಾಗಿ ಸಮಸ್ತ ಮಾನವಕುಲಕ್ಕೂ, ವಿಶೇಷವಾಗಿ ಮುಸ್ಲಿಮರಿಗೂ, ಸ್ವಾರ್ಥಪರ ಆವೇಶಗಳಿಂದ ಯಾವುದೇ ರೀತಿಯ ತೊಂದರೆ ಉಂಟುಮಾಡದಿರುವುದು. ಕೆಟ್ಟ ಸಂಪ್ರದಾಯಗಳು ಮತ್ತು ಮನಸ್ಸಿನ ದುರುದ್ದೇಶಪೂರ್ಣ ಆಸೆಗಳಿಂದ ದೂರವಿರುವುದು. ಅಹಂಕಾರವನ್ನು ತೊರೆದು ವಿನಯ, ಸೌಜನ್ಯ, ಸಹನೆ ಮತ್ತು ಸರಳತೆಯನ್ನು ಅಳವಡಿಸಿಕೊಳ್ಳುವುದು. ಧರ್ಮದ ಗೌರವ ಮತ್ತು ಇಸ್ಲಾಮಿನ ಮೇಲಿನ ಸಹಾನುಭೂತಿಯನ್ನು ತನ್ನ ಪ್ರಾಣ, ಸಂಪತ್ತು, ಗೌರವ ಮತ್ತು ಮಕ್ಕಳಿಗಿಂತಲೂ ಹೆಚ್ಚು ಪ್ರೀತಿಸುವುದು. ಹಝ್ರತ್ ಮಸೀಹ್ ಮೌಊದ್ (ಅ.ಸ.) ಅವರು ನೀಡುವ ತೀರ್ಮಾನಗಳನ್ನು ಹೃದಯಪೂರ್ವಕವಾಗಿ ಸ್ವೀಕರಿಸುವುದು.

ಹಝ್ರತ್ ಹುಝೂರ್ ಅನ್ವರ್ ಅಯ್ಯದುಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಅವರು ಹೇಳಿದರು:

ಇದರಲ್ಲಿ ಖಿಲಾಫತ್‌ಗೆ ಸಂಪೂರ್ಣ ವಿಧೇಯರಾಗಿರುವುದೂ ಸೇರಿದೆ. ಏಕೆಂದರೆ ಸರ್ವಶಕ್ತನಾದ ಅಲ್ಲಾಹನು ನೀಡಿರುವ ವಾಗ್ದಾನಗಳಿಗೆ ಅನುಗುಣವಾಗಿ, ಖಿಲಾಫತ್ ವ್ಯವಸ್ಥೆಯು ಹಝ್ರತ್ ಮಸೀಹ್ ಮೌಊದ್ (ಅ.ಸ.) ಅವರ ಕಾರ್ಯಗಳನ್ನು ಮುಂದುವರಿಸುವುದಕ್ಕಾಗಿಯೇ ಇದೆ.

ಈ ವಿಷಯವನ್ನು ನಾನು ಹಿಂದೆ ಕೂಡ ಹಲವು ಬಾರಿ ವಿವರಿಸಿದ್ದೇನೆ ಮತ್ತು ಈ ಕುರಿತು ಪುಸ್ತಕಗಳೂ ಪ್ರಕಟವಾಗಿವೆ. ಆದರೂ ಈ ವಿಷಯದ ಮಹತ್ವವನ್ನು ಗಮನದಲ್ಲಿಟ್ಟುಕೊಂಡು ಇಂದು ಮತ್ತೊಮ್ಮೆ ಇದರ ಬಗ್ಗೆ ಕೆಲವು ಮಾತುಗಳನ್ನು ಹೇಳುತ್ತೇನೆ.

ಮೊದಲ ಬೈಅತ್ ಷರತ್ತಿನಲ್ಲಿ ಶಿರ್ಕ್‌ನಿಂದ ದೂರವಿರುವುದನ್ನು ಉಲ್ಲೇಖಿಸಲಾಗಿದೆ. ಈ ಕುರಿತು ಹಝ್ರತ್ ಮಸೀಹ್ ಮೌಊದ್ (ಅ.ಸ.) ಅವರು ಹೀಗೆ ಹೇಳಿದ್ದಾರೆ: ಮಾನವನ ಸೃಷ್ಟಿಯ ಮೂಲ ಉದ್ದೇಶವೇ ಅವನು ಸಂಪೂರ್ಣವಾಗಿ ದೇವನಿಗಾಗಿ ತನ್ನನ್ನು ಸಮರ್ಪಿಸಿಕೊಳ್ಳುವುದಾಗಿದೆ. ಪಾಪಗಳು ಅನೇಕ ವಿಧಗಳಲ್ಲಿವೆ; ಅವುಗಳಿಗೂ ಹಲವಾರು ಶಾಖೆಗಳಿವೆ. ಆದರೆ ಅವುಗಳಲ್ಲಿ ಅತ್ಯಂತ ಭಯಾನಕವಾದ ಪಾಪವೆಂದರೆ ಶಿರ್ಕ್. ದುರದೃಷ್ಟವಂತ ಮನುಷ್ಯನು ಶಿರ್ಕ್‌ನಲ್ಲಿ ಎಷ್ಟು ಹೆಚ್ಚಾಗಿ ತೊಡಗಿಸಿಕೊಳ್ಳುತ್ತಾನೋ, ಅಷ್ಟು ತನ್ನ ನಿಜವಾದ ಉದ್ದೇಶದಿಂದ ದೂರವಾಗುತ್ತಾನೆ. ಅಂತಿಮವಾಗಿ ಅವನು ಪತನಗೊಂಡು ದುಃಖ, ಸಂಕಟ ಮತ್ತು ವಿವಿಧ ಕಷ್ಟಗಳಿಂದ ತುಂಬಿದ ಅಧೋಗತಿಯ ಸ್ಥಿತಿಗೆ ತಲುಪುತ್ತಾನೆ. ಅದನ್ನೇ ನರಕವೆಂದೂ ಕರೆಯಲಾಗುತ್ತದೆ.

ಪವಿತ್ರ ಪ್ರವಾದಿ ಮುಹಮ್ಮದ್(ಸ) ಅವರೂ ಜನರಿಂದ ಬೈಅತ್ ಸ್ವೀಕರಿಸುವಾಗ ಶಿರ್ಕ್‌ನಿಂದ ಸಂಪೂರ್ಣವಾಗಿ ದೂರವಿರುವ ಪ್ರತಿಜ್ಞೆಯನ್ನು ಪಡೆಯುತ್ತಿದ್ದರು. ಆದ್ದರಿಂದ ನಾವು ನಮ್ಮ ಬೈಅತ್‌ನ ಪ್ರತಿಜ್ಞೆಯಿಂದ ದೂರವಾಗುವಂತಹ ಯಾವುದೇ ಕೃತ್ಯವನ್ನು ಎಂದಿಗೂ ಮಾಡದಿರಲು ಸದಾ ಪ್ರಯತ್ನಿಸಬೇಕು.

ಹಝ್ರತ್ ಮಸೀಹ್ ಮೌಊದ್(ಅ.ಸ.) ಅವರು ಮತ್ತಷ್ಟು ವಿವರಿಸುತ್ತಾ, ಶಿರ್ಕ್‌ನ ಪ್ರತಿಯೊಂದು ರೂಪದಿಂದಲೂ ದೂರವಿರಬೇಕು ಎಂದು ಹೇಳಿದ್ದಾರೆ. ಸೂರ್ಯ, ಚಂದ್ರ, ನಕ್ಷತ್ರಗಳು, ಗಾಳಿ, ಬೆಂಕಿ, ನೀರು ಅಥವಾ ಭೂಮಿಯಲ್ಲಿರುವ ಯಾವುದೇ ವಸ್ತುವನ್ನು ಆರಾಧ್ಯವೆಂದು ಪರಿಗಣಿಸಬಾರದು. ಅದೇ ರೀತಿ, ಪ್ರಾಪಂಚಿಕ ಸಾಧನಗಳು ಮತ್ತು ಸಂಪನ್ಮೂಲಗಳಿಗೆ ಅತಿಯಾದ ಮಹತ್ವ ನೀಡಿ, ಅವುಗಳ ಮೇಲೆ ಅಲ್ಲಾಹನಿಗೆ ಮಾತ್ರ ಸಲ್ಲಬೇಕಾದ ನಂಬಿಕೆಯನ್ನು ಇಡುವುದೂ ಶಿರ್ಕ್‌ನ ಒಂದು ರೂಪವಾಗಿದೆ. ಹಾಗೆಯೇ, ತನ್ನ ಸ್ವಂತ ಸಾಮರ್ಥ್ಯ ಮತ್ತು ಪ್ರಯತ್ನವನ್ನೇ ಎಲ್ಲವೂ ಎಂದು ಭಾವಿಸುವುದೂ ಶಿರ್ಕ್‌ನ ಒಂದು ವಿಧವಾಗಿದೆ.

ಸೂರಃ ಅಲ್‌ಇಖ್ಲಾಸ್ ಕುರಿತು ಹಝ್ರತ್ ಮಸೀಹ್ ಮೌಊದ್ (ಅ.ಸ.) ಅವರು ಹೇಳುತ್ತಾರೆ: ಈ ಚಿಕ್ಕ ಸೂರಃ ಅತ್ಯಂತ ಸುಂದರವಾದ ರೀತಿಯಲ್ಲಿ ಮಾನವನನ್ನು ಎಲ್ಲ ವಿಧದ ಶಿರ್ಕ್‌ನಿಂದ ದೂರವಿರಿಸಿ, ಅಲ್ಲಾಹ್ ತಆಲಾ ಅವರ ಪವಿತ್ರತೆಯನ್ನು ಎಲ್ಲ ದೋಷಗಳಿಂದ ಮುಕ್ತವೆಂದು ಸ್ಪಷ್ಟಪಡಿಸುತ್ತದೆ.

ಹಝ್ರತ್ ಪೈಗಂಬರ್(ಸ) ಅವರ ಪುತ್ರ ಹಝ್ರತ್ ಇಬ್ರಾಹೀಮ್ ಅವರ ನಿಧನದ ಸಂದರ್ಭದಲ್ಲಿ ಸೂರ್ಯಗ್ರಹಣ ಸಂಭವಿಸಿತು. ಆಗ ಕೆಲವರು ಅವರ ನಿಧನದ ಕಾರಣದಿಂದಲೇ ಗ್ರಹಣ ಉಂಟಾಯಿತು ಎಂದು ಹೇಳಿದರು. ಆದರೆ ಪವಿತ್ರ ಪ್ರವಾದಿ(ಸ) ಅವರು ಹೀಗೆ ಸ್ಪಷ್ಟಪಡಿಸಿದರು: ಸೂರ್ಯ ಮತ್ತು ಚಂದ್ರ ಅಲ್ಲಾಹನ ನಿದರ್ಶನಗಳಲ್ಲಿ ಸೇರಿವೆ. ಯಾರ ಜನನ ಅಥವಾ ಮರಣದ ಕಾರಣದಿಂದಲೂ ಅವುಗಳಿಗೆ ಗ್ರಹಣ ಸಂಭವಿಸುವುದಿಲ್ಲ.

ಹಝ್ರತ್ ಮಸೀಹ್ ಮೌಊದ್ (ಅ.ಸ.) ಅವರು ಶಿರ್ಕ್‌ನ ಮೂರು ವಿಧಗಳನ್ನು ವಿವರಿಸಿದ್ದಾರೆ:

1. ವಿಗ್ರಹಾರಾಧನೆ ಸೇರಿದಂತೆ ಪ್ರತ್ಯಕ್ಷವಾದ ಶಿರ್ಕ್. 2. ಪ್ರಾಪಂಚಿಕ ಸಾಧನಗಳು ಮತ್ತು ಕಾರಣಗಳ ಮೇಲೆ ಮಿತಿಮೀರಿದ ಭರವಸೆ ಇಡುವುದು. 3. ಅಲ್ಲಾಹ್ ತಆಲಾ ಅವರ ಅಸ್ತಿತ್ವದ ಎದುರು ತನ್ನ ಸ್ವಂತ ಅಸ್ತಿತ್ವಕ್ಕೂ ಸ್ವತಂತ್ರ ಮಹತ್ವವಿದೆ ಎಂದು ಭಾವಿಸುವುದು.

ಇಂದಿನ ಭೌತಿಕ ಪ್ರಗತಿಯ ಯುಗದಲ್ಲಿ ಸಾಧನಗಳ ಮೇಲಿನ ಅತಿಯಾದ ಅವಲಂಬನೆ ಎಂಬ ಶಿರ್ಕ್ ಹೆಚ್ಚಾಗಿದೆ. "ಲಾ ಇಲಾಹ ಇಲ್ಲಲ್ಲಾಹ್" ಎಂಬುದು ತೌಹೀದ್‌ನ ಘೋಷಣೆಯಾಗಿದೆ. ಇದರ ಅರ್ಥ, ಅಲ್ಲಾಹ್ ತಆಲಾ ಹೊರತುಪಡಿಸಿ ಬೇರೆ ಯಾರೂ ಆರಾಧನೆಗೆ ಮತ್ತು ನಿಜವಾದ ವಿಧೇಯತೆಗೆ ಅರ್ಹರಲ್ಲ ಎಂಬುದಾಗಿದೆ. ಹಝ್ರತ್ ಪೈಗಂಬರ್(ಸ) ಅವರು ಅಲ್ಲಾಹನಿಂದ ದೊರೆತ ಮಾರ್ಗದರ್ಶನವನ್ನು ಮಾನವಕುಲಕ್ಕೆ ತಲುಪಿಸುವವರಾಗಿದ್ದಾರೆ. ಅಲ್ಲಾಹನ ಕಡೆಯಿಂದ ಬರುವ ಮಾರ್ಗದರ್ಶನವು ಅವರ ಮೂಲಕವೇ ನಮಗೆ ತಲುಪುತ್ತದೆ.


ಆದ್ದರಿಂದ ಪ್ರತಿಯೊಂದು ಕೆಲಸ ಮಾಡುವಾಗಲೂ, ಪ್ರತಿಯೊಂದು ಮಾತನ್ನಾಡುವಾಗಲೂ, ಆ ಮಾತು ಅಥವಾ ಕಾರ್ಯವು ನಮ್ಮನ್ನು ಅಲ್ಲಾಹನಿಂದ ದೂರಮಾಡಿ ಶೈತಾನನಿಗೆ ಹತ್ತಿರ ಕೊಂಡೊಯ್ಯುವಂತಿರಬಾರದು ಎಂಬ ಎಚ್ಚರಿಕೆ ನಮ್ಮಲ್ಲಿರಬೇಕು.

ಸರ್ವಶಕ್ತನಾದ ಅಲ್ಲಾಹನು ಹಝ್ರತ್ ಮಸೀಹ್ ಮೌಊದ್ (ಅ.ಸ.) ಅವರಿಗೆ ವಿಜಯಗಳನ್ನು ನೀಡುವ ವಾಗ್ದಾನ ಮಾಡಿದ್ದಾರೆ ಮತ್ತು ಖಂಡಿತವಾಗಿಯೂ ಅವುಗಳನ್ನು ನೀಡುವರು. ಆದರೆ ಆ ವಿಜಯಗಳ ಭಾಗವಾಗಬೇಕಾದರೆ ನಾವು ಪರಿಶುದ್ಧ ಹೃದಯದಿಂದ ಅಲ್ಲಾಹನ ಏಕತ್ವವನ್ನು ಘೋಷಿಸುವವರಾಗಬೇಕು.

ಹಝ್ರತ್ ಮುಸ್ಲಿಹ್ ಮೌಊದ್ (ರ.ಅ.) ಅವರು ಹೀಗೆ ಹೇಳಿದ್ದಾರೆ: "ಓ ಅಹ್ಮದೀ ಸಮುದಾಯವೇ! ಅಲ್ಲಾಹ್ ನಮ್ಮ ಸಂಬಂಧಿಕನಲ್ಲ. ಶಿರ್ಕ್‌ನಿಂದ ದೂರವಿರಿ ಮತ್ತು ಆತನನ್ನು ಆರಾಧಿಸಿರಿ; ಆಗ ಆತನು ನಿಮ್ಮ ರಕ್ಷಕನಾಗುವನು. ನೋಹ್ (ಅ.ಸ.) ಅವರ ಪುತ್ರನನ್ನೂ ಅಲ್ಲಾಹ್ ಲೆಕ್ಕಿಸಲಿಲ್ಲ ಎಂಬುದನ್ನು ಗಮನಿಸಿರಿ. ಆದ್ದರಿಂದ ನೀವು ಅಹ್ಮದೀಯರೆಂದು ಕರೆಯಿಸಿಕೊಳ್ಳಲು ಅರ್ಹರಾಗುವಂತಹ ಕಾರ್ಯಗಳನ್ನು ಮಾಡಿರಿ."

ಹಝ್ರತ್ ಲುಕ್ಮಾನ್ (ಅ.ಸ.) ಅವರೂ ತಮ್ಮ ಪುತ್ರನಿಗೆ ಗುಪ್ತ ಶಿರ್ಕ್‌ನಿಂದ

(ಪುಟ ಸಂಖ್ಯೆ 08 ರಲ್ಲಿ ಮುಂದುವರಿಸಲಾಗಿದೆ)



ಖುತ್‌ಬ ಜುಮುಅ

'ತವಕ್ಕಲ್ ಅಲಲ್ಲಾಹ್' (ಅಲ್ಲಾಹನ ಮೇಲಿನ ಭರವಸೆ) ಕುರಿತು ಹಝ್ರತ್ ಪೈಗ಼ಂಬರ್(ಸ)ರ ಪವಿತ್ರ ಜೀವನ ಚರಿತ್ರೆ

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಇಸ್ಲಾಮಾಬಾದ್ (ಯು.ಕೆ) ಯ **'ಮಸ್ಜಿದ್ ಮುಬಾರಕ್'** ನಿಂದ **18-09-2026** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ - بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعَالَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔

اِيَّاكَ نَعْبُدُ وَاِيَّاكَ نَسْتَعِيْنُ ۔ اِهْدِنَا الصِّرَاطَ الْمُسْتَقِيْمَ ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

ಹಝ್ರತ್ ಪೈಗಂಬರ್(ಸ) ಅಲ್ಲಾಹನ ಮೇಲಿನ ತವಕ್ಕುಲ್ ಕುರಿತು ಪ್ರಸ್ತಾಪಿಸುತ್ತಾ, ಕಳೆದ ಖುತ್ಬದಲ್ಲಿ ನಾನು ಅವರು ಮಕ್ಕಾದಿಂದ ಹಿಜ್ರತ್ ಮಾಡಿದ ಘಟನೆಗಳನ್ನು ವಿವರಿಸಿದ್ದೆ. ಈ ಪ್ರಯಾಣದ ಕೆಲವು ಹೆಚ್ಚಿನ ವಿವರಗಳು ಸಹ ಇವೆ. ಇವುಗಳ ಉಲ್ಲೇಖ ಚರಿತ್ರೆಯಲ್ಲಿ ಸಿಗುತ್ತದೆ, ಇದರಿಂದ ಪ್ರವಾದಿ(ಸ)ರ ತವಕ್ಕುಲ್‌ನ ಮತ್ತೊಂದು ಮಹಾನ್ ಶ್ರೇಷ್ಠತೆಯು ಎದ್ದುಕಾಣುತ್ತದೆ.

ವರದಿಗಳಲ್ಲಿ ಬಂದಿರುವಂತೆ, ಈ ಹಿಜ್ರತ್ ಸಂದರ್ಭದಲ್ಲಿ ಸುರಾಕಾ ಬಿನ್ ಮಾಲಿಕ್ ಎಂಬ ವ್ಯಕ್ತಿಯು ಬಹುಮಾನದ ಆಮಿಷದಿಂದ ನಬಿ ಕರೀಮ್(ಸ)ರನ್ನು ಹಿಂಬಾಲಿಸಲು ನಿರ್ಧರಿಸಿದನು. ಈ ಘಟನೆಯನ್ನು ಸುರಾಕಾ ಬಿನ್ ಮಾಲಿಕ್ ಸ್ವತಃ ವಿವರಿಸಿದ್ದಾರೆ. ಅವರು ನಂತರ ಮುಸಲ್ಮಾನರಾದರು ಮತ್ತು ಇಸ್ಲಾಂ ಸ್ವೀಕರಿಸಿದ ನಂತರ ಅವರೇ ಸ್ವತಃ ಈ ಘಟನೆಯನ್ನು ವಿವರಿಸುತ್ತಾ ಹೀಗೆ ಹೇಳುತ್ತಾರೆ: 'ಖುರೈಶ್ ಕಾಫಿರರ ದೂತರು ನಮ್ಮ ಬಳಿ ಬಂದರು. ರಸೂಲುಲ್ಲಾಹ್(ಸ) ಮತ್ತು ಹಝ್ರತ್ ಅಬೂಬಕರ್(ರ) ಇವರಿಬ್ಬರಲ್ಲಿ ಯಾರನ್ನಾದರೂ ಕೊಂದರೆ ಅಥವಾ ಸೆರೆಹಿಡಿದು ತಂದರೆ ಅವರಿಗೆ ರಕ್ತದ ಬೆಲೆಯನ್ನು ಖುರೈಶಿಯರು ನಿಗದಿಪಡಿಸಿದ್ದರು.

ಸುರಾಕಾ ಹೇಳುತ್ತಾರೆ: ನಾನು ನನ್ನ ಗೋತ್ರವಾದ ಬನೂ ಮುದ್ಲಿಜ್‌ನ ಒಂದು ಸಭೆಯಲ್ಲಿ ಕುಳಿತಿದ್ದೆ, ಆಗ ಒಬ್ಬ ವ್ಯಕ್ತಿಯು ಅಲ್ಲಿಗೆ ಬಂದು ನಮ್ಮ ಬಳಿ ನಿಂತನು. ನಾವು ಕುಳಿತಿದ್ದೆವು. ಅವನು ಹೇಳಿದನು, 'ಹೇ ಸುರಾಕಾ, ನಾನು ಕರಾವಳಿಯ ಕಡೆಗೆ ಕೆಲವು ನೆರಳುಗಳನ್ನು ನೋಡಿದೆ ಅಥವಾ ಮೂರು ವ್ಯಕ್ತಿಗಳ ಒಂದು ತಂಡ ಹೋಗುತ್ತಿರುವುದನ್ನು ನೋಡಿದೆ. ಅದು ಖಂಡಿತವಾಗಿಯೂ ಮುಹಮ್ಮದ್(ಸ) ಮತ್ತು ಅವರ ಸಹಚರರೇ ಆಗಿರಬೇಕು ಎಂದು ನನಗೆ ಅನಿಸಿತು.'

ಸುರಾಕಾ ಬಿನ್ ಮಾಲಿಕ್ ಹೇಳುತ್ತಾರೆ: ಅದು ಖಂಡಿತವಾಗಿಯೂ ಮುಹಮ್ಮದ್(ಸ)ರ ತಂಡವೇ ಆಗಿರಬೇಕು ಎಂದು ನಾನು ಅರಿತುಕೊಂಡೆ. ಆದರೆ ಆ ಬಹುಮಾನದಲ್ಲಿ ಬೇರೆ ಯಾರಾದರೂ ನನ್ನೊಡನೆ ಪಾಲುದಾರರಾಗುವುದು ನನಗೆ ಇಷ್ಟವಿರಲಿಲ್ಲ. ಆದ್ದರಿಂದ ನಾನು ತಕ್ಷಣವೇ ಪರಿಸ್ಥಿತಿಯನ್ನು ನಿಭಾಯಿಸಿ, ಆ ಸುದ್ದಿ ತಂದವನಿಗೆ ಸುಮ್ಮನಿರುವಂತೆ ಕಣ್ಣಿನಿಂದಲೇ ಸನ್ನೆ ಮಾಡಿದೆ ಮತ್ತು ನಾನೇ ಹೀಗೆ ಹೇಳಿದೆ: 'ಇಲ್ಲ, ಇಲ್ಲ, ಅದು ಮುಹಮ್ಮದ್‌ರ ತಂಡವಾಗಿರಲು ಸಾಧ್ಯವಿಲ್ಲ. ನೀನು ಯಾರ ಬಗ್ಗೆ ಹೇಳುತ್ತಿದ್ದೀಯೋ ಆ ಜನರು ಈಗಷ್ಟೇ ನಮ್ಮ ಮುಂದಿನಿಂದ ಹಾದುಹೋದರು, ಅವರು ಬೇರೊಂದು ಗೋತ್ರದವರು, ತಮ್ಮ ಕಳೆದುಹೋದ ಒಂಟೆಯನ್ನು ಹುಡುಕಿಕೊಂಡು ಹೋಗುತ್ತಿದ್ದಾರೆ.'

ಸುರಾಕಾ ಹೇಳುತ್ತಾರೆ: ಯಾರಿಗೂ ಅನುಮಾನ ಬಾರದಿರಲಿ ಎಂದು ನಾನು ಸ್ವಲ್ಪ ಹೊತ್ತು ಅದೇ ಸಭೆಯಲ್ಲಿ ಕುಳಿತಿದ್ದೆ. ನಂತರ ನನ್ನ ಓರ್ವ ದಾಸಿಗೆ ನನ್ನ ವೇಗದ ಕುದುರೆಯನ್ನು ತೆಗೆದುಕೊಂಡು ಮನೆಯ ಹಿಂದಿನ ಒಂದು ಜಾಗದಲ್ಲಿ ನಿಲ್ಲಿಸಿ ನನಗಾಗಿ ಕಾಯುವಂತೆ ಹೇಳಿದೆ. ಸ್ವಲ್ಪ ಸಮಯದ ನಂತರ ನಾನು ಸ್ವತಃ ಅಲ್ಲಿಗೆ ತಲುಪಿದೆ. ಅವರು ಹೇಳುತ್ತಾರೆ: 'ನಾನು ಶಕುನವನ್ನು ನೋಡಿದೆ, ಅದು ಆ ಪ್ರಯಾಣದ ಪರವಾಗಿರಲಿಲ್ಲ; ಅದಕ್ಕೆ ವಿರುದ್ಧವಾಗಿತ್ತು, ಆದರೆ ನಾನು ಅದನ್ನು ಲೆಕ್ಕಿಸದೆ ಕುದುರೆಯನ್ನು ವೇಗವಾಗಿ ಓಡಿಸಿದೆ, ಅದು ಗಾಳಿಯಂತೆ ಹಾರಿತು. ನಾನು ಆ ತಂಡವನ್ನು ವೇಗವಾಗಿ ಹಿಂಬಾಲಿಸಲು ಪ್ರಾರಂಭಿಸಿದೆ, ಅದು ಹಝ್ರತ್ ಮುಹಮ್ಮದ್ ಮುಸ್ತಫಾ(ಸ)ರ ತಂಡವೇ ಆಗಿತ್ತು ಎಂದು ನಾನು ದೃಢವಾಗಿ ನಂಬಿದ್ದೆ.'

ಸುರಾಕಾ ಹೇಳುತ್ತಾರೆ: ಬಹುಬೇಗನೆ ನಾನು ಆ ತಂಡದ ಹತ್ತಿರ ತಲುಪಿದೆ. ನಾನು ಅವರಿಂದ ಸ್ವಲ್ಪವೇ ದೂರದಲ್ಲಿದ್ದೆ, ಅಷ್ಟರಲ್ಲಿ ನನ್ನ ಕುದುರೆಯು ಅಸಾಮಾನ್ಯವಾಗಿ ಎಡವಿತು ಮತ್ತು ನಾನು ಅದರಿಂದ ಕೆಳಗೆ ಬಿದ್ದೆ. ನಂತರ ನಾನು ಎದ್ದುನಿಂತು ಶಕುನವನ್ನು ನೋಡಿದೆ, ಆಗಲೂ ಶಕುನವು ನನ್ನ ಇಚ್ಛೆಯ ವಿರುದ್ಧವಾಗಿತ್ತು. ಆದರೂ ನಾನು ಮುಹಮ್ಮದ್(ಸ)ರನ್ನು ಮರಳಿ ಹಿಡಿದೊಯ್ದು ನೂರು ಒಂಟೆಗಳ ಬಹುಮಾನವನ್ನು ಪಡೆಯಬೇಕೆಂದು ಬಯಸಿದ್ದೆ.

ಮತ್ತೆ ನಾನು ಎದ್ದು ಕುದುರೆಯನ್ನೇರಿದೆ. ಈಗ ನಾನು ಎಷ್ಟು ಹತ್ತಿರ ತಲುಪಿದ್ದೆನೆಂದರೆ, ಅವರು ಮುಹಮ್ಮದ್(ಸ) ಮತ್ತು ಅಬೂಬಕರ್ ಎಂದು ಗುರುತಿಸಿದ್ದು ಮಾತ್ರವಲ್ಲದೆ, ಮುಹಮ್ಮದ್(ಸ) ಪವಿತ್ರ ಖುರ್‌ಆನ್ ಪಠಿಸುತ್ತಿರುವ ಶಬ್ದವೂ ನನಗೆ ಕೇಳಿಸತೊಡಗಿತು. ಪ್ರವಾದಿ(ಸ) ಅತ್ತಿತ್ತ ನೋಡುತ್ತಿರಲಿಲ್ಲ, ಆದರೆ ಹಝ್ರತ್ ಅಬೂಬಕರ್(ರ) ಪದೇ ಪದೇ ಹಿಂತಿರುಗಿ ನೋಡುತ್ತಿದ್ದರು. ಹಝ್ರತ್ ಅಬೂಬಕರ್(ರ) ಪ್ರವಾದಿ(ಸ)ರ ರಕ್ಷಣೆಗಾಗಿ ನಾಲ್ಕೂ ಕಡೆ ಗಮನ ಹರಿಸುತ್ತಿರಬಹುದು.

ಸುರಾಕಾ ಹೇಳುತ್ತಾರೆ, ಅಷ್ಟರಲ್ಲಿ ನನ್ನ ಕುದುರೆ ಮತ್ತೆ ಎಡವಿತು ಮತ್ತು ಅದರ ಕಾಲುಗಳು ಮರಳಿನಲ್ಲಿ ಹೂತುಹೋದವು ಹಾಗೂ ನಾನು ಕೆಳಗೆ ಬಿದ್ದೆ. ನಂತರ ನಾನು ಕುದುರೆಯನ್ನು ಗದರಿಸಿ ಎದ್ದುನಿಂತೆ. ಆದರೆ ಕುದುರೆಗೆ ತನ್ನ ಕಾಲುಗಳನ್ನು ಮರಳಿನಿಂದ ಹೊರತೆಗೆಯಲು ಸಾಧ್ಯವಾಗುತ್ತಿರಲಿಲ್ಲ. ಕೊನೆಗೆ ಅದು ನೇರವಾಗಿ ನಿಂತಾಗ, ಅದರ ಎರಡೂ ಕಾಲುಗಳಿಂದ ಧೂಳು ಎದ್ದು ಹೊಗೆಯಂತೆ ಆಕಾಶದಲ್ಲಿ ಹರಡಿತು. ನಾನು ಮತ್ತೆ ಬಾಣಗಳಿಂದ ಶಕುನವನ್ನು ನೋಡಿದಾಗ, ನಾನು ಯಾವುದನ್ನು ಇಷ್ಟಪಡುತ್ತಿರಲಿಲ್ಲವೋ ಅದೇ ಬಂತು.

ನಾನು ಅಲ್ಲಿಂದಲೇ ಅಭಯಕ್ಕಾಗಿ ಕೂಗಿದೆ ಮತ್ತು 'ನನ್ನಿಂದ ನಿಮಗೆ ಯಾವುದೇ ಹಾನಿಯಾಗುವುದಿಲ್ಲ' ಎಂದು ಹೇಳಿದೆ. ಆಗ ರಸೂಲುಲ್ಲಾಹ್(ಸ) ಹಝ್ರತ್ ಅಬೂಬಕರ್(ರ)ರೊಡನೆ ಹೇಳಿದರು: "ಅವನಿಗೆ ಏನು ಬೇಕೆಂದು ಕೇಳು". ನಾನು ಹೇಳಿದೆ: 'ನಾನು ಸುರಾಕಾ, ನಾನು ನಿಮ್ಮೊಂದಿಗೆ ಮಾತನಾಡಬೇಕಿದೆ'. ಇದನ್ನು ಕೇಳಿ ಅವರು ನಿಂತರು. ನಾನು ಹೇಳಿದೆ: 'ಮಕ್ಕಾದವರು ನಿಮ್ಮನ್ನು ಜೀವಂತವಾಗಿ ಅಥವಾ ಮೃತರನ್ನಾಗಿ ಹಿಡಿದು ತರುವವರಿಗೆ ನೂರು ಒಂಟೆಗಳನ್ನು ನಿಗದಿಪಡಿಸಿದ್ದಾರೆ. ನಾನು ಅದೇ ಆಮಿಷದಿಂದ ನಿಮ್ಮನ್ನು ಹಿಂಬಾಲಿಸಿಕೊಂಡು ಬಂದೆನು. ಆದರೆ ನನ್ನ ಜೊತೆ ನಡೆದ ಘಟನೆಗಳಿಂದಾಗಿ ನಾನು ನಿಮ್ಮನ್ನು ಹಿಂಬಾಲಿಸುತ್ತಿರುವುದು ಸರಿಯಲ್ಲ ಎಂಬ ದೃಢವಿಶ್ವಾಸಕ್ಕೆ ತಲುಪಿದ್ದೇನೆ.'

ಅವನು ನಬಿ ಕರೀಮ್(ಸ)ರ ಸೇವೆಗಾಗಿ ಪ್ರಯಾಣದ ಅಗತ್ಯ ಸಾಮಗ್ರಿಗಳು ಮತ್ತು ತಿನ್ನುವ-ಕುಡಿಯುವ ವಸ್ತುಗಳನ್ನು ನೀಡಲು ಮುಂದಾದನು. ಆದರೆ ಪ್ರವಾದಿ(ಸ) ಅದನ್ನು ಸ್ವೀಕರಿಸಲಿಲ್ಲ. ಕೇವಲ 'ನಮ್ಮ ಬಗ್ಗೆ ಯಾರಿಗೂ ಹೇಳಬೇಡ' ಎಂದು ಮಾತ್ರ ಹೇಳಿದರು.

ಅವನು ಈ ಭರವಸೆಯನ್ನು ನೀಡಿದನು ಮತ್ತು ಜೊತೆಗೆ ಹೀಗೆ ಹೇಳಿದನು: 'ನೀವು ಒಂದು ದಿನ ಖಂಡಿತವಾಗಿಯೂ ಸಾಮ್ರಾಜ್ಯವನ್ನು ಪಡೆದುಕೊಳ್ಳುವಿರಿ ಎಂಬ ನಂಬಿಕೆ ನನಗಿದೆ. ಆ ಸಮಯದಲ್ಲಿ ನಾನು ನಿಮ್ಮ ಬಳಿ ಬರುವಾಗ ನನ್ನನ್ನು ಗೌರವ ಮತ್ತು ಆದರದಿಂದ ಕಾಣುವಂತೆ ನನಗೆ ಒಂದು ಒಪ್ಪಂದದ ಪತ್ರವನ್ನು ಬರೆದುಕೊಡಿರಿ'. ಕೆಲವು ವರದಿಗಳ ಪ್ರಕಾರ, ಅವನು ಅಭಯ ಪತ್ರಕ್ಕಾಗಿ ವಿನಂತಿಸಿದ್ದನು. ಅದರಂತೆ ನಬಿ(ಸ)ರ ಸೂಚನೆಯ ಮೇರೆಗೆ ಹಝ್ರತ್ ಅಬೂಬಕರ್(ರ) (ಮತ್ತೊಂದು ವರದಿಯ ಪ್ರಕಾರ ಆಮಿರ್ ಬಿನ್ ಫುಹೈರಾ) ಆ ಪತ್ರವನ್ನು ಬರೆದುಕೊಟ್ಟರು. ಅವನು ಆ ಪತ್ರವನ್ನು ತೆಗೆದುಕೊಂಡು ಹಿಂದಿರುಗಿದನು. (ಸ಼ಹೀಹ್ ಅಲ್‌ಬುಖಾರಿ, ಕಿತಾಬ್ ಮನಾಖಿಬ್ ಅಲ್‌ಅನ್ಸಾರ್, ಬಾಬ್ ಹಿಜ್ರತುನ್ನಬಿ ವ ಅಸ್‌ಹಾಬಿಹಿ ಇಲಲ್ ಮದೀನತಿ, ಹದೀಸ್-3906, ಸಬ್ಬುಲ್ ಹುದಾ ವರ್ರಶಾದ್, ಸಂಪುಟ-3, ಪುಟ-248....., ದಾರುಲ್ ಕುತುಬ್ ಇಲ್ಮಿಯಾ ಬೈರುತ್ 1993)

ಇದು ಪ್ರವಾದಿ(ಸ)ರ ತವಕ್ಕುಲ್‌ನ ಶ್ರೇಷ್ಠತೆಯಾಗಿತ್ತು; ಅವರಿಗೆ ಯಾವುದೇ ಭಯವಿರಲಿಲ್ಲ ಮತ್ತು ಅವರು ಅಲ್ಲಾಹನ ವಾಣಿಯನ್ನು ಪಠಿಸುತ್ತಾ ಸಾಗುತ್ತಿದ್ದರು.

ತಮಗೆ ಏನೂ ಆಗಲಾರದು ಎಂಬ ವಿಷಯದ ಮೇಲೆ ಪ್ರವಾದಿ(ಸ)ರಿಗೆ ಎಷ್ಟೊಂದು ವಿಶ್ವಾಸವಿತ್ತೆಂದರೆ, ಅವನು ಅಭಯ ಪತ್ರವನ್ನು ಬರೆದುಕೊಡಲು ಕೇಳಿದಾಗ ಅವರು ಅದನ್ನು ಬರೆದುಕೊಟ್ಟರು. ಕೊನೆಗೆ ನಬಿ(ಸ)ರದ್ದೇ ವಿಜಯವಾಗಲಿದೆ ಎಂದು ಅವನಿಗೂ ಅನ್ನಿಸಿತ್ತು, ಪ್ರವಾದಿ(ಸ)ರಿಗಂತೂ 'ಖಂಡಿತವಾಗಿಯೂ ನನ್ನದೇ ವಿಜಯ' ಎಂಬ ನಂಬಿಕೆ ಅದಕ್ಕಿಂತಲೂ ಮಿಗಿಲಾಗಿತ್ತು. ಆದ್ದರಿಂದಲೇ ಅವರು ಅಭಯ ಪತ್ರವನ್ನು ಬರೆದುಕೊಟ್ಟರು.

ಮತ್ತೊಂದು ವರದಿಯ ಪ್ರಕಾರ, ಅವನು ಮರಳಿ ಹೋಗುವಾಗ ನಬಿ(ಸ) ಅವನನ್ನು ಉದ್ದೇಶಿಸಿ ಹೀಗೆ ಹೇಳಿದರು: "ಎಲೈ ಸುರಾಕಾ, ಕಿಸ್ರಾ ರಾಜನ ಬಳೆಗಳು ನಿನ್ನ ಕೈಯಲ್ಲಿ ಇರುವಾಗ ನಿನ್ನ ಸ್ಥಿತಿ ಹೇಗಿರಬಹುದು?" ಸುರಾಕಾ ಆಶ್ಚರ್ಯಚಕಿತನಾಗಿ ತಿರುಗಿ ನೋಡಿ, "ಕಿಸ್ರಾ ಬಿನ್ ಹುರ್ಮುಝ್‌ನ ಬಳೆಗಳೇ?" ಎಂದು ಕೇಳಿದನು. ಪ್ರವಾದಿ(ಸ), "ಹೌದು, ಅದೇ ಕಿಸ್ರಾ ಬಿನ್ ಹುರ್ಮುಝ್" ಎಂದರು. ಅದರಂತೆಯೇ, ಹಝ್ರತ್ ಉಮರ್(ರ)ರ ಖಿಲಾಫತ್ ಕಾಲದಲ್ಲಿ ಕಿಸ್ರಾನ ಬಳೆಗಳು, ಅವನ ಕಿರೀಟ ಮತ್ತು ಸೊಂಟದ ಪಟ್ಟಿಯನ್ನು ತರಲಾದಾಗ, ಹಝ್ರತ್ ಉಮರ್(ರ) ಸುರಾಕಾನನ್ನು ಕರೆಸಿದರು. 'ನಿನ್ನ ಕೈಗಳನ್ನು ಮೇಲೆತ್ತು' ಎಂದು ಹೇಳಿ ಅವನಿಗೆ ಆ ಬಳೆಗಳನ್ನು ತೊಡಿಸಿದರು ಮತ್ತು ಹೀಗೆ ಹೇಳಲು ಆದೇಶಿಸಿದರು: "ಕಿಸ್ರಾ ಬಿನ್ ಹುರ್ಮುಝ್‌ನಿಂದ ಇವೆರಡನ್ನೂ ಕಸಿದುಕೊಂಡು ದಯಪಾಲಿಸಿದ ಆ ಅಲ್ಲಾಹನಿಗೆ ಎಲ್ಲ ಪ್ರಶಂಸೆಗಳು."
(ಮುಹಮ್ಮದ್ ರಸೂಲುಲ್ಲಾಹ್ ವಲ್ಲಝೀನ ಮಅಹು ಲಿಅಬ್ದಿಲ್ ಹಮೀದ್ ಜೌದತುಸ್ಸಹಾರ, ಸಂಪುಟ–3, ಪುಟ–65, ಅಲ್‌ಹಿಜ್ರಃ, ಮಿಸರ್ ಪ್ರಕಟಣೆ)

ಈ ಪ್ರಯಾಣದ ಘಟನೆಯನ್ನು ಹಝ್ರತ್ ಮುಸ್ಲಿಹ್ ಮೌಊದ್(ರ) ತಮ್ಮ ಮಾತುಗಳಲ್ಲಿ ಹೀಗೆ ವಿವರಿಸಿದ್ದಾರೆ: "ಹಿಜ್ರತ್ ಘಟನೆಯೂ ಒಂದು ವಿಚಿತ್ರವಾದ ಹಾಗೂ ಭಯಾನಕವಾದ ಘಟನೆಯಾಗಿದೆ. ಇಡೀ ಅರೇಬಿಯಾ ವಿರೋಧಿಯಾಗಿತ್ತು ಮತ್ತು ರಕ್ತಪಿಪಾಸುವಾಗಿತ್ತು. ಆದರೂ ರಸೂಲ್ ಕರೀಮ್(ಸ) ಕೇವಲ ಒಬ್ಬ ಸಂಗಾತಿಯನ್ನು ಕರೆದುಕೊಂಡು ಮದೀನಾದ ಕಡೆಗೆ ಹೊರಟರು. ಯಾರು ಧಾರ್ಮಿಕ ವಿರೋಧದ ಕಾರಣದಿಂದ ಅವರನ್ನು ಕೊಲ್ಲುವ ಆಲೋಚನೆಯಲ್ಲಿದ್ದರೋ ಮತ್ತು ಕೇವಲ ಖುರೈಶಿಯರ ಭಯದಿಂದಾಗಿ ಮೌನವಾಗಿದ್ದರೋ ದಾರಿಯುದ್ದಕ್ಕೂ ಅಂತಹ ಎಲ್ಲ ಜನಾಂಗಗಳು ನೆಲೆಸಿದ್ದವು, ಆದರೆ ಈಗ ಖುರೈಶಿಯರು ತಾವೇ ಪ್ರವಾದಿಯವರ ಹತ್ಯೆಗೆ ಮುಂದಾದ ಸಮಯ ಬಂದೊದಗಿತ್ತು ಮತ್ತು 'ನಾವೇನಾದರೂ ಇವರನ್ನು ಕೊಂದರೆ ಖುರೈಶಿಯರು ನಮ್ಮ ಮೇಲೆ ಕೋಪಗೊಳ್ಳಲು ಯಾವುದೇ ಕಾರಣವಿರುವುದಿಲ್ಲ' ಎಂಬ ಸಮಾಧಾನ ಇಡೀ ಅರಬ್ ಗೋತ್ರಗಳಿಗೆ ಇತ್ತು. ಖುರೈಶಿಯರ ವಿರೋಧದ ಭಯವಿಲ್ಲದೇ ಇದ್ದದ್ದು ಮಾತ್ರವಲ್ಲ, ರಸೂಲ್(ಸ) ಮಕ್ಕಾದಲ್ಲಿ ಇಲ್ಲದಿರುವುದನ್ನು ಕಂಡು ಖುರೈಶಿಯರು ಅವರ ಹತ್ಯೆಯ ಮೇಲೆ ಬಹುಮಾನವನ್ನೂ ಘೋಷಿಸಿದ್ದರು. ಮದೀನಾ ಮಾರ್ಗದಲ್ಲಿ ವಾಸವಿದ್ದ ಎಲ್ಲ ಬುಡಕಟ್ಟು ಜನಾಂಗದವರಿಗೂ, 'ರಸೂಲ್ ಕರೀಮ್(ಸ) ಮತ್ತು ಹಝ್ರತ್ ಅಬೂಬಕರ್(ರ)ರನ್ನು ಜೀವಂತವಾಗಿ ಅಥವಾ ಮೃತರನ್ನಾಗಿ ಹಿಡಿದು ತರುವವರಿಗೆ ತಲಾ ನೂರು ಒಂಟೆಗಳನ್ನು ಬಹುಮಾನವಾಗಿ ನೀಡಲಾಗುವುದು' ಎಂಬ ಮಾಹಿತಿಯನ್ನು ನೀಡಲಾಗಿತ್ತು. ಅರಬ್ ಬುಡಕಟ್ಟು ಜನಾಂಗಗಳ ಜೀವನವೇ ಲೂಟಿ–ದರೋಡೆಗಳಲ್ಲಿ ಕಳೆಯುತ್ತಿತ್ತು ಮತ್ತು ಅಸೂಯೆಯ ಬೆಂಕಿಯಲ್ಲಿ ಮೊದಲೇ ಬೆಂದು ಕರಕಲಾಗಿದ್ದರು. ಅವರು ಇಂತಹ ಅವಕಾಶವನ್ನು ಕೈತಪ್ಪಿ ಹೋಗಲು ಬಿಡುತ್ತಾರೆಯೇ? ಎಲ್ಲೆಡೆಯೂ ಅವರ ಶೋಧನೆ ಪ್ರಾರಂಭವಾಯಿತು ಮತ್ತು ಅವರು ಇಡುವ ಪ್ರತಿಯೊಂದು ಹೆಜ್ಜೆಯಲ್ಲೂ ಯಾವುದೇ ರಕ್ತಪಿಪಾಸು ಶತ್ರುವಿನ ಎದುರಾಗುವ ಭಯವಿತ್ತು.

ಇಂತಹ ಸಂದರ್ಭದಲ್ಲಿ ಎಂತಹ ದೊಡ್ಡ ಧೈರ್ಯಶಾಲಿ ಮನುಷ್ಯನೂ ಎದೆಗುಂದಿ ಬಿಡುತ್ತಾನೆ ಮತ್ತು ಅಂತಿಮ ಹೋರಾಟದಿಂದಲೂ ವಂಚಿತನಾಗುತ್ತಾನೆ ಎಂಬುದನ್ನು ಹೆಚ್ಚಾಗಿ ನೋಡಲಾಗಿದೆ. ಅಸಾಧಾರಣವಾದ, ಅತಿ ಬಲವಾದ ಹೃದಯವುಳ್ಳ ಹಾಗೂ ಅತ್ಯಂತ ಧೈರ್ಯಶಾಲಿಯಾದ ವ್ಯಕ್ತಿಯಾಗಿದ್ದರೂ, ಅವನ ಮೇಲೂ ಭಯವು ಎಷ್ಟರಮಟ್ಟಿಗೆ ಆವರಿಸುತ್ತದೆ ಎಂದರೆ, ಅವನ ಪ್ರತಿಯೊಂದು ಚಲನವಲನದಿಂದಲೂ ಅದು ವ್ಯಕ್ತವಾಗುತ್ತದೆ. ಅವರು ಬರೆದಿದ್ದಾರೆ: ನಾನು ಇತಿಹಾಸದಲ್ಲಿ ಘಟಾನುಘಟಿ ವೀರರ ಕಥೆಗಳನ್ನು ಓದಿದ್ದೇನೆ. ಆದರೆ ಇಂತಹ ಸಂದರ್ಭದಲ್ಲಿ ಅವರ ಸ್ಥಿತಿ ಹೇಗಿರುತ್ತದೆ ಎಂಬುದನ್ನು ರಸೂಲ್ ಕರೀಮ್(ಸ)ರ ಘಟನೆಯೊಂದಿಗೆ ಹೋಲಿಸುವುದು ನ್ಯಾಯೋಚಿತವಲ್ಲ. ಪಲಾಯನ ಮಾಡುತ್ತಿದ್ದ ನೆಪೋಲಿಯನ್‌ನ ಸ್ಥಿತಿ ಹೇಗಿತ್ತು ಮತ್ತು ಅವನ ಮುಖದ ಮೇಲೆ ಹತಾಶೆಯ ಸ್ಪಷ್ಟ ಲಕ್ಷಣಗಳು ಹೇಗೆ ಕಂಡುಬರುತ್ತಿದ್ದವು ಎಂಬುದು ಇತಿಹಾಸಕಾರರಿಗೆ ತಿಳಿದಿದೆ. ಭಾರತ–ಪಾಕಿಸ್ತಾನ ಉಪಖಂಡದಲ್ಲಿದ್ದ ಹುಮಾಯೂನ್ ಚಕ್ರವರ್ತಿಯು ಹೇಗೆ ಪದೇ ಪದೇ ತನ್ನನ್ನು ತಾನೇ ಶತ್ರುವಿನ ಕೈಗೊಪ್ಪಿಸಲು ಸಿದ್ಧನಾಗುತ್ತಿದ್ದನು ಎಂಬುದು ಕೂಡ ಅವರಿಗೆ ತಿಳಿದಿದೆ. ಒಂದು ವೇಳೆ ಅವನೊಂದಿಗೆ ಕೆಲವು ಅತ್ಯಂತ ನಿಷ್ಠಾವಂತ ಸೇನಾಪತಿಗಳಿಲ್ಲದಿದ್ದರೆ, ಅವನು ಬಹುಶಃ ಹಾಗೆಯೇ ಮಾಡುತ್ತಿದ್ದನು. ಇದೇ ರೀತಿ ಕಷ್ಟದ ದಿನಗಳನ್ನು ಎದುರಿಸಿದ ಇನ್ನೂ ಅನೇಕ ಮಹಾನ್ ಧೈರ್ಯಶಾಲಿ ಸೇನಾಪತಿಗಳು ಆಗಿಹೋಗಿದ್ದಾರೆ. ಶತ್ರುಗಳು ಅವರನ್ನು ಹುಡುಕುತ್ತಾ ನಾಲ್ಕೂ ದಿಕ್ಕುಗಳಲ್ಲಿ ಹರಡಿಕೊಂಡಾಗ ಅವರು ಗಾಬರಿಗೊಂಡುಬಿಟ್ಟರು. ಆದರೆ ರಸೂಲ್ ಕರೀಮ್(ಸ) ಈ ಲೌಕಿಕ ಜನರಂತಿರಲಿಲ್ಲ. ಅವರ ದೃಷ್ಟಿ ಪ್ರಾಪಂಚಿಕ ವಸ್ತುಗಳ ಕಡೆಗೆ ನೆಟ್ಟಿರಲಿಲ್ಲ, ಬದಲಾಗಿ ಅವರ ದೃಷ್ಟಿ ದೇವನ ಕಡೆಗೆ ಇತ್ತು. ಭೌತಿಕ ಸಾಧನಗಳು ಅವರ ಗುರಿಯಾಗಿರಲಿಲ್ಲ. 'ಇಂತಹ ಸಮಯದಲ್ಲಿ ಕೇವಲ ಒಬ್ಬ ಸಂಗಾತಿಯೊಂದಿಗೆ ಒಬ್ಬಂಟಿಯಾಗಿ ನಾನೇನು ಮಾಡಬಲ್ಲೆ, ಇಂತಹ ಅಪಾಯಕಾರಿ ದಾರಿಯಲ್ಲಿ ಶತ್ರು ಎದುರಾದರೆ ಅವನನ್ನು ಎದುರಿಸಲು ನನ್ನ ಬಳಿ ಯಾವ ಸಾಮಗ್ರಿಗಳಿವೆ' ಎಂದು ಅವರು ಆಲೋಚಿಸುತ್ತಿರಲಿಲ್ಲ.

ಬದಲಿಗೆ, ಅವರು ನೋಡುತ್ತಿದ್ದುದು ಏನೆಂದರೆ, 'ನನ್ನೊಡನೆ ಆ ದೇವನಿದ್ದಾನೆ, ಅವನು ಮೊದಲಿನಿಂದಲೂ ತನ್ನ ಸಜ್ಜನ ದಾಸರ ರಕ್ಷಕನಾಗಿದ್ದಾನೆ. ಅವನ ದಾಳಿಯನ್ನು ಯಾವ ಶತ್ರುವೂ ಎದುರಿಸಲಾರನು'. ಯಾವ ದೇವನು ನೂಹ್(ಅ)ರ ದೇವನಾಗಿದ್ದನೋ, ಇಬ್ರಾಹೀಮ್(ಅ)ರ ದೇವನಾಗಿದ್ದನೋ, ಮೂಸಾ(ಅ)ರ ದೇವನಾಗಿದ್ದನೋ, ಯೂನುಸ್(ಅ)ರ ದೇವನಾಗಿದ್ದನೋ, ಅಯ್ಯೂಬ್(ಅ)ರ ದೇವನಾಗಿದ್ದನೋ, ದಾವೂದ್(ಅ)ರ ದೇವನಾಗಿದ್ದನೋ, ಸುಲೈಮಾನ್(ಅ)ರ ದೇವನಾಗಿದ್ದನೋ, ಈಸಾ ಮಸೀಹ್‌ರ ದೇವನಾಗಿದ್ದನೋ, ಅವನೇ ನನ್ನ ದೇವನಾಗಿದ್ದಾನೆ. ಅವನ ಶಕ್ತಿಗಳು ಎಂದಿಗೂ ಕುಂದುವುದಿಲ್ಲ ಮತ್ತು ಅವನು ಒಂದು ಕ್ಷಣವೂ ಅಜಾಗರೂಕನಾಗುವುದಿಲ್ಲ.

ಸುರಾಕಾ ಬಿನ್ ಜುಅ್‌ಶುಮ್ ಆಮಿಷ ಮತ್ತು ದ್ವೇಷದಿಂದ ಹುಚ್ಚನಾಗಿ ಬರುತ್ತಾನೆ. ದೂರದಿಂದಲೇ ನೋಡಿ ನಬಿ(ಸ)ರ ಕಡೆಗೆ ಕುದುರೆಯನ್ನು ಓಡಿಸಿಕೊಂಡು ಬರುತ್ತಾನೆ. ಅವನ ಹೃದಯದಲ್ಲಿ ಆಸೆ ನದಿಯ ಅಲೆಗಳಂತೆ ಉಕ್ಕುತ್ತಿತ್ತು. ತನ್ನ ಧರ್ಮವನ್ನು ನಿಂದಿಸಿದವನ ರಕ್ತದಿಂದ ತನ್ನ ಕೈಗಳನ್ನು ರಂಗಾಗಿಸಿ ತನ್ನ ಸುಟ್ಟ ಹೃದಯಕ್ಕೆ ಶಾಂತಿ ನೀಡಬೇಕೆಂದು ಅವನು ಬಯಸಿದ್ದದ್ದು ಮಾತ್ರವಲ್ಲ, ಬದಲಾಗಿ ಇನ್ನೂರು ಒಂಟೆಗಳ ಬಹುಮಾನವೂ ಸಿಗುವುದು ಎಂಬ ಆಸೆ ಇತ್ತು. (ಅಂದರೆ ನೂರು ಒಂಟೆಗಳು ಪ್ರವಾದಿ(ಸ)ರನ್ನು ಹಿಡಿದರೆ ಮತ್ತು ನೂರು ಒಂಟೆಗಳು ಹಝ್ರತ್ ಅಬೂಬಕರ್(ರ)ರನ್ನು ಹಿಡಿದರೆ). "ನನಗೆ ಇನ್ನೂರು ಒಂಟೆಗಳ ಬಹುಮಾನ ಸಿಗುವುದು" ಎಂಬ ಬಗ್ಗೆಯೇ ಅವರು ಸೂಚಿಸಿದ್ದರು. ಮೊದಲ ವರದಿಯಲ್ಲಿ ನೂರು ಒಂಟೆಗಳ ಉಲ್ಲೇಖವಿದೆ, ಆದರೆ ತಲಾ ನೂರು–ನೂರು ಒಟ್ಟು ಇನ್ನೂರು ಒಂಟೆಗಳಾಗಿದ್ದವು. ಏನೇ ಆಗಲಿ, ಇದು ಅವನ ಗೋತ್ರದಲ್ಲಿ ಅವನಿಗೆ ಬಹುದೊಡ್ಡ ಸ್ಥಾನಮಾನ ನೀಡಲು ಸಾಕಾಗುವಷ್ಟಿತ್ತು.

ಇದು ಅವನ ಧೈರ್ಯವನ್ನು ಮತ್ತಷ್ಟು ಹೆಚ್ಚಿಸಿತು. ಬೇಟೆಗಾರನು ತನ್ನ ಬೇಟೆಯನ್ನು ಕಂಡು ನುಗ್ಗುವಂತೆ, ಅವನು ರಸೂಲ್ ಕರೀಮ್(ಸ)ರನ್ನು ಕಂಡು ಅವರ ಕಡೆಗೆ ನುಗ್ಗುತ್ತಾನೆ. ಬಿಲ್ಲು ಮತ್ತು ಬಾಣವನ್ನು ಕೈಯಲ್ಲಿ ಹಿಡಿದು ಅವರ ಮೇಲೆ ದಾಳಿ ಮಾಡಲು ಮುಂದಾಗುತ್ತಾನೆ. ಅವನು ಒಂಟಿಯಾಗಿರಲಿಲ್ಲ, ಬದಲಿಗೆ ಒಂದು ಕೂಗು ಹಾಕಿದರೆ ಸಾಕು, ತನ್ನ ಸುತ್ತ ಸಾವಿರಾರು ಜನರನ್ನು ಸೇರಿಸುವ ಸಾಮರ್ಥ್ಯ ಅವನಿಗಿತ್ತು. ಅವನು ಕೂಗಿದ್ದರೆ, ಸುತ್ತಮುತ್ತಲಿನ ಗೋತ್ರಗಳ ಜನರು, ಬಹುಶಃ ಹತ್ತಿರದಲ್ಲಿದ್ದವರು ಅಲ್ಲಿಗೆ ಬಂದು ಸೇರುತ್ತಿದ್ದರು. ಏಕೆಂದರೆ ರಸೂಲ್ ಕರೀಮ್(ಸ) ಆ ಸಮಯದಲ್ಲಿ ಅವನ ಪ್ರದೇಶದ ಮುಖಾಂತರವೇ ಹಾದುಹೋಗುತ್ತಿದ್ದರು. ಆದರೆ ಆ ಸಮಯದಲ್ಲಿ ನಬಿ(ಸ) ಏನು ಮಾಡುತ್ತಾರೆ? ಓಡಿಹೋಗುತ್ತಾರೆಯೇ? ಹೆದರಿ ತಮ್ಮನ್ನು ಅವನಿಗೆ ಒಪ್ಪಿಸುತ್ತಾರೆಯೇ? ಅವರ ಹೆಜ್ಜೆಗಳು ತಡಬಡಿಸುತ್ತವೆಯೇ? ಅವರ ಪ್ರಜ್ಞೆ ತಪ್ಪುತ್ತದೆಯೇ? ಅವನನ್ನು ಕೊಂದು ಅಲ್ಲಿಂದ ತಪ್ಪಿಸಿಕೊಳ್ಳಲು ಯೋಜನೆ ಹಾಕುತ್ತಾರೆಯೇ? ಈಗ ಅವನು ಅಷ್ಟು ಹತ್ತಿರದಲ್ಲಿದ್ದಾನೆ ಮತ್ತು ಒಂಟಿಯಾಗಿದ್ದಾನೆ ಎಂದ ಮೇಲೆ, ಅವನಿಗೆ ಬಾಣ ಹೊಡೆದು ಕೊಲ್ಲಬಹುದಿತ್ತಲ್ಲವೇ? ಇಲ್ಲ, ದೇವನ ಮೇಲೆ ಭರವಸೆ ಇಟ್ಟಿರುವ ಆ ಮಹಾಪುರುಷ ಈ ಯಾವುದನ್ನೂ ಮಾಡುವುದಿಲ್ಲ. ಒಂದು ಎತ್ತಿಗೆ ಕೊಡುವಷ್ಟು ಪರಿಗಣನೆಯನ್ನೂ ಅವರು ಸುರಾಕಾನಿಗೆ ನೀಡುವುದಿಲ್ಲ.

ತಮ್ಮಲ್ಲಿದ್ದ ಅಪಾರ ಧೈರ್ಯ ಮತ್ತು ಶೌರ್ಯದ ಹೊರತಾಗಿಯೂ, ತಮ್ಮಲ್ಲಿದ್ದ ಈಮಾನ್ ಮತ್ತು ದೃಢನಂಬಿಕೆಯ ಹೊರತಾಗಿಯೂ, ತಮ್ಮಲ್ಲಿದ್ದ ತವಕ್ಕುಲ್ ಮತ್ತು ಭರವಸೆಯ ಹೊರತಾಗಿಯೂ ಹಝ್ರತ್ ಅಬೂಬಕರ್(ರ) 'ಸುರಾಕಾ ಈಗ ನಮ್ಮ ಎಷ್ಟು ಹತ್ತಿರ ಬಂದಿದ್ದಾನೆ' ಎಂದು ಹಿಂತಿರುಗಿ

ನೋಡುತ್ತಲೇ ಇರುತ್ತಾರೆ. ಆದರೆ ರಸೂಲ್ ಕರೀಮ್(ಸ) ಅವನ ಪರಿವೆಯೇ ಮಾಡುವುದಿಲ್ಲ. ಗಾಬರಿಗೊಳ್ಳುವುದು ಮತ್ತು ಓಡುವುದು ದೂರದ ಮಾತು, ಭಯಭೀತಿಯನ್ನು ವ್ಯಕ್ತಪಡಿಸುವುದು ಬೇರೆಯೇ ವಿಷಯ; ಪ್ರವಾದಿ(ಸ) ಒಮ್ಮೆಯೂ ಮುಖ ತಿರುಗಿಸಿ ಅವನತ್ತ ನೋಡಲಿಲ್ಲ. ಇದು ಸುರಾಕಾನನ್ನು ಅಚ್ಚರಿಗೊಳಿಸಿತು. ನಾನು ಎಂತಹ ಮನುಷ್ಯನನ್ನು ಹಿಂಬಾಲಿಸುತ್ತಿದ್ದೇನೆ ಎಂದು ಅವನ ಕಣ್ಣುಗಳು ತೆರೆದುಕೊಂಡವು. ತನ್ನ ಜೀವಮಾನವಿಡೀ ಅವನು ಈ ದೃಶ್ಯವನ್ನು ತನ್ನ ನೆನಪಿನಿಂದ ಅಳಿಸಲು ಸಾಧ್ಯವಾಗಲಿಲ್ಲ. ಬದಲಾಗಿ, ಈ ಅಸಾಮಾನ್ಯ ಘಟನೆಯು ಅವನ ಹೃದಯದ ಮೇಲೆ ಎಂತಹ ಪ್ರಭಾವ ಬೀರಿತೆಂದರೆ, ಅವನು ಯಾವಾಗಲೂ ಅದನ್ನು ವಿವರಿಸುತ್ತಿದ್ದನು ಮತ್ತು ಹೀಗೆ ಹೇಳುತ್ತಿದ್ದನು: 'ನಾನು ಕುದುರೆಯನ್ನು ಓಡಿಸುತ್ತಾ ರಸೂಲ್ ಕರೀಮ್(ಸ)ರ ಎಷ್ಟೊಂದು ಹತ್ತಿರ ಹೋದೆನೆಂದರೆ, ನಾನು ರಸೂಲ್ ಕರೀಮ್(ಸ) ಖುರ್‌ಆನ್ ಪಠಿಸುವ ಶಬ್ದವನ್ನು ಕೇಳುತ್ತಿದ್ದೆ. ಮತ್ತು ರಸೂಲ್ ಕರೀಮ್(ಸ) ಎಡ-ಬಲಕ್ಕೆ ಸ್ವಲ್ಪವೂ ನೋಡುತ್ತಿರಲಿಲ್ಲ, ಆದರೆ ಹಝ್ರತ್ ಅಬೂಬಕರ್(ರ) ಪದೇ ಪದೇ ನೋಡುತ್ತಿದ್ದರು ಎಂಬುದನ್ನು ನಾನು ಗಮನಿಸಿದೆ.'

ಸುಬ್‌ಹಾನಲ್ಲಾಹ್! ದೇವನ ಮೇಲೆ ಎಂತಹ ಭರವಸೆ! ಶತ್ರುವು ಕುದುರೆಯನ್ನು ಓಡಿಸಿಕೊಂಡು ಎಷ್ಟೊಂದು ಹತ್ತಿರ ಬಂದಿದ್ದಾನೆಂದರೆ, ನಬಿ(ಸ)ರ ಧ್ವನಿಯು ಅವನಿಗೆ ಕೇಳಿಸುತ್ತದೆ ಮತ್ತು ನಬಿ(ಸ) ಅವನ ಬಾಣದ ವ್ಯಾಪ್ತಿಯಲ್ಲಿದ್ದರು. ಆದರೂ ಗಾಬರಿಗೊಳ್ಳುವುದು ದೂರದ ಮಾತು, ನಬಿ(ಸ) ಪವಿತ್ರ ಖುರ್‌ಆನ್ ಪಠಿಸುತ್ತಲೇ ಸಾಗುತ್ತಿದ್ದರು ಮತ್ತು ಇನ್ನೊಂದೆಡೆ ಶತ್ರು ಈಗ ಎಷ್ಟು ಸಮೀಪಿಸಿದ್ದಾನೆ ಎಂದು ಹಝ್ರತ್ ಅಬೂಬಕರ್(ರ) ಪದೇ ಪದೇ ನೋಡುತ್ತಿದ್ದಾರೆ. ಈ ಮಟ್ಟದ ಭರವಸೆ ಮತ್ತು ತವಕ್ಕುಲ್‌ನ ಮತ್ತೊಂದು ಉದಾಹರಣೆ ಸಿಗಲು ಸಾಧ್ಯವೇ? ಈ ಅಪಾಯಕಾರಿ ಸಮಯದಲ್ಲಿ ಇಷ್ಟೊಂದು ನಿರ್ಲಕ್ಷ್ಯ ಮತ್ತು ಯಾವುದೇ ಪರಿವೆ ವ್ಯಕ್ತಪಡಿಸಿದ ಬೇರೆ ಯಾವುದಾದರೂ ಮನುಷ್ಯನಿದ್ದಾನೆಯೇ? ಒಂದು ವೇಳೆ ನಬಿ(ಸ)ರಿಗೆ ಲೌಕಿಕ ಸಾಧನಗಳ ಬಳಕೆಯ ಆಲೋಚನೆ ಇದ್ದಿದ್ದರೂ, ಕನಿಷ್ಠಪಕ್ಷ ಅವರು ಆ ಸಮಯದಲ್ಲಿ ಸುರಾಕಾನ ಮೇಲೆ ದಾಳಿ ಮಾಡಲು ಪ್ರಯತ್ನಿಸಬೇಕಿತ್ತು ಅಥವಾ ಅಲ್ಲಿಂದ ವೇಗವಾಗಿ ತಪ್ಪಿಸಿಕೊಳ್ಳಲು ಪ್ರಯತ್ನಿಸಬೇಕಿತ್ತು. ಆದರೆ ನಬಿ(ಸ) ಈ ಎರಡೂ ಆಯ್ಕೆಗಳನ್ನು ಆರಿಸಲಿಲ್ಲ. ನಬಿ(ಸ) ಹೆಜ್ಜೆಗಳನ್ನು ಚುರುಕುಗೊಳಿಸಲೂ ಇಲ್ಲ ಅಥವಾ ಸುರಾಕಾನನ್ನು ಹೇಗಾದರೂ ಮಾಡಿ ಕೊಲ್ಲಬೇಕೆಂದೂ ಉದ್ದೇಶಿಸಲಿಲ್ಲ. ಬದಲಾಗಿ, ಅತ್ಯಂತ ನೆಮ್ಮದಿಯಿಂದ, ಯಾವುದೇ ಭಯವನ್ನು ವ್ಯಕ್ತಪಡಿಸದೆ, ಮೊದಲಿನ ವೇಗದಲ್ಲೇ ಪವಿತ್ರ ಖುರ್‌ಆನ್ ಪಠಿಸುತ್ತಾ ಸಾಗಿದರು.

ಆ ಸಮಯದಲ್ಲಿ ನಬಿ(ಸ)ರ ಹೃದಯವನ್ನು ಅಷ್ಟೊಂದು ಬಲಪಡಿಸಿದ ವಿಷಯ ಯಾವುದು? ನಬಿ(ಸ)ರ ಧೈರ್ಯವನ್ನು ಅಷ್ಟೊಂದು ಎತ್ತರಕ್ಕೆ ಕೊಂಡೊಯ್ದ ಶಕ್ತಿ ಯಾವುದು? ನಬಿ(ಸ)ರ ಒಳಗೆ ಈ ರೀತಿಯ ಅಸಾಧಾರಣ ಜೀವಂತಿಕೆಯನ್ನು ಮೂಡಿಸಿದ ಚೈತನ್ಯ ಯಾವುದು? ಇವೆಲ್ಲವೂ ದೇವನ ಮೇಲಿನ ತವಕ್ಕುಲ್‌ನ ಪವಾಡಗಳಾಗಿದ್ದವು, ಅವನ ಮೇಲಿಟ್ಟ ಭರವಸೆಯ ಫಲಿತಾಂಶಗಳಾಗಿದ್ದವು. 'ಬಾಹ್ಯ ಸಾಧನಗಳು ನನಗೆ ಯಾವುದೇ ಹಾನಿ ಮಾಡಲಾರವು. ಪ್ರಪಂಚದ ಶಕ್ತಿಗಳು ನನ್ನನ್ನು ನಾಶಮಾಡಲಾರವು. ಏಕೆಂದರೆ ಆಕಾಶದಲ್ಲಿ ನನ್ನನ್ನು ನೋಡುತ್ತಿರುವ ದೇವನಿದ್ದಾನೆ, ಅವನು ಈ ಎಲ್ಲ ಸಾಧನಗಳನ್ನು ಸೃಷ್ಟಿಸಿದವನಾಗಿದ್ದಾನೆ' ಎಂಬುದು ಅವರಿಗೆ ತಿಳಿದಿತ್ತು. ಆದ್ದರಿಂದ, ಸಾಧನಗಳ ಸೃಷ್ಟಿಕರ್ತನ ವಿರುದ್ಧ ಆ ಸಾಧನಗಳು ಏನೂ ಮಾಡಲಾರವು. ನಬಿ(ಸ)ರ ಈ ತವಕ್ಕುಲ್ ವ್ಯರ್ಥವಾಗಲಿಲ್ಲ, ಬದಲಿಗೆ ದೇವನು ಅದನ್ನು ಪೂರೈಸಿದನು. ಇನ್ನೂರು ಒಂಟೆಗಳ ಆಮಿಷದಲ್ಲಿ ಬಂದಿದ್ದ ಸುರಾಕಾ ನಬಿ(ಸ)ರ ಕ್ಷಮೆಯಾಚಿಸಿ ಮರಳಿ ಹೋದನು. ದೇವನು ಅವನ ಹೃದಯದಲ್ಲಿ ಎಂತಹ ಭಯವನ್ನು ಮೂಡಿಸಿದನೆಂದರೆ, ಮೌನವಾಗಿ ಮರಳಿ ಹೋಗುವುದರಲ್ಲೇ ತನ್ನ ಸುರಕ್ಷತೆಯಿದೆ ಎಂದು ಅವನು ಭಾವಿಸಿದನು. ಮಾತ್ರವಲ್ಲದೆ, ಅವನು ಇತರ ಹಿಂಬಾಲಕರನ್ನೂ ಮರಳಿ ಕಳುಹಿಸಿದನು.

ಇದು ಒಬ್ಬ ಸುಳ್ಳುಗಾರನಲ್ಲಿ ಇರಲು ಸಾಧ್ಯವಾಗದ ತವಕ್ಕುಲ್ ಆಗಿದೆ. ಮೋಸ ತುಂಬಿದ ಹೃದಯದಲ್ಲಿ ನೆಲೆಸಲು ಸಾಧ್ಯವಾಗದ ತವಕ್ಕುಲ್ ಆಗಿದೆ. ಪ್ರಪಂಚದಲ್ಲಿ ಇದಕ್ಕೆ ಸಾಟಿಯಿಲ್ಲದಂತಹ ತವಕ್ಕುಲ್ ಇದಾಗಿದೆ. ಹಝ್ರತ್ ಮೂಸಾ(ಅ)ರ ಒಂದು ಸಂದರ್ಭದಲ್ಲಿಯೂ ಇಂತಹ ತವಕ್ಕುಲ್‌ನ ಉದಾಹರಣೆ ಸಿಗುತ್ತದೆ, ಆದರೆ ಆ ಉದಾಹರಣೆ ಇದಕ್ಕಿಂತ ಬಹಳ ಕೆಳಗಿನದ್ದಾಗಿದೆ. ಏಕೆಂದರೆ ಹಝ್ರತ್ ಮೂಸಾ(ಅ)ರ ಸಂಗಾತಿಗಳು ಫರೋಹನ ಜನರನ್ನು ನೋಡಿ, **'ಇನ್ನಾ ಲಮುದ್ರಕೂನ್'** ಅಂದರೆ, 'ನಾವು ಖಂಡಿತವಾಗಿಯೂ ಸಿಕ್ಕಿಬೀಳುತ್ತೇವೆ' ಎಂದು ಹೇಳಿದ್ದರು. ಅದಕ್ಕೆ ಪ್ರತಿಯಾಗಿ ಹಝ್ರತ್ ಮೂಸಾ(ಅ) ಹೀಗೆ ಹೇಳಿದರು: **'ಇನ್ನ ಮಇಯ ರಬ್ಬೀ ಸಯಹ್ದೀನ್'** (ಖಂಡಿತವಾಗಿಯೂ ನನ್ನ ಪ್ರಭು ನನ್ನೊಂದಿಗಿದ್ದಾನೆ, ಅವನು ನನಗೆ ದಾರಿ ತೋರಿಸುವನು).

ಆದರೆ ರಸೂಲ್ ಕರೀಮ್(ಸ)ರ ತವಕ್ಕುಲ್ ಎಷ್ಟೊಂದು ಪರಿಪೂರ್ಣವಾಗಿತ್ತೆಂದರೆ, ಅದು ಅವರ ಸಂಗಾತಿಯ ಮೇಲೂ ಪ್ರಭಾವ ಬೀರಿತು. ಹಝ್ರತ್ ಅಬೂಬಕರ್(ರ) ಮೂಸಾ(ಅ)ರ ಅನುಯಾಯಿಗಳಂತೆ ಗಾಬರಿಗೊಂಡು 'ನಾವು ಖಂಡಿತ ಸಿಕ್ಕಿಬೀಳುತ್ತೇವೆ' ಎಂದು ಹೇಳಲಿಲ್ಲ. ಗುಹೆಯಲ್ಲಿ ಕುಳಿತಿದ್ದಾಗಲೂ, 'ಅವರು ಸ್ವಲ್ಪ ಕೆಳಗೆ ದೃಷ್ಟಿಹರಿಸಿದರೆ ನಮ್ಮನ್ನು ನೋಡಿಬಿಡುತ್ತಾರೆ' ಎಂದು ಮಾತ್ರ ಹೇಳಿದ್ದರು. ಆ ಸಮಯದಲ್ಲಿ ಪ್ರವಾದಿಯ ನೂರ್ (ಬೆಳಕು) ಅವರ ಹೃದಯದ ಮೇಲೆ ಬೀರುತ್ತಿದ್ದ ಪ್ರಭಾವದ ಪರಿಣಾಮವಾಗಿ ಈ ಈಮಾನ್ ಅವರಲ್ಲಿತ್ತು. ಇನ್ನೊಂದು ವಿಷಯವೇನೆಂದರೆ, ಹಝ್ರತ್ ಮೂಸಾ(ಅ)ರೊಂದಿಗೆ ಸೇನೆಯಿತ್ತು ಮತ್ತು ಅವರ ಮುಂದೆ ಓಡಿಹೋಗಲು ಸ್ಥಳಾವಕಾಶವಿತ್ತು. ಆದರೆ ರಸೂಲ್ ಕರೀಮ್(ಸ)ರ ಜೊತೆ ಯಾವುದೇ ಗುಂಪು ಇರಲಿಲ್ಲ ಮತ್ತು ಅವರ ಮುಂದೆ ಬೇರೆ ದಾರಿಯೂ ಇರಲಿಲ್ಲ. ಆದ್ದರಿಂದ, ಇದು ಪ್ರವಾದಿ(ಸ)ರ ತವಕ್ಕುಲ್‌ನ ಉನ್ನತ ಶ್ರೇಷ್ಠತೆಯಾಗಿತ್ತು."

ಸಾಧನಗಳನ್ನು ಒದಗಿಸಿಕೊಳ್ಳುವುದು, ಅವುಗಳನ್ನು ಬಳಸುವುದು ಮತ್ತು ನಂತರ ಅಲ್ಲಾಹನ ಮೇಲೆ ತವಕ್ಕುಲ್ ಮಾಡುವುದು ಅತ್ಯಾವಶ್ಯಕವಾಗಿದೆ. ಹಝ್ರತ್ ಪೈಗಂಬರ್(ಸ)ರ ತವಕ್ಕುಲನ್ನು ಪ್ರಸ್ತಾಪಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್(ರ) ಈ ಅಂಶವನ್ನು ಈ ರೀತಿ ವಿವರಿಸಿದ್ದಾರೆ: "ಯಾವ ವ್ಯಕ್ತಿಗೆ ದೇವನ ಅಸ್ತಿತ್ವದ ಮೇಲೆ ನಂಬಿಕೆಯಿರುತ್ತದೆಯೋ ಮತ್ತು ಅವನು ನನ್ನನ್ನು ಒಂದು ವಿಶೇಷ ಉದ್ದೇಶಕ್ಕಾಗಿ ಸೃಷ್ಟಿಸಿದ್ದಾನೆ ಎಂಬ ದೃಢವಿಶ್ವಾಸವೂ ಇರುತ್ತದೆಯೋ, ಅಂಥವನು ಕರ್ಮವನ್ನು ತ್ಯಜಿಸಲು ಹೇಗೆ ಸಾಧ್ಯ? ಅಂಥವನು ಅತ್ಯಂತ ಹೆಚ್ಚು ಕರ್ಮಶೀಲನಾಗಿರುತ್ತಾನೆ. ಮುಹಮ್ಮದ್ ರಸೂಲುಲ್ಲಾಹ್(ಸ)ರ ಕರ್ಮಗಳು ಅವರ ಈಮಾನಿನ ಕಾರಣದಿಂದಾಗಿದ್ದವು. ಏಕೆಂದರೆ, ದೇವನೊಬ್ಬನಿದ್ದಾನೆ ಮತ್ತು ಅವನು ನನ್ನನ್ನು ಒಂದು ವಿಶೇಷ ಉದ್ದೇಶಕ್ಕಾಗಿ ಸೃಷ್ಟಿಸಿದ್ದಾನೆ ಎಂದು ಯಾವ ವ್ಯಕ್ತಿ ಅರಿತಿರುತ್ತಾನೋ, ಅವನು ಆ ಉದ್ದೇಶವನ್ನು ಸಾಧಿಸಲು ಪ್ರಯತ್ನವನ್ನೂ ಮಾಡುತ್ತಾನೆ. ಆದ್ದರಿಂದ ನೋಡಿ, ಮುಹಮ್ಮದ್ ರಸೂಲುಲ್ಲಾಹ್(ಸ) ಒಂದು ಕಡೆ ಈಮಾನನ್ನು ಪ್ರಕಟಿಸುತ್ತಾರೆ. ಸೌರ್ ಗುಹೆಯಲ್ಲಿ ಕುಳಿತುಕೊಂಡು ಹಝ್ರತ್ ಅಬೂಬಕರ್(ರ)ರೊಡನೆ, 'ಅಬೂಬಕರ್ ಗಾಬರಿಯಾಗಬೇಡ, ದೇವನು ನಮ್ಮೊಂದಿಗಿದ್ದಾನೆ ಮತ್ತು ಅವನೇ ನಮ್ಮ ರಕ್ಷಕನಾಗಿದ್ದಾನೆ' ಎಂದು ಹೇಳುತ್ತಾರೆ. ಮತ್ತೊಂದೆಡೆ ಅವರು ಧರ್ಮದ ಇತರ ಕಾರ್ಯಗಳಲ್ಲಿ ಹಗಲು-ರಾತ್ರಿ ಎಷ್ಟೊಂದು ಮಗ್ನರಾಗಿರುತ್ತಾರೆಂದರೆ, ಇಡೀ ಲೋಕದ ಎಲ್ಲ ಕಾರ್ಯಗಳನ್ನು ಅವರಿಗೆ ಮಾತ್ರ ಒಪ್ಪಿಸಲಾಗಿದೆ ಎಂಬಂತೆ ಭಾಸವಾಗುತ್ತದೆ. ಒಂದೆಡೆ, ದೇವನಿದ್ದಾನೆ ಮತ್ತು ಅವನು ತನ್ನ ದಾಸರಿಗೆ ಸಹಾಯ ಮಾಡುತ್ತಾನೆ ಎಂಬ ನಂಬಿಕೆ ಅವರಿಗಿತ್ತು. ಆದರೆ ಮತ್ತೊಂದೆಡೆ, ಅವರು ದೇವನನ್ನು ಪರೀಕ್ಷಿಸುತ್ತಿರುವಂತೆ ಕಂಡುಬರುವುದಿಲ್ಲ. ದೇವನು, 'ನಾನು ನಿನಗೆ ವಿಜಯವನ್ನು ನೀಡುವೆನು' ಎಂದು ಹೇಳಿದ ತಕ್ಷಣ ಅವರು ಸುಮ್ಮನೆ ಕೈಕಟ್ಟಿ ಕುಳಿತುಕೊಳ್ಳುವುದಿಲ್ಲ. 'ಈಗ ವಿಜಯಕ್ಕಾಗಿ ಯಾವುದೇ ಪ್ರಯತ್ನದ ಅಗತ್ಯವೇನಿದೆ? ಅಲ್ಲಾಹನು ತನ್ನ ವಾಗ್ದಾನದಂತೆ ತಾನೇ ವಿಜಯವನ್ನು ನೀಡುತ್ತಾನೆ' ಎಂದು ಹೇಳುವುದಿಲ್ಲ. ಅವರು ಹಾಗೆ ಮಾಡುವುದಿಲ್ಲ, ಬದಲಾಗಿ ವಿಜಯಕ್ಕಾಗಿ ಪ್ರಯತ್ನವನ್ನೂ ಮಾಡುತ್ತಾರೆ.

ಅದರಂತೆ ಅವರು ಜನರಿಗೆ ಯುದ್ಧ ತಂತ್ರಗಳನ್ನು ಕಲಿಸುತ್ತಾರೆ, ಸೈನ್ಯಕ್ಕೆ ತರಬೇತಿ ನೀಡುತ್ತಾರೆ. ಶತ್ರುವನ್ನು ಎದುರಿಸಲು ಸೈನ್ಯವನ್ನು ಒಟ್ಟುಗೂಡಿಸುತ್ತಾರೆ, ಸವಾರಿಗಳ ವ್ಯವಸ್ಥೆ ಮಾಡುತ್ತಾರೆ, ಆಯುಧಗಳನ್ನು ಸಂಗ್ರಹಿಸುತ್ತಾರೆ, ಸೈನಿಕರ ಊಟ ಮತ್ತು ವಸತಿ ಇತ್ಯಾದಿಗಳ ವ್ಯವಸ್ಥೆ ಮಾಡುತ್ತಾರೆ. ನಂತರ ಈ ಎಲ್ಲ ಸಿದ್ಧತೆಗಳನ್ನು ಪೂರ್ಣಗೊಳಿಸಿದ ಮೇಲೆ ಶತ್ರುವಿನೊಡನೆ ಯುದ್ಧ ಮಾಡಲು ಹೋಗುತ್ತಾರೆ. ಶತ್ರುಗಳು ಹೆಚ್ಚಿನ ಸಂಖ್ಯೆಯಲ್ಲಿದ್ದು, ಸಹಾಬಿಯರು ಕಡಿಮೆ ಇರುವಂತಹ ಸಮಯ ಬರುವಾಗ, ಅವರು ಅತ್ಯಂತ ನಂಬಿಕೆ, ದೃಢತೆ ಮತ್ತು ಈಮಾನಿನಿಂದ ಹೀಗೆ ಹೇಳುತ್ತಾರೆ: 'ನಾವು ಸ್ವಲ್ಪ ಸಂಖ್ಯೆಯಲ್ಲಿದ್ದರೂ ಗೆಲ್ಲುವುದು ನಾವೇ'. ಆದ್ದರಿಂದ ಎಷ್ಟರ ಮಟ್ಟಿಗೆ ಮಾನವ ಪ್ರಯತ್ನಗಳನ್ನು ಮಾಡಬಹುದಾಗಿತ್ತೋ, ಅಷ್ಟರ ಮಟ್ಟಿಗೆ ಎಲ್ಲ ಪ್ರಯತ್ನಗಳನ್ನು ಅವರು ಮಾಡುತ್ತಿದ್ದರು. ಅನಂತರ ಅಲ್ಲಾಹನ ಮೇಲೆ ಭರವಸೆ ಇಡುತ್ತಿದ್ದರು. ಹಾಗಾಗಿ ಅವರ ಈಮಾನ್ ಅಜ್ಞಾನ ಮತ್ತು ಸೋಮಾರಿತನದ ಈಮಾನ್ ಆಗಿರಲಿಲ್ಲ, ಬದಲಾಗಿ ಅವರ ಈಮಾನ್ ನೇರ ಅನುಭವದ ಈಮಾನ್ ಆಗಿತ್ತು. ಯಾರು ಒಂದೇ ಸಮಯದಲ್ಲಿ ತವಕ್ಕುಲ್ ಮತ್ತು ಕರ್ಮ ಎರಡನ್ನೂ ಮಾಡುತ್ತಾನೋ, ಅಂದರೆ ಕರ್ಮ ಹಾಗೂ ತವಕ್ಕುಲ್ ಎರಡನ್ನೂ ಒಟ್ಟಿಗೆ ಇರಿಸುತ್ತಾನೋ ಅವನಿಗೆ ಮಾತ್ರ ನೇರ ಅನುಭವದ ಈಮಾನ್ ಇರುತ್ತದೆ." (ಉಸ್ವ ಎ ಹಸನ, ಅನ್ವಾರುಲ್ ಉಲೂಮ್, ಸಂಪುಟ-17,ಪುಟ-97-98)

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: "ನಮ್ಮ ನಬಿ(ಸ)ರಿಗೆ ಪವಿತ್ರ ಮಕ್ಕಾದಲ್ಲಿ ಹದಿಮೂರು ವರ್ಷಗಳ ಕಾಲ ಎದುರಾದ ಸಂಕಷ್ಟಗಳ ಕಾಲಘಟ್ಟದ ಚರಿತ್ರೆಯನ್ನು ಓದಿದರೆ ಅತ್ಯಂತ ಸ್ಪಷ್ಟವಾಗಿ ತಿಳಿದು ಬರುವುದೇನೆಂದರೆ; ಸಂಕಷ್ಟಗಳ ಸಮಯದಲ್ಲಿ ಒಬ್ಬ ಪರಿಪೂರ್ಣ ಸತ್ಯವಂತನು ಯಾವ ನೈತಿಕತೆಯನ್ನು ಪ್ರದರ್ಶಿಸಬೇಕೋ, ಅಂದರೆ ದೇವನ ಮೇಲೆ ತವಕ್ಕುಲ್ ಮಾಡುವುದು, ಗೋಳಾಡುವುದರಿಂದ ದೂರವಿರುವುದು, ತನ್ನ ಕರ್ತವ್ಯದಲ್ಲಿ ಸೋಮಾರಿಯಾಗದಿರುವುದು ಮತ್ತು ಯಾರ ಬೆದರಿಕೆಗೂ ಅಂಜದಿರುವುದು. ಇಂತಹ ಗುಣಗಳನ್ನು ಹಝ್ರತ್ ಪೈಗಂಬರ್(ಸ) ಎಷ್ಟರಮಟ್ಟಿಗೆ ಪ್ರದರ್ಶಿಸಿದರೆಂದರೆ, ಆ ಸ್ಥಿರತೆಯನ್ನು ಕಂಡು ಕಾಫಿರರು ವಿಶ್ವಾಸ ಕೈಗೊಂಡರು. 'ಯಾರಿಗೆ ದೇವನ ಮೇಲೆ ಸಂಪೂರ್ಣ ಭರವಸೆಯಿರುವುದಿಲ್ಲವೋ, ಅವರಿಗೆ ಇಂತಹ ಸ್ಥಿರತೆಯನ್ನು ತೋರಲು ಮತ್ತು ಈ ರೀತಿಯಲ್ಲಿ ಕಷ್ಟಗಳನ್ನು ಸಹಿಸಿಕೊಳ್ಳಲು ಸಾಧ್ಯವಿಲ್ಲ' ಎಂಬುದಕ್ಕೂ ಸಾಕ್ಷಿಯಾದರು." (ಇಸ್ಲಾಮಿ ಉಸೂಲ್ ಕೀ ಫ಼ಿಲಾಸಫ಼ಿ, ರೂಹಾನಿ ಖಝ಼ಾಈನ್, ಸಂಪುಟ–10, ಪುಟ–447)

ಹಝ್ರತ್ ಪೈಗಂಬರ್(ಸ) ದೇವನ ಮೇಲೆ ಭರವಸೆ ಇಡುತ್ತಾ, ಸಾಧನಗಳ ನೆರವನ್ನು ಸಹ ಪಡೆದುಕೊಂಡರು. ನಾನು ಹೇಳಿದಂತೆ ಇದರ ಬಗ್ಗೆ ಹಲವು ಘಟನೆಗಳು ವಿವರಿಸಲ್ಪಟ್ಟಿವೆ. ಅದರಂತೆ ಒಂದು ಹದೀಸ್ ಕೂಡ ಇದೆ. ಹಝ್ರತ್ ಉಬಯ್ ಬಿನ್ ಕಅಬ್(ರ)ರಿಂದ ವರದಿಯಾಗಿದೆ, ಅವರು ವಿವರಿಸಿದರು: ರಸೂಲುಲ್ಲಾಹ್(ಸ) ಮತ್ತು ಅವರ ಸಹಾಬಿಯರು ಮದೀನಾಕ್ಕೆ ಬಂದಾಗ ಹಾಗೂ ಅನ್ಸಾರಿಗಳು ಅವರಿಗೆ ಆಶ್ರಯ ನೀಡಿದಾಗ, ಅವರನ್ನು ಎದುರಿಸಲು ಇಡೀ ಅರೇಬಿಯರು ಒಟ್ಟುಗೂಡಿದರು. ಮುಸಲ್ಮಾನರ ಸ್ಥಿತಿ ಹೇಗಿತ್ತೆಂದರೆ, ಅವರು ತಮ್ಮೊಂದಿಗೆ ಆಯುಧಗಳಿಲ್ಲದೆ ಯಾವುದೇ ರಾತ್ರಿ ಅಥವಾ ಬೆಳಿಗ್ಗೆಯನ್ನು ಕಳೆಯುತ್ತಿರಲಿಲ್ಲ. ಮಲಗುವಾಗ, ಏಳುವಾಗ, ಎಲ್ಲ ಸಮಯದಲ್ಲೂ ಆಯುಧಗಳನ್ನು ತಮ್ಮ ಬಳಿಯೇ ಇಟ್ಟುಕೊಂಡಿದ್ದರು. ಅಲ್ಲಾಹನ ಮೇಲೆ ತವಕ್ಕುಲ್ ಕೂಡ ಇತ್ತು ಮತ್ತು ಯಾವ ಕ್ಷಣದಲ್ಲಾದರೂ ದಾಳಿಯಾಗಬಹುದು ಎಂಬ ಕಾರಣದಿಂದ ಸದಾ ಜಾಗರೂಕರಾಗಿರುವುದು ಹಾಗೂ ತಮ್ಮ ರಕ್ಷಣೆಯ ವ್ಯವಸ್ಥೆ ಮಾಡಿಕೊಳ್ಳುವುದು ಕೂಡ ಇತ್ತು.

ಇದರ ವಿವರಣೆ ಹಝ್ರತ್ ಆಯಿಶಾ(ರ)ರಿಂದ ವರದಿಯಾದ ಹದೀಸ್‌ನಲ್ಲೂ ಸಿಗುತ್ತದೆ: ರಸೂಲುಲ್ಲಾಹ್(ಸ) ಮದೀನಾಕ್ಕೆ ಬಂದಾಗ ಒಂದು ರಾತ್ರಿ ಅವರು ಎಚ್ಚರವಾಗಿಯೇ ಇದ್ದರು. ನಂತರ ಅವರು ಹೀಗೆ ಹೇಳಿದರು: 'ನನ್ನ ಸಹಾಬಿಯರಲ್ಲಿ ಯಾರಾದರೂ ಒಳ್ಳೆಯ ವ್ಯಕ್ತಿ ಇಂದು ರಾತ್ರಿ ನನ್ನ ಕಾವಲು ಕಾಯುತ್ತಿದ್ದರೆ ಎಷ್ಟು ಚೆನ್ನಾಗಿತ್ತು'. ಹಝ್ರತ್ ಆಯಿಶಾ(ರ) ಹೇಳುತ್ತಾರೆ: ನಾವಿನ್ನೂ ಅದೇ ಸ್ಥಿತಿಯಲ್ಲಿದ್ದೆವು, ಅಷ್ಟರಲ್ಲಿ ಆಯುಧಗಳ ಶಬ್ದ ಕೇಳಿಸಿತು. ರಸೂಲುಲ್ಲಾಹ್(ಸ) 'ಯಾರು?' ಎಂದು ಕೇಳಿದರು. ಅದಕ್ಕೆ 'ನಾನು ಸಅದ್ ಬಿನ್ ಅಬೀ ವಕ್ಕಾಸ್ ಆಗಿದ್ದೇನೆ' ಎಂಬ ಉತ್ತರ ಬಂತು. ರಸೂಲುಲ್ಲಾಹ್(ಸ) ಕೇಳಿದರು: 'ಇಲ್ಲಿಗೆ ಬರಲು ನಿನ್ನನ್ನು ಪ್ರೇರೇಪಿಸಿದ ಅಂಶ ಯಾವುದು?' ಅವರು ಹೇಳಿದರು: 'ನನ್ನ ಹೃದಯದಲ್ಲಿ ನಿಮ್ಮ ರಕ್ಷಣೆಯ ಬಗ್ಗೆ ಯೋಚನೆ ಉಂಟಾಯಿತು, ಆದ್ದರಿಂದ ನಾನು ನಿಮ್ಮ ಕಾವಲು ಕಾಯಲು ಬಂದಿರುವೆನು'. ಆಗ ರಸೂಲುಲ್ಲಾಹ್(ಸ) ಅವರಿಗಾಗಿ ದುಆ ಮಾಡಿದರು ಮತ್ತು ನಂತರ ನೆಮ್ಮದಿಯಿಂದ ಮಲಗಿದರು. ಮತ್ತೊಂದು ವರದಿಯಲ್ಲಿ ಹಝ್ರತ್ ಆಯಿಶಾ(ರ) ಇದೇ ಘಟನೆಯನ್ನು ವಿವರಿಸುತ್ತಾ, 'ನಾನು ಆಯುಧಗಳ ಶಬ್ದ ಕೇಳಿದೆ. ರಸೂಲುಲ್ಲಾಹ್(ಸ) ಯಾರು ಎಂದು ಕೇಳಿದಾಗ, ಅವರು ಸಅದ್ ಮತ್ತು ಹುದೈಫಾ ಎಂದು ಉತ್ತರಿಸಿದರು' (ಈ ವರದಿಯಲ್ಲಿ ಇಬ್ಬರು ವ್ಯಕ್ತಿಗಳ ಉಲ್ಲೇಖವಿದೆ). ಅವರು ನಬಿ(ಸ)ರ ಕಾವಲಿಗಾಗಿ ಬಂದಿದ್ದರು. ನಂತರ ರಸೂಲುಲ್ಲಾಹ್(ಸ) ಮಲಗಿದರು, ಎಷ್ಟರ ಮಟ್ಟಿಗೆಂದರೆ ಅವರ ತೀವ್ರವಾದ ಉಸಿರಾಟದ ಶಬ್ದವನ್ನು ನಾನು ಕೇಳಿದೆ. ಅದೇ ಸಮಯದಲ್ಲಿ ಈ ಆಯತ್ ಅವತೀರ್ಣವಾಯಿತು. (ಅಂದರೆ ವಹೀ ಅಥವಾ ದಿವ್ಯವಾಣಿಯು ಅವತೀರ್ಣವಾಗುವಾಗ ಅವರ ಉಸಿರಾಟ ತೀವ್ರವಾಗುತ್ತಿತ್ತು). ಆ ಸಮಯದಲ್ಲಿ 'ವಲ್ಲಾಹು ಯಅ್‌ಸಿಮುಕ ಮಿನನ್ನಾಸ್' (ಅಲ್ಲಾಹನು ನಿನ್ನನ್ನು ಜನರಿಂದ ರಕ್ಷಿಸುವನು) ಎಂಬ ಆಯತ್ ಅವತೀರ್ಣವಾಯಿತು. ನಂತರ ರಸೂಲುಲ್ಲಾಹ್(ಸ) ಡೇರೆಯಿಂದ ತಮ್ಮ ತಲೆಯನ್ನು ಹೊರಹಾಕಿ ಹೀಗೆ ಹೇಳಿದರು: 'ಜನರೇ, ನೀವೀಗ ಮರಳಿ ಹೋಗಬಹುದು, ಅಲ್ಲಾಹನು ನನ್ನ ರಕ್ಷಣೆಯ ಜವಾಬ್ದಾರಿಯನ್ನು ಹೊತ್ತುಕೊಂಡಿದ್ದಾನೆ'.
(ಅಲ್‌ಜಾಮಿ ಲಿಇಹ್‌ಕಾಮಿಲ್ ಖುರ್‌ಆನ್ (ತಫ್ಸೀರ್ ಖುರ್ತಬಿ) ಸೂರಃ ಅಲ್‌ಮಾಇದಃ, ಆಯತ್ 68, ಪುಟ–1104, ದಾರ್ ಇಬ್ನೆ ಹಝ್ಮ್)

ಎಲ್ಲಿಯವರೆಗೆ ಅಲ್ಲಾಹನ ಕಡೆಯಿಂದ ಭರವಸೆ ಸಿಕ್ಕಿರಲಿಲ್ಲವೋ ಅಥವಾ ಭವಿಷ್ಯವಾಣಿಯಾಗಿರಲಿಲ್ಲವೋ, ಅಲ್ಲಿಯವರೆಗೆ ಅವರು ಕಾವಲನ್ನು ಇರಿಸಿಕೊಂಡಿದ್ದರು. ಅಲ್ಲಾಹನ ಕಡೆಯಿಂದ ರಕ್ಷಣೆಯ ಭರವಸೆ ಸಿಕ್ಕಾಗ, ನಬಿ(ಸ) ಹೇಳಿದರು: 'ನೀವು ಹೋಗಿರಿ, ಈಗ ಅಲ್ಲಾಹನು ನನ್ನನ್ನು ರಕ್ಷಿಸುವನು'.

ರಸೂಲ್ ಕರೀಮ್(ಸ) ವಿವಿಧ ಅರಸರಿಗೆ ತಬ್ಲೀಗ್ (ಇಸ್ಲಾಮಿನ ಸಂದೇಶ) ಪತ್ರಗಳನ್ನು ಕಳುಹಿಸಿದಾಗ, ಪರ್ಷಿಯಾದ ಸಾಮ್ರಾಟನಾದ ಕಿಸ್ರಾ ರಾಜನು ಅಹಂಕಾರದಿಂದ ಆ ಪತ್ರವನ್ನು ಹರಿದು ಚೂರುಚೂರು ಮಾಡಿದನು. ಇದರ ಬಗ್ಗೆ ತಿಳಿದಾಗ, ಸಂಪೂರ್ಣ ತವಕ್ಕುಲ್‌ನಿಂದ ಪ್ರವಾದಿ(ಸ) ಹೀಗೆ ಹೇಳಿದರು: 'ದೇವನೇ ಸ್ವತಃ ಈ ಜನರನ್ನು ಛಿದ್ರಗೊಳಿಸಲಿ.' ಕಿಸ್ರಾ ರಾಜನು ಯೆಮನ್‌ನ ಗವರ್ನರ್ ಮೂಲಕ ಪ್ರವಾದಿಯವರನ್ನು ಬಂಧಿಸಲು ಇಬ್ಬರು ಸೈನಿಕರಿಗೆ ಪತ್ರ ನೀಡಿ ಮೊದಲೇ ಕಳುಹಿಸಿದ್ದನು. ನಬಿ(ಸ) ಆ ಪತ್ರದ ಸಾರಾಂಶವನ್ನು ಕೇಳಿದರು, ಅದರಲ್ಲಿ 'ತಕ್ಷಣವೇ ನಿಮ್ಮನ್ನು ನೀವು ಇವರಿಗೆ ಒಪ್ಪಿಸಬೇಕು' ಎಂದು ಬರೆಯಲಾಗಿತ್ತು. ಈ ಅಪಾಯಕಾರಿ ಸಮಯದಲ್ಲಿ, ಪ್ರವಾದಿ(ಸ) ಯಾವುದೇ ಗಾಬರಿಯನ್ನು ವ್ಯಕ್ತಪಡಿಸದೆ ಆ ದೂತರೊಡನೆ ಹೀಗೆ ಹೇಳಿದರು: 'ಇಂದು ರಾತ್ರಿ ಇಲ್ಲಿಯೇ ತಂಗಿರಿ, ನಾಳೆ ನಿಮಗೆ ಉತ್ತರಿಸುವೆನು'. ಮರುದಿನ ಬೆಳಿಗ್ಗೆ ಆ ಪ್ರತಿನಿಧಿಗಳೊಡನೆ ಹೀಗೆ ಹೇಳಿದರು: 'ನೀವು ಮರಳಿ ಹೋಗಿರಿ ಮತ್ತು ನಿಮ್ಮ ಯಜಮಾನನಾದ ಯೆಮನ್‌ನ ಗವರ್ನರ್‌ನೊಡನೆ ಹೋಗಿ ಹೀಗೆ ಹೇಳಿರಿ: ನನ್ನ ಪ್ರಭು ಇಂದು ರಾತ್ರಿ ನಿನ್ನ ಪ್ರಭುವನ್ನು, ಅಂದರೆ ಕಿಸ್ರಾನನ್ನು ಕೊಂದಿದ್ದಾನೆ.' ಅವರು ಈ ಮಾತುಗಳನ್ನು ಕೇಳಿ ದಂಗಾಗಿ ಹೋದರು ಮತ್ತು ಮರಳಿದರು. ಅದೇ ರಾತ್ರಿ ಖುಸ್ರು ಪರ್ವೇಝ್‌ನನ್ನು ಅವನ ಮಗ ಶೀರಾವಿಯಾ (ಸೈರಸ್) ಕೊಂದಿದ್ದನೆಂದು ನಂತರ ತಿಳಿದುಬಂತು. ಈ ಬೃಹತ್ ಘಟನೆಯು ಅಲ್ಲಾಹನ ಪವಾಡಸದೃಶ ರಕ್ಷಣೆ ಮತ್ತು ಹಝ್ರತ್ ಪೈಗಂಬರ್(ಸ)ರ ಅಪ್ರತಿಮ ತವಕ್ಕುಲ್‌ನ ನಿದರ್ಶನವಾಗಿದೆ.
(ಸೀರತ್ ಖಾತಮನ್ನಬೀಯೀನ್(ಸ), ಪುಟ–815–816)

ಹಝ್ರತ್ ಪೈಗಂಬರ್(ಸ) ಸಂಪೂರ್ಣ ತವಕ್ಕುಲ್‌ನೊಂದಿಗೆ ಅಲ್ಲಾಹನ ಅನುಮತಿಯಿಂದ ಯುದ್ಧಗಳಿಗೆ ಹೋಗುತ್ತಿದ್ದರು ಮತ್ತು ಹೊರಡುವಾಗ ಪ್ರಾರ್ಥಿಸುತ್ತಿದ್ದರು.

ಇದರ ಕುರಿತು ಹಝ್ರತ್ ಅನಸ್(ರ) ವಿವರಿಸಿದ್ದಾರೆ, ನಬಿ(ಸ) ಯುದ್ಧಕ್ಕಾಗಿ ಹೊರಡುವಾಗ ಹೀಗೆ ಹೇಳುತ್ತಿದ್ದರು:

'ಅಲ್ಲಾಹುಮ್ಮಾ ಅನ್ತ ಅಝ್ಉದೀ ವ ಅನ್ತ ನಸೀರೀ ವ ಬಿಕಾ ಉಕಾತಿಲು.'

ಅಂದರೆ, 'ಹೇ ಅಲ್ಲಾಹ್, ನೀನೇ ನನ್ನ ತೋಳಾಗಿದ್ದೀಯಾ, ನೀನೇ ನನ್ನ ಸಹಾಯಕನಾಗಿದ್ದೀಯಾ ಮತ್ತು ನಿನ್ನ ಸಹಾಯದಿಂದಲೇ ನಾನು ಯುದ್ಧ ಮಾಡುತ್ತೇನೆ.' (ಸುನನ್ ಅತ್ತಿರ್ಮಿದ್ಧಿ, ಅಬ್ವಾಬುದ್ದಾವಾತ್, ಬಾಬ್ ಫ಼ಿದ್ದುಆ ಇಝ಼ಾ ಗ಼ಝ಼ಾ, ಹದೀಸ್–3584)

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ:

"ಮನುಷ್ಯನಿಗೆ ಕಷ್ಟದ ಸಮಯದಲ್ಲಿ ಆತಂಕ ಉಂಟಾಗುವುದಾದರೂ, ಆತ ಎಂದಿಗೂ ತವಕ್ಕುಲನ್ನು ಕೈಬಿಡಬಾರದು.

ಹಝ್ರತ್ ಪೈಗಂಬರ್(ಸ)ರಿಗೂ ಬದ್ರ್ ಯುದ್ಧದ ಸಂದರ್ಭದಲ್ಲಿ ತೀವ್ರ ಆತಂಕ ಉಂಟಾಗಿತ್ತು, ಹಾಗಾಗಿ ಅವರು ಹೀಗೆ ದುಆ ಮಾಡಿದರು: 'ಯಾ ರಬ್, ಇನ್ ಅಹ್ಲಕ್ತ ಹಾಝಿಹಿಲ್ ಇಸಾಬತಾ ಫಲನ್ ತುಅ್‌ಬದ ಫಿಲ್ ಅರ್ಝ್ ಅಬದಾ.' ಅಂದರೆ, 'ಹೇ ನನ್ನ ಪ್ರಭು, ನೀನು ಈ ಗುಂಪನ್ನು ನಾಶಮಾಡಿದರೆ, ನಂತರ ಭೂಮಿಯಲ್ಲಿ ನಿನ್ನ ಆರಾಧನೆಯು ಎಂದಿಗೂ ಮಾಡಲ್ಪಡುವುದಿಲ್ಲ.' ಆದರೆ ನಬಿ(ಸ)ರ ಈ ಆತಂಕ ಕೇವಲ ಮಾನವ ಸಹಜ ಗುಣವಾಗಿತ್ತು. ಏಕೆಂದರೆ ಇನ್ನೊಂದೆಡೆ ಅವರು ತವಕ್ಕುಲನ್ನು ಎಂದಿಗೂ ಕೈಬಿಡಲಿಲ್ಲ. ಅವರ ದೃಷ್ಟಿ ಆಕಾಶದ ಕಡೆಗಿತ್ತು ಮತ್ತು 'ದೇವನು ನನ್ನನ್ನು ಖಂಡಿತವಾಗಿಯೂ ವ್ಯರ್ಥ ಮಾಡುವುದಿಲ್ಲ' ಎಂಬ ದೃಢವಿಶ್ವಾಸವಿತ್ತು. ನಿರಾಶೆ, ಹತಾಶೆಯನ್ನು ಹತ್ತಿರ ಸುಳಿಯಲು ಬಿಡಲಿಲ್ಲ. ಇಂತಹ ಆತಂಕಗಳು ಬರುವುದು ಮಾನವ ನೈತಿಕತೆ ಮತ್ತು ಹಂತಗಳ ಪೂರ್ಣಗೊಳಿಸುವಿಕೆಗೆ ಅವಶ್ಯಕವಾಗಿದೆ. ಆದರೆ ಮನುಷ್ಯನು ಹತಾಶೆಯನ್ನು ತನ್ನ ಹತ್ತಿರ ಸುಳಿಯಲು ಬಿಡಬಾರದು, ಏಕೆಂದರೆ ನಿರಾಶೆಯು ಕಾಫಿರರ ಗುಣವಾಗಿದೆ. ಮನುಷ್ಯನಿಗೆ ವಿವಿಧ ರೀತಿಯ ಆಲೋಚನೆಗಳು ಆತಂಕದ ಅನುಮಾನಗಳನ್ನು ಹುಟ್ಟುಹಾಕುತ್ತವೆ. ಆದರೆ ಈಮಾನ್ ಆ ಅನುಮಾನಗಳನ್ನು ದೂರ ಮಾಡುತ್ತದೆ. ಮಾನವ ಸಹಜ ಗುಣವು ಆತಂಕವನ್ನು ತರಿಸಿದರೆ, ಈಮಾನ್ ಅದನ್ನು ಹೋಗಲಾಡಿಸುತ್ತದೆ."
(ಮಲ್‌ಫ಼ೂಝ಼ಾತ್, ಸಂಪುಟ–4, ಪುಟ–271–272, 2022)

ತದನಂತರ ಅಲ್ಲಾಹನ ಮೇಲಿನ ತವಕ್ಕುಲ್‌ನ ಈ ಪ್ರಸಿದ್ಧ ಘಟನೆಯಿದೆ: ಪ್ರವಾದಿಯವರನ್ನು ಒಂಟಿಯಾಗಿ ಕಂಡು ಶತ್ರುವೊಬ್ಬನು ಅವರ ಮೇಲೆ ಖಡ್ಗ ಝಳಪಿಸಿದನು, ಆದರೆ ಅವರು ಯಾವುದೇ ಗಾಬರಿಯಿಲ್ಲದೆ, 'ಅಲ್ಲಾಹನು ನನ್ನನ್ನು ನಿನ್ನಿಂದ ರಕ್ಷಿಸುವನು' ಎಂದು ಹೇಳಿದರು. (ಸಹೀಹ್ ಬುಖ಼ಾರಿ, ಕಿತಾಬುಲ್ ಮಗ಼ಾಝಿ, ಬಾಬ್ ಗ಼ಝ್ವ ಝ಼ಾತಿರ್ರಿಖಾ, ಹದೀಸ್–4135, ಅನುವಾದ ಸಂಪುಟ–8,

ಪುಟ–293–294)

ಈ ಘಟನೆಯನ್ನು ವಿವರಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್(ರ) ತಮ್ಮ ಶೈಲಿಯಲ್ಲಿ ಹೀಗೆ ತಿಳಿಸಿದ್ದಾರೆ: "ಅಲ್ಲಾಹನ ಮೇಲಿನ ತವಕ್ಕುಲ್‌ನ ಸ್ಥಿತಿ ಹೇಗಿತ್ತೆಂದರೆ, ಓರ್ವ ವ್ಯಕ್ತಿ ಪ್ರವಾದಿಯವರನ್ನು ಒಂಟಿಯಾಗಿ ಕಂಡು ಖಡ್ಗವೆತ್ತಿ, 'ಈಗ ನಿನ್ನನ್ನು ನನ್ನಿಂದ ಯಾರು ರಕ್ಷಿಸಬಲ್ಲರು?' ಎಂದು ಕೇಳಿದನು. ಆ ಸಮಯದಲ್ಲಿ ತಾವು ನಿರಾಯುಧರಾಗಿದ್ದರೂ ಮತ್ತು ಮಲಗಿದ್ದ ಕಾರಣ ಚಲಿಸಲು ಸಾಧ್ಯವಿಲ್ಲದಿದ್ದರೂ, ಅತ್ಯಂತ ನೆಮ್ಮದಿ ಮತ್ತು ಶಾಂತಿಯಿಂದ 'ಅಲ್ಲಾಹ್' ಎಂದು ಉತ್ತರಿಸಿದರು. ಈ ಪದವು ಎಷ್ಟೊಂದು ನಂಬಿಕೆ ಮತ್ತು ದೃಢತೆಯಿಂದ ಅವರ ಬಾಯಿಂದ ಹೊರಬಂತೆಂದರೆ, ಆ ಕಾಫಿರನ ಹೃದಯವೂ ಅವರ ಈಮಾನಿನ ಔನ್ನತ್ಯವನ್ನು ಮತ್ತು ಪರಿಪೂರ್ಣ ನಂಬಿಕೆಯನ್ನು ಒಪ್ಪಿಕೊಳ್ಳದೆ ಇರಲಾಗಲಿಲ್ಲ. ಅವನ ಕೈಯಿಂದ ಖಡ್ಗ ಕೆಳಗೆ ಬಿತ್ತು ಮತ್ತು ಯಾರು ಅವರನ್ನು ಕೊಲ್ಲಲು ಬಂದಿದ್ದನೋ ಅವನು ಅವರ ಮುಂದೆ ಅಪರಾಧಿಯಂತೆ ನಿಂತನು." (ದೀಬಾಚ' ತಫ್ಸೀರುಲ್ ಖುರ್‌ಆನ್, ಅನ್ವಾರಲ್ ಉಲೂಮ್, ಸಂಪುಟ–20, ಪುಟ–386)

ಅಹ್‌ಝಾಬ್ ಯುದ್ಧದ ಸಮಯದಲ್ಲಿ ಮುಸಲ್ಮಾನರ ಮೇಲೆ ಅತ್ಯಂತ ಕಷ್ಟದ ದಿನಗಳಿದ್ದವು. ಮದೀನಾದಲ್ಲಿಯೇ ಉಳಿದುಕೊಂಡು ಶತ್ರುಗಳನ್ನು ಎದುರಿಸಲು ನಿರ್ಧರಿಸಲಾಗಿತ್ತು. ಇದು ಯಾವುದೇ ಭಯ ಅಥವಾ ಅಲ್ಲಾಹನ ಮೇಲಿನ ತವಕ್ಕುಲ್‌ನ ಕೊರತೆಯಿಂದಾಗಿರಲಿಲ್ಲ, ಬದಲಾಗಿ ಯುದ್ಧ ತಂತ್ರದ ಭಾಗವಾಗಿತ್ತು. ಶತ್ರುಗಳ ಹಠಾತ್ ದಾಳಿಯಿಂದ ರಕ್ಷಣೆ ಪಡೆಯಲು ಮದೀನಾದ ಸುತ್ತಲೂ ಕಂದಕವನ್ನು ಅಗೆಯಲಾಗಿತ್ತು. ಮುಸಲ್ಮಾನರ ಸ್ಥಿತಿ ಹೇಗಿತ್ತೆಂದರೆ, ಅವರಲ್ಲಿ ಹೆಚ್ಚಿನವರು ಬಡವರಾಗಿದ್ದರು ಮತ್ತು ದಿನಗೂಲಿ ಮಾಡಿ ಹೊಟ್ಟೆ ಹೊರೆಯುತ್ತಿದ್ದರು. ಆದರೂ ಇಂತಹ ಬಡತನದ ನಡುವೆಯೂ, ದಾಳಿಯಿಂದ ರಕ್ಷಣೆ ಪಡೆಯಲು ಎಲ್ಲರೂ ಒಟ್ಟುಗೂಡಿ ಈ ಕಂದಕ ತೋಡುವ ಕಾರ್ಯದಲ್ಲಿ ಪಾಲ್ಗೊಂಡರು. ಪ್ರತಿದಿನ ದುಡಿಯಲು ಸಾಧ್ಯವಾಗದಿದ್ದವರು ಹಸಿವಿನಿಂದ ಇರುತ್ತಿದ್ದರು. ಆ ಸಮಯದಲ್ಲಿ ಇಡೀ ಅರೇಬಿಯಾದ ಹಲವಾರು ಗೋತ್ರಗಳು ಒಟ್ಟುಗೂಡಿ ದಾಳಿಕೋರರಾಗಿ ಬಂದಿದ್ದವು. ವಿವಿಧ ವರದಿಗಳಲ್ಲಿ ಅವರ ಸಂಖ್ಯೆ ವಿಭಿನ್ನವಾಗಿ ಹೇಳಲಾಗಿದೆ.

(ಸೀರತ್ ಖ಼ಾತಮನ್ನಬೀಯೀನ್(ಶ). ಹಝ್ರತ್ ಮಿರ್ಝಾ ಬಶೀರರ್ ಅಹ್ಮದ್ ಸಾಹಿಬ್(ರ) ಎಂ.ಎ, ಪುಟ–574)

ಏನೇ ಆದರೂ, ಕನಿಷ್ಠ ಸಂಖ್ಯೆ ಹತ್ತು ಸಾವಿರ ಎಂದು ಹೇಳಲಾಗಿದೆ; ಕೆಲವು ಕಡೆ ಹದಿನೈದು ಸಾವಿರ, ಮತ್ತೆ ಕೆಲವು ಕಡೆ ಇಪ್ಪತ್ತನಾಲ್ಕು ಸಾವಿರ ಎಂದು ಉಲ್ಲೇಖಿಸಲಾಗಿದೆ. ಹಾಗೆ ನೋಡಿದರೆ, ಮದೀನಾದ ಜನಸಂಖ್ಯೆಗೆ ಹೋಲಿಸಿದರೆ ಹತ್ತು ಸಾವಿರ ದಾಳಿಕೋರರ ಸಂಖ್ಯೆಯೇ ಬಹು ದೊಡ್ಡ ಸಂಖ್ಯೆಯಾಗಿತ್ತು. ಆ ಸಣ್ಣ ನಗರದ ದೃಷ್ಟಿಯಿಂದ ಇದು ಬಹುದೊಡ್ಡ ಸೈನ್ಯವಾಗಿತ್ತು. ಏನೇ ಆಗಲಿ, ಮುಸಲ್ಮಾನರು ತಮ್ಮ ಬಡತನ ಮತ್ತು ಸಂಕಷ್ಟದ ನಡುವೆಯೂ, ಹಾಗೂ ಕಡಿಮೆ ಸಂಖ್ಯೆಯಲ್ಲಿದ್ದರೂ ಇಷ್ಟೊಂದು ದೊಡ್ಡ ಸೈನ್ಯವನ್ನು ಎದುರಿಸಲು ಸಿದ್ಧರಾಗಿದ್ದರು. ಮತ್ತು 'ನಮ್ಮ ಸಂಖ್ಯೆ ಕಡಿಮೆಯಿದೆ, ಆದ್ದರಿಂದ ನಗರದೊಳಗಿದ್ದುಕೊಂಡೇ ಎದುರಿಸಬೇಕು' ಎಂಬುದು ಯುದ್ಧ ತಂತ್ರವಾಗಿತ್ತು.

ಅಲ್ಲಾಹನು ಮುಂಚಿತವಾಗಿಯೇ ಎಚ್ಚರಿಸಿದ್ದದ್ದು ಕೂಡ ಅಲ್ಲಾಹನ ಕೃಪೆಯಾಗಿತ್ತು. ಮುಸಲ್ಮಾನರ ಈಮಾನಿನಲ್ಲಿ ದೃಢತೆಯೂ ಬಂದಿತ್ತು ಮತ್ತು ಶತ್ರುಗಳ ದೊಡ್ಡ ಸಂಖ್ಯೆಯನ್ನು ಕಂಡು ಮುಸಲ್ಮಾನರು ಆತಂಕಿತರಾಗಲಿಲ್ಲ. ಬದಲಿಗೆ, ಹಝ್ರತ್ ಪೈಗಂಬರ್(ಸ)ರ ತವಕ್ಕುಲ್, ಆ ಸಮಯದಲ್ಲಿ ಮುಸಲ್ಮಾನರ ತವಕ್ಕುಲನ್ನು ಮತ್ತಷ್ಟು ಹೆಚ್ಚಿಸಿತ್ತು. ವಿರೋಧಿಗಳು ಮತ್ತು ಕಪಟಿಗಳ ಮಾತುಗಳನ್ನು ಕೇಳಿದಾಗ್ಯೂ ಅವರ ಧೈರ್ಯ ಕುಂದಿರಲಿಲ್ಲ. ನಂತರ ನೋಡಿ, ಸ್ಥಿರತೆ ಮತ್ತು ತವಕ್ಕುಲ್‌ನ ಪರಿಣಾಮವಾಗಿ ಅಲ್ಲಾಹನು ಎಂತಹ ವ್ಯವಸ್ಥೆ ಮಾಡಿದನೆಂದರೆ, ಬಿರುಗಾಳಿ ಮತ್ತು ಚಂಡಮಾರುತವು ಕಾಫಿರರನ್ನು ಭಯಭೀತಗೊಳಿಸಿತು ಮತ್ತು ಅವರು ಓಡಿಹೋದರು. ಅವರು ಎಂತಹ ಗಡಿಬಿಡಿಯಲ್ಲಿ ಓಡಿಹೋದರೆಂದರೆ, ತಮ್ಮ ಆಹಾರ ಮತ್ತು ಇತರ ಬಹಳಷ್ಟು ಸಾಮಗ್ರಿಗಳನ್ನು ಬಿಟ್ಟು ಹೋದರು, ಅದು ಮುಸಲ್ಮಾನರಿಗೆ ಉಪಯೋಗಕ್ಕೆ ಬಂತು. ಇದು ಅಲ್ಲಾಹನ ಮೇಲಿನ ತವಕ್ಕುಲ್‌ನ ಪ್ರತಿಫಲವಾಗಿತ್ತು.

ಅಹ್‌ಝಾಬ್ ಯುದ್ಧದಲ್ಲಿಯೇ, ಸ್ವಲ್ಪ ಪ್ರಮಾಣದ ಊಟವು ಇಡೀ ಸೈನ್ಯಕ್ಕೆ ಸಾಕಾದ ಘಟನೆಯೂ ಸಿಗುತ್ತದೆ. ಇದು ಪವಾಡವಾಗಿರುವ ಜೊತೆಗೇ ಅಲ್ಲಾಹನ ಮೇಲಿನ ತವಕ್ಕುಲ್‌ನ ಒಂದು ದೊಡ್ಡ ಉದಾಹರಣೆಯೂ ಆಗಿದೆ. ಒಂದು ವರದಿಯಲ್ಲಿ, ಹಝ್ರತ್ ಜಾಬಿರ್ ಬಿನ್ ಅಬ್ದುಲ್ಲಾ ಅನ್ಸಾರಿ(ರ) ವಿವರಿಸುತ್ತಾರೆ: ನಾವು ಕಂದಕದ ದಿನ, ಅಂದರೆ ಅಹ್‌ಝಾಬ್ ಯುದ್ಧದ ದಿನ ನೆಲವನ್ನು ಅಗೆಯುತ್ತಿದ್ದಾಗ ಒಂದು ಗಟ್ಟಿಯಾದ ಕಲ್ಲು ಎದುರಾಯಿತು. ಅವರು ನಬಿ(ಸ) ಬಳಿ ಬಂದು, ಕಂದಕದಲ್ಲಿ ಒಂದು ಕಲ್ಲು ಸಿಕ್ಕಿದೆ ಎಂದು ಹೇಳಿದರು. ಪ್ರವಾದಿ(ಸ) ಹೇಳಿದರು: 'ಅದನ್ನು ಒಡೆಯಲು ನಾನು ಬರುತ್ತೇನೆ'. ಅವರು ಎದ್ದು ನಿಂತರು, ಮತ್ತು ಅವರ ಹೊಟ್ಟೆಗೆ ಕಲ್ಲನ್ನು ಕಟ್ಟಲಾಗಿತ್ತು. ಆ ಕಾಲದಲ್ಲಿ, ಹೊಟ್ಟೆ ಖಾಲಿಯಿದ್ದಾಗ ಆಸರೆಗಾಗಿ ಕಲ್ಲುಗಳನ್ನು ಕಟ್ಟಿಕೊಳ್ಳುತ್ತಿದ್ದರು. ಅವರು ಮೂರು ದಿನಗಳಿಂದ ಏನನ್ನೂ ತಿಂದಿರಲಿಲ್ಲ, ಅಷ್ಟೊಂದು ಹಸಿವಿನಲ್ಲಿ ಇದ್ದರು. ನಬಿ(ಸ) ಗುದ್ದಲಿಯನ್ನು ತೆಗೆದುಕೊಂಡು ಆ ಕಲ್ಲಿಗೆ ಹೊಡೆದಾಗ, ಅದು ಪುಡಿಯಾಗಿ ಜಾರುವ ಮರಳಿನ ರಾಶಿಯಾಯಿತು. ಪ್ರವಾದಿ(ಸ)ರ ಈ ಸ್ಥಿತಿಯನ್ನು ಕಂಡು ನಾನು ಹೇಳಿದೆ: 'ಯಾ ರಸೂಲಲ್ಲಾಹ್, ನನಗೆ ಮನೆಗೆ ಹೋಗಲು ಅನುಮತಿ ನೀಡಿರಿ.' ನಾನು ಹೋಗಿ ನನ್ನ ಹೆಂಡತಿಯೊಡನೆ ಹೀಗೆ ಹೇಳಿದೆ: 'ನಾನು ನಬಿ(ಸ)ರ ಸ್ಥಿತಿಯನ್ನು ಕಂಡೆನು, ಅದನ್ನು ನನಗೆ ಸಹಿಸಲು ಸಾಧ್ಯವಲ್ಲ. (ಅಂದರೆ ಹಸಿವಿನ ಕಾರಣದಿಂದ ಅವರು ಹೊಟ್ಟೆಯ ಮೇಲೆ ಕಲ್ಲು ಕಟ್ಟಿಕೊಂಡಿರುವುದನ್ನು ನಾನು ನೋಡಿದ್ದೇನೆ). ನಿನ್ನ ಬಳಿ ಏನಾದರೂ ಆಹಾರವಿದೆಯೇ?' ಅವಳು ಹೇಳಿದಳು: 'ಸ್ವಲ್ಪ ಬಾರ್ಲಿ ಮತ್ತು ಒಂದು ಆಡಿನ ಮರಿಯಿದೆ'. ಅದರಂತೆ ನಾನು ಆ ಮರಿಯನ್ನು ಕೊಯ್ದೆನು ಮತ್ತು ಅವಳು ಬಾರ್ಲಿಯನ್ನು ಪುಡಿಮಾಡಿದಳು, ಮತ್ತು ನಾವು ಮಣ್ಣಿನ ಮಡಕೆಯಲ್ಲಿ (ಅಥವಾ ಕಲ್ಲಿನ ಮಡಕೆಯಲ್ಲಿ) ಮಾಂಸವನ್ನು ಹಾಕಿದೆವು. ನಂತರ ನಾನು ನಬಿ(ಸ)ರ ಬಳಿ ಬಂದೆ. ಆ ವೇಳೆಗೆ ಹಿಟ್ಟನ್ನು ನಾದಿ ಹುದುಗು ಬರಿಸಲಾಗಿತ್ತು ಮತ್ತು ಒಲೆಯ ಮೇಲಿದ್ದ ಮಡಕೆಯಲ್ಲಿ ಅಡುಗೆ ಸಿದ್ಧವಾಗುತ್ತಿತ್ತು. ನಾನು ಹೇಳಿದೆ: 'ಯಾ ರಸೂಲಲ್ಲಾಹ್, ನನ್ನ ಬಳಿ ಸ್ವಲ್ಪ ಊಟವಿದೆ. ನೀವು ಮತ್ತು ನಿಮ್ಮೊಡನೆ ಇಬ್ಬರು–ಮೂವರನ್ನು ಕರೆದುಕೊಂಡು ಬಂದು ಊಟ ಮಾಡಿರಿ'. 'ಊಟ ಎಷ್ಟಿದೆ?' ಎಂದು ನಬಿ(ಸ) ಕೇಳಿದರು. ನಾನು ಅವರಿಗೆ ವಿವರಣೆ ನೀಡಿದಾಗ, ರಸೂಲುಲ್ಲಾಹ್ (ಸ) ಹೇಳಿದರು: 'ಇದು ಬಹಳಷ್ಟಿದೆ. ಒಂದು ಆಡುಮರಿಯ ಮಾಂಸ ಮತ್ತು ಸ್ವಲ್ಪ ಬಾರ್ಲಿ ಇದೆ, ಏನೂ ತೊಂದರೆಯಿಲ್ಲ, ಊಟ ಬಹಳಷ್ಟಿದೆ ಮತ್ತು ಉತ್ತಮವಾಗಿದೆ'

ನಂತರ ನಬಿ(ಸ) ಹೇಳಿದರು: 'ನಾನು ಬರುವವರೆಗೂ ನಿನ್ನ ಹೆಂಡತಿಯೊಡನೆ ಒಲೆಯಿಂದ ಮಡಕೆಯನ್ನು ಕೆಳಗಿಳಿಸಬೇಡ ಹಾಗೂ ತಂದೂರಿಯಿಂದ ರೊಟ್ಟಿಯನ್ನು ತೆಗೆಯಬೇಡ ಎಂದು ಹೇಳು'. ಆಮೇಲೆ ಪ್ರವಾದಿ(ಸ) ಸಹಾಬಿಯರೊಡನೆ 'ಎದ್ದೇಳಿ' ಎಂದರು. ಅದರಂತೆ ಮುಹಾಜಿರ್ ಮತ್ತು ಅನ್ಸಾರಿಗಳು ಎದ್ದು ನಿಂತರು. ಹಝ್ರತ್ ಜಾಬಿರ್(ರ) ತಮ್ಮ ಪತ್ನಿಯ ಬಳಿ ಹೋಗಿ ಹೀಗೆ ಹೇಳಿದರು: 'ದೇವನು ನಿನಗೆ ಒಳಿತು ಮಾಡಲಿ, ನಬಿ(ಸ) ಮುಹಾಜಿರ್, ಅನ್ಸಾರಿಗಳು ಮತ್ತು ಅವರೊಂದಿಗಿದ್ದ ಎಲ್ಲರನ್ನೂ ಕರೆದುಕೊಂಡು ಬಂದುಬಿಟ್ಟಿದ್ದಾರೆ'. ಅವರ ಪತ್ನಿ ಕೇಳಿದರು: 'ರಸೂಲುಲ್ಲಾಹ್(ಸ) ನಿಮ್ಮ ಬಳಿ ಊಟದ ಬಗ್ಗೆ ಏನಾದರೂ ಕೇಳಿದ್ದರೇ?'. 'ಹೌದು' ಎಂದು ಅವರು ಉತ್ತರಿಸಿದರು ಮತ್ತು ನಂತರ ನಡೆದದ್ದೆಲ್ಲವನ್ನೂ ವಿವರಿಸಿದರು. ನಬಿ(ಸ) ಸಹಾಬಿಯರನ್ನು ತಮ್ಮೊಂದಿಗೆ ಕರೆದೊಯ್ದರು ಮತ್ತು ಹೀಗೆ ಹೇಳಿದರು: 'ಒಳಗೆ ಬನ್ನಿ, ನೂಕುನುಗ್ಗಲು ಮಾಡಬೇಡಿ (ಅಂದರೆ ಅವಸರ ಪಡುವ ಅಗತ್ಯವಿಲ್ಲ, ಮನೆಯೊಳಗೆ ಹೋಗಿ ಆರಾಮವಾಗಿ ಕುಳಿತುಕೊಳ್ಳಿ)'. ಪ್ರವಾದಿ(ಸ) ರೊಟ್ಟಿಗಳನ್ನು ತುಂಡು ಮಾಡಿ, ಅದರ ಮೇಲೆ ಮಾಂಸವನ್ನು ಹಾಕಿ ಸಹಾಬಿಯರಿಗೆ ನೀಡಲಾರಂಭಿಸಿದರು. ಬಟ್ಟಿಯಿಂದ ಮುಚ್ಚಿದ್ದ ರೊಟ್ಟಿಯ ತುಂಡನ್ನು ತೆಗೆದು, ಸ್ವಲ್ಪ ಸಾರು ಹಾಕಿ ಸಹಾಬಿಯರಿಗೆ ಕೊಡುತ್ತಿದ್ದರು. ಅವರು ಮಡಕೆ ಮತ್ತು ತಂದೂರಿಯಿಂದ ಏನನ್ನಾದರೂ ತೆಗೆದುಕೊಳ್ಳುವಾಗ ಮತ್ತೆ ಅದನ್ನು ಮುಚ್ಚುತ್ತಿದ್ದರು. ಸಹಾಬಿಯರ ಹೊಟ್ಟೆ ತುಂಬುವವರೆಗೂ ಅವರು ಇದೇ ರೀತಿ ಮಾಡಿದರು. ಎಲ್ಲರ ಹೊಟ್ಟೆ ತುಂಬಿತು ಮತ್ತು ಒಂದಿಷ್ಟು ಊಟ ಉಳಿಯಿತು. ರಸೂಲುಲ್ಲಾಹ್(ಸ) ಹಝ್ರತ್ ಜಾಬಿರ್(ರ)ರ ಪತ್ನಿಯೊಡನೆ, 'ಈಗ ನೀವೂ ಇದನ್ನು ತಿನ್ನಿರಿ ಮತ್ತು ಉಡುಗೊರೆಯಾಗಿಯೂ ಕಳುಹಿಸಿರಿ, ಏಕೆಂದರೆ ಜನರು ಬಹಳ ಹಸಿವಿನಲ್ಲಿದ್ದಾರೆ' ಎಂದು ಹೇಳಿದರು. (ಸಹೀಹ್ ಅಲ್‌ಬುಖ಼ಾರಿ ಕಿತಾಬುಲ್ ಜಿಹಾದ್ ವಸ್ಸೈರ್, ಮನ್ ಖಾದ ದಾಬ್ಬತು ಗೈರಿಹಿ ಫಿಲ್ ಹರ್ಬಿ, ಹದೀಸ್–2864, ಅನುವಾದ ಸಂಪುಟ–5, ಪುಟ–226) ಇದರಲ್ಲಿ ತವಕ್ಕುಲ್ ಕೂಡ ಇತ್ತು ಮತ್ತು ಪ್ರವಾದಿಯವರ ಸಮೃದ್ಧಿಯ ಪ್ರಾರ್ಥನೆಯೂ ಇತ್ತು, ಹಾಗಾಗಿ ಅದರಲ್ಲಿ ಸಮೃದ್ಧಿಯೂ ಲಭಿಸಿತು.

ಮತ್ತೊಂದು ವರದಿಯಲ್ಲಿ ಬಂದಿರುವಂತೆ, ಓರ್ವ ವ್ಯಕ್ತಿ ಹಝ್ರತ್ ಬರಾಅ್ ಬಿನ್ ಆಝಿಬ್(ರ)ರೊಡನೆ ಕೇಳಿದನು: 'ನೀವು ಹುನೈನ್ ಯುದ್ಧದಲ್ಲಿ ರಸೂಲುಲ್ಲಾಹ್(ಸ)ರನ್ನು ಬಿಟ್ಟು ಓಡಿಹೋಗಿದ್ದಿರಾ?' ಅವರು ಹೇಳಿದರು: 'ಹೌದು, ಆದರೆ ರಸೂಲುಲ್ಲಾಹ್(ಸ) ಯುದ್ಧಭೂಮಿಯನ್ನು ಬಿಟ್ಟು ಓಡಲಿಲ್ಲ'. ಹವಾಝಿನ್ ಗೋತ್ರದವರು ಅತ್ಯುತ್ತಮ ಬಿಲ್ಲುಗಾರರಾಗಿದ್ದರು. ನಮ್ಮ ಹಾಗೂ ಅವರ ಮುಖಾಮುಖಿಯಾದಾಗ, ನಾವು ಅವರ ಮೇಲೆ ದಾಳಿ ಮಾಡಿದೆವು ಮತ್ತು ಅವರು ಸೋತರು. ಮುಸಲ್ಮಾನರು ಯುದ್ಧದ ಸಂಪತ್ತುಗಳನ್ನು ಸಂಗ್ರಹಿಸಲು ಮುಂದಾದಾಗ, ಅವರು ಎದುರಿನಿಂದ ಬಾಣಗಳನ್ನು ಸುರಿಸಲಾರಂಭಿಸಿದರು. ಆದರೆ

ರಸೂಲುಲ್ಲಾಹ್(ಸ) ತಮ್ಮ ಜಾಗದಿಂದ ಕದಲಲಿಲ್ಲ. ನಾನು ರಸೂಲುಲ್ಲಾಹ್(ಸ)ರನ್ನು ನೋಡಿದೆ, ಅವರು ತಮ್ಮ ಬಿಳಿ ಹೇಸರಗತ್ತೆಯ ಮೇಲೆ ಕುಳಿತಿದ್ದರು ಮತ್ತು ಅಬೂ ಸುಫಿಯಾನ್ ಬಿನ್ ಹಾರಿಸ್ ಬಿನ್ ಅಬ್ದುಲ್ ಮುತ್ತಲಿಬ್ ಅದರ ಲಗಾಮನ್ನು ಹಿಡಿದಿದ್ದರು. ಮತ್ತು ನಬಿ(ಸ) ಈ ಪದ್ಯವನ್ನು ಪಠಿಸುತ್ತಿದ್ದರು:

"ಅನನ್ನಬಿಯ್ಯು ಲಾ ಕಝಿಬ್, ಅನಬ್ನು ಅಬ್ದಿಲ್ ಮುತ್ತಲಿಬ್".

ಅಂದರೆ, "ನಾನು ವಾಗ್ದತ್ತ ಪ್ರವಾದಿಯಾಗಿದ್ದೇನೆ ಮತ್ತು ಇದರಲ್ಲಿ ಯಾವುದೇ ಸುಳ್ಳಿಲ್ಲ; ನಾನು ಅಬ್ದುಲ್ ಮುತ್ತಲಿಬ್‌ನ ಪುತ್ರನಾಗಿದ್ದೇನೆ." (ಸಹೀಹ್ ಬುಖಾರಿ ಕಿತಾಬುಲ್ ಜಿಹಾದ್ ವಸ್ಸೈರ್, ಬಾಬ್ ಮನ್‌ಖಾದ ದಾಬ್ಬತಿ ಗೈರಹಿ ಫ಼ಿಲ್ ಹರ್ಬಿ, ಹದೀಸ್–2864, ಅನುವಾದ ಸಂಪುಟ–5, ಪಉಟ–226)

ಈ ಘಟನೆಯನ್ನು ಹಝ್ರತ್ ಮುಸ್ಲಿಹ್ ಮೌಊದ್(ರ) ಉಲ್ಲೇಖಿಸಿದ್ದಾರೆ ಮತ್ತು ಸ್ವಲ್ಪ ವಿವರವಾಗಿ ಹೀಗೆ ತಿಳಿಸಿದ್ದಾರೆ: "ನಾನು ಅಬ್ದುಲ್ ಮುತ್ತಲಿಬ್‌ನ ಪುತ್ರನಾಗಿದ್ದೇನೆ ಎಂದು ಅವರು ಹೇಳುವುದರ ಅರ್ಥವೇನೆಂದರೆ, ಶತ್ರುಗಳ ದಾಳಿಯು ಎಷ್ಟೊಂದು ತೀವ್ರವಾಗಿದೆ ಎಂದರೆ ನಾಲ್ಕು ಸಾವಿರ ಬಿಲ್ಲುಗಾರರು ಬಾಣಗಳ ಮಳೆಗರೆಯುತ್ತಿದ್ದಾರೆ. ಇಂತಹ ಸ್ಥಿತಿಯಲ್ಲಿ ನಾನು ಮುಂದೆ ಸಾಗುತ್ತಿರುವುದು ಮಾನವನ ಸಾಮರ್ಥ್ಯಕ್ಕಿಂತ ಬಹಳ ಮೇಲಿರುವಂತೆ ಕಾಣುತ್ತದೆ, ನನಗೆ ಯಾವುದೇ ಭಯವಿಲ್ಲ. ಯಾರು ಕೂಡ ವಂಚನೆಗೊಳಗಾಗಬಾರದು, ನನ್ನಲ್ಲಿ ಯಾವುದಾದರೂ ದೈವಿಕ ಶಕ್ತಿ ಇದೆ ಎಂದು ಯಾರೂ ಭಾವಿಸಬಾರದು ಎಂಬ ಕಾರಣಕ್ಕಾಗಿ ಅವರು ಈ ಪದ್ಯವನ್ನು ಪಠಿಸಿದರು. ನಾನು ಅಬ್ದುಲ್ ಮುತ್ತಲಿಬ್‌ನ ಮಗನೇ ಆಗಿದ್ದೇನೆ ಮತ್ತು ಕೇವಲ ಮನುಷ್ಯನಾಗಿದ್ದೇನೆ. ನನ್ನ ಪ್ರವಾದಿತ್ವದ ಕಾರಣದಿಂದ ಕೇವಲ ಅಲ್ಲಾಹನ ಸಹಾಯ ನನ್ನೊಂದಿಗಿದೆ. ಅಲ್ಲಾಹನು ನನಗೆ ವಿಜಯದ ವಾಗ್ದಾನ ಮಾಡಿರುವಾಗ, ಈ ಬಾಣಗಳ ಮಳೆಯಲ್ಲೂ ಅವನು ನನಗೆ ವಿಜಯ ನೀಡುವನು ಎಂಬುದೇ ಅಲ್ಲಾಹನ ಮೇಲಿನ ತವಕ್ಕುಲ್‌ನ ಶ್ರೇಷ್ಠತೆಯಾಗಿದೆ." (ಖೌಫ಼್ ಔರ್ ಉಮ್ಮೀದ್ ಕಾ ದರ್ಮಿಯಾನಿ ರಾಸ್ತ, ಅನ್ವಾರುಲ್ ಉಲೂಮ್ ಸಂಪುಟ–19, ಪುಟ–47)

ಅಲ್ಲಾಹನ ಮೇಲಿನ ತವಕ್ಕುಲ್ ಮತ್ತು ಅವನ ವಾಗ್ದಾನಗಳ ಮೇಲಿನ ನಂಬಿಕೆಯ ಮತ್ತೊಂದು ಉದಾಹರಣೆ ಒಂದು ವರದಿಯಲ್ಲಿ ಈ ರೀತಿ ಸಿಗುತ್ತದೆ. ಆರಂಭದ ಘಟನೆಗಳನ್ನು ನೋಡಲಿ ಅಥವಾ ಕೊನೆಯ ಘಟನೆಗಳನ್ನು ನೋಡಲಿ, ನಮಗೆ ಒಂದೇ ರೀತಿಯ ತವಕ್ಕುಲ್‌ನ ಉದಾಹರಣೆಗಳು ಕಂಡುಬರುತ್ತವೆ. ಹಿಂದೆ ಹೇಳಿದ ಘಟನೆ ಹುನೈನ್ ಯುದ್ಧದ್ದಾದರೆ, ಇದು ಮೊದಲ ಯುದ್ಧವಾದ ಬದ್ರ್ ಯುದ್ಧದ ಘಟನೆಯಾಗಿದೆ. ಮದೀನಾದಲ್ಲಿ ಹಬೀಬ್ ಬಿನ್ ಯಸಾಫ್ ಎಂಬ ಅತ್ಯಂತ ಶಕ್ತಿಶಾಲಿ ಮತ್ತು ಧೈರ್ಯಶಾಲಿ ವ್ಯಕ್ತಿಯಿದ್ದನು. ಆ ಸಮಯದಲ್ಲಿ ಮುಸಲ್ಮಾನರು ಬಹಳ ದುರ್ಬಲ ಸ್ಥಿತಿಯಲ್ಲಿದ್ದರು. ಈ ವ್ಯಕ್ತಿಯು ಖಝ್ರಜ್ ಗೋತ್ರಕ್ಕೆ ಸೇರಿದವನಾಗಿದ್ದನು ಮತ್ತು ಬದ್ರ್ ಯುದ್ಧದ ಸಮಯದವರೆಗೆ ಮುಸಲ್ಮಾನನಾಗಿರಲಿಲ್ಲ. ಆದರೂ ಇವನು ತನ್ನ ಖಝ್ರಜ್ ಜನಾಂಗದೊಂದಿಗೆ ಯುದ್ಧಕ್ಕೆ ಹೊರಟನು ಮತ್ತು ಯುದ್ಧ ಗೆದ್ದರೆ ತನಗೂ ಯುದ್ಧ ಸಂಪತ್ತು ಸಿಗುವುದೆಂಬ ನಿರೀಕ್ಷೆಯಲ್ಲಿದ್ದನು. ಅವನೂ ತಮ್ಮೊಂದಿಗೆ ಯುದ್ಧದಲ್ಲಿ ಪಾಲ್ಗೊಳ್ಳುತ್ತಿರುವುದನ್ನು ಕಂಡು ಮುಸಲ್ಮಾನರಿಗೆ ಬಹಳ ಸಂತೋಷವಾಯಿತು. ಆದರೆ ಹಝ್ರತ್ ಪೈಗಂಬರ್(ಸ) ಅವನೊಡನೆ ಹೀಗೆ ಹೇಳಿದರು: 'ನಮ್ಮ ಧರ್ಮದಲ್ಲಿರುವವರು ಮಾತ್ರ ನಮ್ಮೊಂದಿಗೆ ಯುದ್ಧಕ್ಕೆ ಬರಬಹುದು.' ಒಂದು ವರದಿಯಲ್ಲಿರುವಂತೆ, 'ನೀನು ಮರಳಿ ಹೋಗು, ನಾವು ಮುಶ್ರಿಕರ ಸಹಾಯ ಪಡೆಯಲು ಇಚ್ಛಿಸುವುದಿಲ್ಲ' ಎಂದು ಪ್ರವಾದಿಯವರು ಹೇಳಿದರು. ಹಬೀಬ್ ಬಿನ್ ಯಸಾಫ್ ಎರಡನೇ ಬಾರಿಯೂ ರಸೂಲ್ ಕರೀಮ್(ಸ) ಬಳಿ ಬಂದನು, ಆದರೆ ಪ್ರವಾದಿ(ಸ) ಎರಡನೇ ಬಾರಿಯೂ ಅವನನ್ನು ಮರಳಿ ಕಳುಹಿಸಿದರು. ಕೊನೆಗೆ ಮೂರನೇ ಬಾರಿ ಅವನು ಬಂದಾಗ, ಪ್ರವಾದಿ(ಸ) ಕೇಳಿದರು: 'ನೀನು ಅಲ್ಲಾಹ್ ಮತ್ತು ಅವನ ಪ್ರವಾದಿಯ ಮೇಲೆ ವಿಶ್ವಾಸ ಇಡುತ್ತೀಯಾ?'. 'ಹೌದು' ಎಂದು ಅವನು ಹೇಳಿದನು. ಅನಂತರ ಮುಸಲ್ಮಾನನಾಗಿ ಅತ್ಯಂತ ಶೌರ್ಯದಿಂದ ಯುದ್ಧ ಮಾಡಿದನು.

(ಅಸ್ಸೀರತುಲ್ ಹಲಬಿಯಾ, ಸಂಪುಟ–2, ಪುಟ–204, ದಾರುಲ್ ಕುತುಬ್ ಇಲ್ಮಿಯಾ ಬೈರುತ್ 2002)

ಆದ್ದರಿಂದ, ಇಂತಹ ಪ್ರತಿಕೂಲ ಪರಿಸ್ಥಿತಿಗಳಿದ್ದರೂ ಮತ್ತು ಅತ್ಯಂತ ಅಗತ್ಯವಿದ್ದರೂ, ಆ ವ್ಯಕ್ತಿ ಇಸ್ಲಾಂ ಸ್ವೀಕರಿಸದೇ ಇದ್ದಾಗ ನಬಿ(ಸ) ಅವನ ಸಹಾಯವನ್ನು ಪಡೆಯಲಿಲ್ಲ. 'ನಾನು ಅನ್ಯರ ಸಹಾಯವನ್ನು ಪಡೆದರೆ, ಅದು ಅಲ್ಲಾಹನ ವಾಗ್ದಾನಗಳ ಮೇಲಿನ ನಂಬಿಕೆ ಮತ್ತು ತವಕ್ಕುಲ್‌ನ ವಿರುದ್ಧವಾಗಿದೆ' ಎಂದು ಭಾವಿಸಿದ್ದರು.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: "ಇಂದಿನ ಬುದ್ಧಿವಂತರ ದೃಷ್ಟಿಯಲ್ಲಿ ಯಾರನ್ನಾದರೂ ಶತ್ರುವನ್ನಾಗಿಸಿಕೊಳ್ಳುವುದು ತಪ್ಪಾಗಿದೆ, ಆದರೆ ಸತ್ಯವೇನೆಂದರೆ, ಇದು ಕೂಡ ಸತ್ಯತೆಯ ಒಂದು ಸಾಕ್ಷಿಯಾಗಿದೆ. ಹಝ್ರತ್ ಪೈಗಂಬರ್(ಸ) ಯಾರೊಂದಿಗೂ ರಾಜಿ ಮಾಡಿಕೊಳ್ಳಲಿಲ್ಲ, ಅಂದರೆ ಪ್ರತಿಯೊಬ್ಬರೂ ಅವರ ಶತ್ರುವಾದರು. ಎಲ್ಲರೊಂದಿಗೂ ಸಂಬಂಧ ಹದಗೆಟ್ಟಿತು. ಸತ್ಯವನ್ನು ಹೇಳಿದ್ದರಿಂದಾಗಿ, ಏಕೆಂದರೆ ಸತ್ಯವನ್ನು ಕೇಳಲು ಯಾರೂ ಬಯಸುತ್ತಿರಲಿಲ್ಲ, ಆದ್ದರಿಂದ ಜನರೊಂದಿಗೆ ಸಂಘರ್ಷ ಉಂಟಾಗುವುದು ಸಹಜವಾಗಿತ್ತು. ಆ ಜನರ ದೃಷ್ಟಿಯಲ್ಲಿ, (ನಊದುಬಿಲ್ಲಾಹ್) ಪ್ರವಾದಿಯವರು ತಪ್ಪು ಮಾಡಿದ್ದರು. ಆದರೆ ವಾಸ್ತವವಾಗಿ ಕೇವಲ ದೇವನಿಗಾಗಿ ಎಲ್ಲರೊಂದಿಗೆ ಶತ್ರುತ್ವ ಬೆಳೆಸಿಕೊಳ್ಳುವುದು ಪ್ರವಾದಿಯವರ ಸತ್ಯತೆಯ ಸ್ಪಷ್ಟ ಪುರಾವೆಯಾಗಿದೆ. ಇದರಿಂದ ಪ್ರವಾದಿಯವರ ಈಮಾನಿನ ಶಕ್ತಿಯ ಸ್ಥಿತಿ ತಿಳಿದುಬರುತ್ತದೆ. ಒಂದು ಕಡೆ ಹಝ್ರತ್ ಮಸೀಹ್ ಮೌಊದ್(ಅ) ಈಸಾ ಮಸೀಹ್‌ರ ಉದಾಹರಣೆ ನೀಡಿ ಹೇಳುತ್ತಾರೆ: 'ಇಂಜೀಲ್‌ನಲ್ಲಿರುವ ಅವರ ಬೋಧನೆಗಳನ್ನು ನೋಡಿರಿ. ಯೇಸುವಿನ ಸ್ವಭಾವ ಯಾರಿಗೂ ಕೋಪ ತರಿಸುವುದಾಗಿರಲಿಲ್ಲ ಎಂಬುದನ್ನು ಇದು ತೋರಿಸುತ್ತದೆ. ನಾನು ತೌರಾತ್‌ನ ಒಂದು ಅಕ್ಷರವನ್ನೂ ಬದಲಾಯಿಸಲು ಬಂದಿಲ್ಲ ಎಂದು ಯಹೂದಿಯರಿಗೆ ಹೇಳಲಾಗಿತ್ತು. ಆದರೆ ಇದಕ್ಕೆ ತದ್ವಿರುದ್ಧವಾಗಿ, ಹಝ್ರತ್ ಪೈಗಂಬರ್(ಸ)ರ ಬೋಧನೆಗಳನ್ನು ನೋಡಿದರೆ, ನಬಿ(ಸ) ಸಂದೇಶ ನೀಡದ ಅಥವಾ ತಪ್ಪುಗಳನ್ನು ತಿದ್ದದ ಯಾವುದೇ ಪಂಗಡ ಅಥವಾ ಧರ್ಮ ಈ ಭೂಮಿಯ ಮೇಲಿಲ್ಲ. ಪ್ರತಿಯೊಬ್ಬರನ್ನು ಎದುರಿಸುವಾಗ ತಮ್ಮದೇ ವಿಜಯವಾಗುತ್ತದೆ ಎಂಬ ಹಕ್ಕನ್ನು ಮಂಡಿಸಿದ್ದರು. ಕೇವಲ ತಪ್ಪುಗಳನ್ನು ಹುಡುಕಿ ಸುಮ್ಮನಾಗಲಿಲ್ಲ ಅಥವಾ ಎದುರಿಸಲಿಲ್ಲ, ಬದಲಾಗಿ, 'ನನಗೆ ಅಲ್ಲಾಹನ ಮೇಲೆ ನಂಬಿಕೆ ಮತ್ತು ತವಕ್ಕುಲ್ ಇದೆ, ಮತ್ತು ಇನ್‌ಶಾ ಅಲ್ಲಾಹ್ ನಾನೇ ವಿಜಯಶಾಲಿಯಾಗುವೆನು, ಏಕೆಂದರೆ ನಾನು ಅವನ ಕಡೆಯಿಂದ ಬಂದಿದ್ದೇನೆ' ಎಂದು ಪ್ರತಿಪಾದಿಸಿದರು." ಅವರು ಹೇಳುತ್ತಾರೆ:

"ನೀವೇ ಹೇಳಿ, ದೇವನ ಮೇಲೆ ಸಂಪೂರ್ಣ ಭರವಸೆ ಮತ್ತು ನಂಬಿಕೆ ಇಲ್ಲದಿದ್ದರೆ, ಯಾರಾದರೂ ಈ ರೀತಿ ಮಾಡಲು ಸಾಧ್ಯವೇ?"

(ಮಲ್‌ಫೂಝ್ಆತ್, ಸಂಪುಟ–7, ಪುಟ–39, 2022)

ಅಲ್ಲಾಹುಮ್ಮ ಸಲ್ಲಿ ಅಲಾ ಮುಹಮ್ಮದಿನ್ ವ ಅಲಾ ಆಲಿ ಮುಹಮ್ಮದಿನ್ ವ ಬಾರಿಕ್ ವ ಸಲ್ಲಿಮ್ ಇನ್ನಕ ಹಮೀದುಮ್ಮಜೀದ್.

----------*****----------

(ಪುಟ ಸಂಖ್ಯೆ 02ರ ಉಳಿದ ಭಾಗ)

ದೂರವಿರಲು ಉಪದೇಶಿಸಿದ್ದರು. ಇಂದಿನ ಮುಸ್ಲಿಮರ ಪ್ರಾಯೋಗಿಕ ಜೀವನವನ್ನು ಉಲ್ಲೇಖಿಸಿದ ಹುಝೂರ್ ಅನ್ವರ್ ಅವರು, ಅನೇಕರು "ಲಾ ಇಲಾಹ ಇಲ್ಲಲ್ಲಾಹ್" ಎಂದು ಪಠಿಸುತ್ತಾರಾದರೂ, ಶಿರ್ಕ್‌ನ ವಿವಿಧ ರೂಪಗಳಲ್ಲಿ ಸಿಲುಕಿಕೊಂಡಿದ್ದಾರೆ ಎಂದು ಹೇಳಿದರು.

ಸುಳ್ಳಿನಿಂದ ದೂರವಿರುವುದು: ಶಿರ್ಕ್‌ನ ನಂತರ, ಬೈಅತ್‌ನ ಪ್ರಮುಖ ಷರತ್ತುಗಳಲ್ಲಿ ಒಂದಾದ ಸುಳ್ಳಿನಿಂದ ದೂರವಿರುವುದರ ಕುರಿತು ಹುಝೂರ್ ಅನ್ವರ್ ಅವರು ವಿಶೇಷವಾಗಿ ಗಮನ ಸೆಳೆದರು. ಇಂದು ಅನೇಕ ಜನರು ಸುಳ್ಳು ಹೇಳದೆ ಜೀವನ ನಡೆಸುವುದು ಸಾಧ್ಯವಿಲ್ಲ ಎಂದು ಭಾವಿಸುತ್ತಾರೆ. ಈ ಸಂದರ್ಭದಲ್ಲಿ ಹಝ್ರತ್ ಮಸೀಹ್ ಮೌಊದ್ (ಅ.ಸ.) ಅವರ ಅಂಚೆ ಕಚೇರಿಗೆ ಸಂಬಂಧಿಸಿದ ನ್ಯಾಯಾಲಯದ ಪ್ರಕರಣವನ್ನು ಉಲ್ಲೇಖಿಸಲಾಯಿತು.

ಆ ಪ್ರಕರಣದ ಕುರಿತು ಹಝ್ರತ್ ಮಸೀಹ್ ಮೌಊದ್ (ಅ.ಸ.) ಅವರು ಸತ್ಯವನ್ನೇ ಮಾತನಾಡಿದರು. ಜನರು ಸತ್ಯ ಹೇಳಿದರೆ ತಮಗೆ ರಕ್ಷಣೆ ದೊರೆಯುವುದಿಲ್ಲ ಎಂದು ಭಾವಿಸುತ್ತಾರೆ; ಆದರೆ ನಾನು ಸತ್ಯವನ್ನೇ ಹೇಳಿದೆ ಮತ್ತು ಅಲ್ಲಾಹ್ ನನ್ನನ್ನು ರಕ್ಷಿಸಿದನು ಎಂದು ಅವರು ತಿಳಿಸಿದರು.

ಇಂದಿಗೂ ಅನೇಕ ಪ್ರಕರಣಗಳು ಮತ್ತು ವ್ಯವಹಾರಗಳಲ್ಲಿ ಜನರು ಸುಳ್ಳು ಹೇಳಿರುವುದು ಕಂಡುಬರುತ್ತದೆ. ನಾವು ಇಂತಹ ನಡವಳಿಕೆಯಿಂದ ದೂರವಿರಬೇಕು. ವಾಸ್ತವವಾಗಿ, ಸುಳ್ಳು ಮಾನವನ ಸಹಜ ಸ್ವಭಾವಕ್ಕೆ ವಿರುದ್ಧವಾಗಿದೆ.

ಇಂದಿನ ಜಾಗತಿಕ ರಾಜಕೀಯ ಪರಿಸ್ಥಿತಿಯಲ್ಲಿಯೂ ಸುಳ್ಳಿನ ಅನೇಕ ಉದಾಹರಣೆಗಳು ಕಂಡುಬರುತ್ತಿವೆ. ಕೆಲವು ದೇಶಗಳು ಒಟ್ಟಾಗಿ ಮತ್ತೊಂದು ದೇಶದ ವಿರುದ್ಧ ಸುಳ್ಳು ಆರೋಪಗಳನ್ನು ಆಧಾರವಾಗಿಟ್ಟುಕೊಂಡು ಆಕ್ರಮಣ ನಡೆಸುತ್ತವೆ.

ಆದ್ದರಿಂದ, ನಾವು ನಮ್ಮ ಬೈಅತ್‌ನ ಹಕ್ಕನ್ನು ಪೂರೈಸಿ ಜಗತ್ತಿನಲ್ಲಿ ನಿಜವಾದ ಪರಿವರ್ತನೆಯನ್ನು ತರಬೇಕಾದರೆ, ಅಹ್ಮದೀಯರ ಕರ್ತವ್ಯವೆಂದರೆ ಸುಳ್ಳಿನ ವಿರುದ್ಧ ದೃಢವಾಗಿ ಹೋರಾಡುವುದು.

ಕೆಟ್ಟ ದೃಷ್ಟಿ ಮತ್ತು ನೈತಿಕ ಪಾವಿತ್ರ್ಯ: ಇನ್ನೊಂದು ಪ್ರಮುಖ ದುರ್ಗುಣವೆಂದರೆ ಕೆಟ್ಟ ದೃಷ್ಟಿಯಿಂದ ನೋಡುವುದು. ಹಝ್ರತ್ ಮಸೀಹ್ ಮೌಊದ್ (ಅ.ಸ.) ಅವರು ಹೀಗೆ ಹೇಳಿದ್ದಾರೆ: ನೀವು ನನ್ನ ಬೈಅತ್

ಸ್ವೀಕರಿಸಿದ್ದರೆ, ಯಾರನ್ನೂ ಕೆಟ್ಟ ಉದ್ದೇಶದಿಂದ ನೋಡಬೇಡಿ ಮತ್ತು ಕೆಟ್ಟ ದೃಷ್ಟಿಯನ್ನು ತಪ್ಪಿಸಿಕೊಳ್ಳಿ. ಪವಿತ್ರ ಖುರ್‌ಆನ್‌ನ ಬೋಧನೆ ಕೇವಲ ಕಾಮದ ದೃಷ್ಟಿಯಿಂದ ಮಹಿಳೆಯನ್ನು ನೋಡಬಾರದು ಎನ್ನುವುದಕ್ಕೆ ಸೀಮಿತವಾಗಿಲ್ಲ. ಬದಲಾಗಿ, ಪರಸ್ತ್ರೀಯರ ಕಡೆಗೆ ಕಾಮದ ದೃಷ್ಟಿಯಿಂದಲೂ, ಅನುಚಿತ ರೀತಿಯಲ್ಲಿಯೂ ನೋಡಬಾರದು. ಹಾಗೆಯೇ ಮನಸ್ಸಿನಲ್ಲಿ ಕೆಟ್ಟ ಆಲೋಚನೆಗಳನ್ನು ಹುಟ್ಟಿಸುವಂತಹ ಮೃದುವಾದ ಮಾತುಗಳು ಅಥವಾ ಪ್ರಚೋದನಕಾರಿ ಸಂಭಾಷಣೆಗಳನ್ನು ಆಲಿಸುವುದರಿಂದಲೂ ದೂರವಿರಬೇಕು. ಆಗ ಮಾತ್ರ ಮನುಷ್ಯನು ನೈತಿಕ ಪತನದಿಂದ ತನ್ನನ್ನು ರಕ್ಷಿಸಿಕೊಳ್ಳಲು ಸಾಧ್ಯವಾಗುತ್ತದೆ.

ಇಂದಿನ ಸಮಾಜದಲ್ಲಿ ಇಂತಹ ದುರ್ಗುಣಗಳು ವ್ಯಾಪಕವಾಗಿದ್ದು, ಅನೇಕ ಜನರು ಅವುಗಳಿಗೆ ಬಲಿಯಾಗುತ್ತಿದ್ದಾರೆ. ಇದರಿಂದ ಕುಟುಂಬಗಳು ಒಡೆಯುತ್ತಿವೆ ಮತ್ತು ವೈವಾಹಿಕ ಜೀವನಗಳು ಹಾಳಾಗುತ್ತಿವೆ.

ಇಂದಿನ ಅಭಿವೃದ್ಧಿ ಹೊಂದಿದ ದೇಶಗಳಲ್ಲಿಯೂ ವಿದ್ಯಾವಂತ ಮಹಿಳೆಯರು ತಮ್ಮ ಗೌರವ ಮತ್ತು ಸುರಕ್ಷತೆಯನ್ನು ಕಾಪಾಡಲು ಸೂಕ್ತ ಕಾನೂನುಗಳನ್ನು ರೂಪಿಸಬೇಕೆಂದು ಒತ್ತಾಯಿಸುತ್ತಿದ್ದಾರೆ. ಆದ್ದರಿಂದ ಇಂತಹ ಅನೈತಿಕತೆಗಳ ವಿರುದ್ಧ ಹೋರಾಡುವುದು ಅಹ್ಮದೀಯರ ಕರ್ತವ್ಯವಾಗಿದೆ.

ಹಝ್ರತ್ ಮಸೀಹ್ ಮೌಊದ್ (ಅ.ಸ.) ಅವರು ಪರಿಶುದ್ಧತೆಯನ್ನು ಕಾಪಾಡಿಕೊಳ್ಳಲು ಐದು ಕ್ರಮಗಳನ್ನು ಸೂಚಿಸಿದ್ದಾರೆ:

1. ಪರಸ್ತ್ರೀಯರ ಕಡೆಗೆ ದೃಷ್ಟಿ ಹರಿಸುವುದರಿಂದ ಕಣ್ಣುಗಳನ್ನು ಕಾಪಾಡಿಕೊಳ್ಳಬೇಕು. 2. ಪರಸ್ತ್ರೀಯರ ಧ್ವನಿಗಳನ್ನು ಅನಗತ್ಯವಾಗಿ ಆಲಿಸುವುದರಿಂದ ಕಿವಿಗಳನ್ನು ಕಾಪಾಡಿಕೊಳ್ಳಬೇಕು. 3. ಅನೈತಿಕತೆಯನ್ನು ಪ್ರಚೋದಿಸುವ ಕಥೆಗಳು ಮತ್ತು ಸಂಭಾಷಣೆಗಳನ್ನು ಆಲಿಸಬಾರದು. 4. ಅನೈತಿಕ ಕೃತ್ಯಗಳು ಸಂಭವಿಸುವ ಸಾಧ್ಯತೆಯಿರುವ ಸಭೆ, ಸಮಾರಂಭ ಮತ್ತು ಸಂದರ್ಭಗಳಿಂದ ದೂರವಿರಬೇಕು. 5. ವಿವಾಹವಾಗಲು ತೊಂದರೆ ಎದುರಿಸುತ್ತಿರುವ ಯುವಕರು ಉಪವಾಸ ಆಚರಿಸಬೇಕು.

ದುಷ್ಕೃತ್ಯಗಳು, ಅನೈತಿಕತೆ ಮತ್ತು ಅಶ್ಲೀಲತೆಯಿಂದ ದೂರವಿರುವುದೂ ಬೈಅತ್‌ನ ಪ್ರಮುಖ ಷರತ್ತುಗಳಲ್ಲಿ ಒಂದಾಗಿದೆ. ಹಝ್ರತ್ ಮಸೀಹ್ ಮೌಊದ್ (ಅ.ಸ.) ಅವರು, ಅನೈತಿಕತೆ ಮತ್ತು ದುಷ್ಕೃತ್ಯಗಳು ನಡೆಯುವ ಸಭೆಗಳನ್ನು ಕಂಡಾಗ ಅಲ್ಲಿಂದ ಎದ್ದು ಹೊರಟುಹೋಗಬೇಕು ಎಂದು ಉಪದೇಶಿಸಿದ್ದಾರೆ. ಅದೇ ರೀತಿ, ಸರ್ಕಾರದ ವಿರುದ್ಧ ಬಂಡಾಯವೆಬ್ಬಿಸುವುದರಿಂದಲೂ ಅವರು ತಡೆದಿದ್ದಾರೆ. ಇತರರ ಮೇಲೆ ದೌರ್ಜನ್ಯ ಎಸಗದಿರಲು ಮತ್ತು ಅನ್ಯಾಯದಿಂದ ದೂರವಿರಲು ಅವರು ಬೋಧಿಸಿದ್ದಾರೆ. ಒಬ್ಬ ನಿಜವಾದ ಅಹ್ಮದೀಯನು ತನ್ನ ಮಾತು, ವರ್ತನೆ ಮತ್ತು ಕಾರ್ಯಗಳಲ್ಲಿ ಸದಾ ನ್ಯಾಯ ಹಾಗೂ ನೈತಿಕತೆಯನ್ನು ಪಾಲಿಸಬೇಕು.

ನಮಾಝ್, ತಹಜ್ಜುದ್ ಮತ್ತು ನಫಲ್ ಆರಾಧನೆಗಳು: ಕಡ್ಡಾಯ ನಮಾಝ್‌ಗಳ ಜೊತೆಗೆ ತಹಜ್ಜುದ್ ಮತ್ತು ನಫಲ್ ನಮಾಝ್‌ಗಳನ್ನು ನಿರ್ವಹಿಸುವಂತೆ ಹಝ್ರತ್ ಮಸೀಹ್ ಮೌಊದ್ (ಅ.ಸ.) ಅವರು ವಿಶೇಷವಾಗಿ ಪ್ರೇರೇಪಿಸಿದ್ದಾರೆ.

ಹದೀಸ್‌ನಲ್ಲಿ ಪವಿತ್ರ ಪ್ರವಾದಿ ಮುಹಮ್ಮದ್(ಸ) ಅವರು ಹೀಗೆ ಹೇಳಿದ್ದಾರೆ: "ನನ್ನ ದಾಸನು ನಫಲ್ ಆರಾಧನೆಗಳ ಮೂಲಕ ನನ್ನ ಸಮೀಪಕ್ಕೆ ಬರುತ್ತಲೇ ಇರುತ್ತಾನೆ. ಕೊನೆಗೆ ನಾನು ಅವನನ್ನು ಪ್ರೀತಿಸಲು ಆರಂಭಿಸುತ್ತೇನೆ." ಇದರ ಜೊತೆಗೆ, ಅಲ್ಲಾಹನ ತಸ್ಬೀಹ್ ಮತ್ತು ತಹ್ಮೀದ್‌ನಲ್ಲಿ ನಿರಂತರವಾಗಿ ತೊಡಗಿಸಿಕೊಳ್ಳುವಂತೆ ಅವರು ಉಪದೇಶಿಸಿದ್ದಾರೆ. ಹದೀಸ್‌ನ ಅರ್ಥದ ಪ್ರಕಾರ, ಅಲ್ಲಾಹನ ಸ್ತುತಿಯಿಲ್ಲದೆ ಆರಂಭಿಸಲಾದ ಮಹತ್ವದ ಕಾರ್ಯವು ಬರಕತ್‌ನಿಂದ ವಂಚಿತವಾಗುತ್ತದೆ. ಆದ್ದರಿಂದ ಪ್ರತಿಯೊಂದು ಕಾರ್ಯದ ಆರಂಭದಲ್ಲಿಯೂ ಅಲ್ಲಾಹನನ್ನು ಸ್ತುತಿಸುವುದು ಮತ್ತು ಆತನ ಸ್ಮರಣೆಯಲ್ಲಿ ತೊಡಗಿರುವುದು ಅತ್ಯಂತ ಮುಖ್ಯವಾಗಿದೆ.

ಅಲ್ಲಾಹನಿಗೆ ಕೃತಜ್ಞತೆ, ದರೂದ್ ಮತ್ತು ತೌಬಾ–ಇಸ್ತಿಗ್ಫಾರ್: ಸರ್ವಶಕ್ತನಾದ ಅಲ್ಲಾಹನು ನಮಗೆ ನೀಡಿರುವ ಅನುಗ್ರಹಗಳಿಗಾಗಿ ಸದಾ ಕೃತಜ್ಞರಾಗಿರಬೇಕು. ಪವಿತ್ರ ಪ್ರವಾದಿ ಮುಹಮ್ಮದ್(ಸ) ಅವರ ಮೇಲೆ ದರೂದ್ ಕಳುಹಿಸುವುದನ್ನು ನಮ್ಮ ದೈನಂದಿನ ಜೀವನದ ಅವಿಭಾಜ್ಯ ಅಂಗವನ್ನಾಗಿ ಮಾಡಿಕೊಳ್ಳಬೇಕು.

ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದ್ದಾರೆ: "ಯಾರು ನನ್ನ ಮೇಲೆ ಒಂದು ಬಾರಿ ದರೂದ್ ಕಳುಹಿಸುತ್ತಾರೋ, ಅಲ್ಲಾಹ್ ಅವರ ಮೇಲೆ ಹತ್ತು ಬಾರಿ ತನ್ನ ಕರುಣೆಯನ್ನು ಕಳುಹಿಸುತ್ತಾನೆ." ಅದೇ ರೀತಿ, ತೌಬಾ ಮತ್ತು ಇಸ್ತಿಗ್ಫಾರ್‌ನ ಕಡೆಗೂ ಹೆಚ್ಚಿನ ಗಮನ ಹರಿಸಬೇಕು.

ಹಝ್ರತ್ ಪೈಗಂಬರ್(ಸ)ರು ತಿಳಿಸಿರುವಂತೆ, ಯಾರು ನಿರಂತರವಾಗಿ ತೌಬಾ ಮತ್ತು ಇಸ್ತಿಗ್ಫಾರ್ ಮಾಡುತ್ತಾರೋ, ಅಲ್ಲಾಹ್ ಅವರಿಗೆ ಪ್ರತಿಯೊಂದು ಸಂಕಷ್ಟದಿಂದ ಹೊರಬರುವ ಮಾರ್ಗವನ್ನು ಕಲ್ಪಿಸುತ್ತಾನೆ, ಪ್ರತಿಯೊಂದು ದುಃಖದಿಂದ ಪರಿಹಾರವನ್ನು ನೀಡುತ್ತಾನೆ ಮತ್ತು ಅವರು ಊಹಿಸದ ಮೂಲಗಳಿಂದ ಜೀವನೋಪಾಯವನ್ನು ಒದಗಿಸುತ್ತಾನೆ.

ಆದ್ದರಿಂದ ಅಲ್ಲಾಹನ ಕ್ಷಮೆ ಯಾಚಿಸುವುದು, ಆತನನ್ನು ಸ್ಮರಿಸುವುದು ಮತ್ತು ಆತನ ಮೇಲೆ ಭರವಸೆಯಿಡುವುದು ನಮ್ಮ ಜೀವನದ ಭಾಗವಾಗಬೇಕು.

ಅಲ್ಲಾಹನ ಸೃಷ್ಟಿಯೊಂದಿಗೆ ಉತ್ತಮ ನಡವಳಿಕೆ: ಮಾನವಕುಲದೊಂದಿಗೆ ಉತ್ತಮವಾಗಿ ವರ್ತಿಸುವುದು ಬೈಅತ್‌ನ ಅತ್ಯಂತ ಮುಖ್ಯವಾದ ಬೋಧನೆಗಳಲ್ಲಿ ಒಂದಾಗಿದೆ.

ಹಝ್ರತ್ ಮಸೀಹ್ ಮೌಊದ್ (ಅ.ಸ.) ಅವರು ಹೀಗೆ ಹೇಳಿದ್ದಾರೆ: "ಒಬ್ಬರನ್ನೊಬ್ಬರು ಕಬಳಿಸುವಂತಹ, ನಾಲ್ವರು ಒಟ್ಟಿಗೆ ಕುಳಿತಾಗ ತಮ್ಮ ಬಡ ಸಹೋದರನ ಬಗ್ಗೆ ನಿಂದನೆ ಮಾಡುವಂತಹ, ಇತರರಲ್ಲಿ ತಪ್ಪು ಹುಡುಕುವಂತಹ ಹಾಗೂ ದುರ್ಬಲರು ಮತ್ತು ಬಡವರನ್ನು ತಿರಸ್ಕಾರದಿಂದ ನೋಡುವಂತಹ ಜನರ ಗುಂಪು ನಿಜವಾದ ಜಮಾಅತ್ ಆಗಲು ಸಾಧ್ಯವಿಲ್ಲ."

ಆದ್ದರಿಂದ ಅಹ್ಮದೀಯರು ಪರಸ್ಪರ ಪ್ರೀತಿ, ಸಹಾನುಭೂತಿ, ಗೌರವ ಮತ್ತು ಸಹಕಾರದಿಂದ ವರ್ತಿಸಬೇಕು. ಬಡವರು, ದುರ್ಬಲರು ಮತ್ತು ಸಂಕಷ್ಟದಲ್ಲಿರುವವರನ್ನು ತಿರಸ್ಕರಿಸುವ ಬದಲು ಅವರಿಗೆ ನೆರವಾಗಬೇಕು.

ನಿಜವಾದ ಜಮಾಅತ್ ಎಂದರೆ ಕೇವಲ ಒಂದು ಸಂಘಟನೆಯ ಸದಸ್ಯತ್ವ ಹೊಂದಿರುವ ಜನರ ಗುಂಪಲ್ಲ; ಬದಲಾಗಿ, ಉನ್ನತ ನೈತಿಕ ಗುಣಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಪರಸ್ಪರರ ಕಲ್ಯಾಣಕ್ಕಾಗಿ ಶ್ರಮಿಸುವ ಜನರ ಸಮುದಾಯವಾಗಿದೆ.

ಬೈಅತ್‌ನ ಹಕ್ಕನ್ನು ಪೂರೈಸುವುದು ನಮ್ಮ ಕರ್ತವ್ಯ: ಹುಝೂರ್ ಅನ್ವರ್ ಅಯ್ಯದುಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಅವರು ಈ ಬೋಧನೆಗಳನ್ನು ವಿವರಿಸಿದ ನಂತರ ಹೀಗೆ ಹೇಳಿದರು:

ನಾನು ಇಲ್ಲಿ ಕೆಲವು ಪ್ರಮುಖ ವಿಷಯಗಳನ್ನು ಮಾತ್ರ ಪ್ರಸ್ತಾಪಿಸಿದ್ದೇನೆ. ನಾವು ನಮ್ಮ ಜೀವನದಲ್ಲಿ ಪರಿಶುದ್ಧ ಬದಲಾವಣೆಗಳನ್ನು ತಂದು, ಬೈಅತ್‌ನ ಹಕ್ಕನ್ನು ಪೂರೈಸುತ್ತಾ, ಅದರ ಎಲ್ಲಾ ಷರತ್ತುಗಳನ್ನು ಸಂಪೂರ್ಣವಾಗಿ ಪಾಲಿಸಿದರೆ, ನಮ್ಮಲ್ಲಿ ಮಾತ್ರವಲ್ಲದೆ ನಮ್ಮ ಸಮಾಜದಲ್ಲಿಯೂ ಪರಿಶುದ್ಧತೆಯನ್ನು ಸ್ಥಾಪಿಸಬಹುದು. ಅಷ್ಟೇ ಅಲ್ಲದೆ, ಇಸ್ಲಾಮಿನ ನೈಜ ಸಂದೇಶವನ್ನು ಜಗತ್ತಿನಾದ್ಯಂತ ಹರಡಲು ಸಾಧ್ಯವಾಗುತ್ತದೆ. ಮುಸ್ಲಿಮರು, ಮುಸ್ಲಿಮೇತರರು, ನಾಸ್ತಿಕರು ಮತ್ತು ಇಸ್ಲಾಮಿನ ವಿರೋಧಿಗಳಿಗೂ ಈ ಉನ್ನತ ಬೋಧನೆಗಳನ್ನು ತಲುಪಿಸಬಹುದು.

ಒಂದು ದಿನ ಅವರು ಕೂಡ ಯೋಚಿಸುವಂತಾಗುತ್ತದೆ: ಜಗತ್ತಿನಲ್ಲಿ ದೇವನ ಆಡಳಿತವನ್ನು ಸ್ಥಾಪಿಸುವುದರ ಜೊತೆಗೆ ಉನ್ನತ ನೈತಿಕ ಮೌಲ್ಯಗಳನ್ನು ಬೆಳೆಸಲು ಬಯಸುವವರು ಅಹ್ಮದೀಯರೇ ಆಗಿದ್ದಾರೆ.

ಇಂದು ದಜ್ಜಾಲಿ ಶಕ್ತಿಗಳು ಜಗತ್ತಿನಿಂದ ದೇವನ ಹೆಸರನ್ನು ಅಳಿಸಿಹಾಕಲು ಮತ್ತು ಜಗತ್ತಿನಲ್ಲಿ ಅಶಾಂತಿ ಹಾಗೂ ಅರಾಜಕತೆಯನ್ನು ಹರಡಲು ತಮ್ಮ ಸಂಪೂರ್ಣ ಪ್ರಯತ್ನ ಮಾಡುತ್ತಿವೆ.

ಇಂತಹ ಪರಿಸ್ಥಿತಿಯಲ್ಲಿ ನಮ್ಮ ಜವಾಬ್ದಾರಿ ಬಹಳ ದೊಡ್ಡದಾಗಿದೆ. ನಾವು ನಮ್ಮ ಬೈಅತ್‌ನ ಹಕ್ಕನ್ನು ಪೂರೈಸಬೇಕು, ಸತ್ಯ ಮತ್ತು ಧರ್ಮದ ಸೇವೆಯಲ್ಲಿ ಶ್ರಮಿಸಬೇಕು, ಅಲ್ಲಾಹನ ಅನುಗ್ರಹವನ್ನು ಬೇಡಬೇಕು ಮತ್ತು ಆ ದುಷ್ಟ ಶಕ್ತಿಗಳ ಕುತಂತ್ರಗಳನ್ನು ವಿಫಲಗೊಳಿಸಲು ನಮ್ಮಿಂದಾದ ಎಲ್ಲ ಪ್ರಯತ್ನಗಳನ್ನು ಮಾಡಬೇಕು.

ಸರ್ವಶಕ್ತನಾದ ಅಲ್ಲಾಹನು ನಮಗೆ ಇದನ್ನು ನೆರವೇರಿಸುವ ಶಕ್ತಿಯನ್ನು ದಯಪಾಲಿಸಲಿ.

ಹುಝೂರ್ ಅನ್ವರ್ ಅವರು ಸಮಸ್ತ ಜಗತ್ತಿನ ಶಾಂತಿ ಮತ್ತು ಭದ್ರತೆಗಾಗಿ ಹಾಗೂ ಮುಸ್ಲಿಮರ ಉಳಿವು, ಕಲ್ಯಾಣ ಮತ್ತು ಸುರಕ್ಷತೆಗಾಗಿ ಪ್ರಾರ್ಥಿಸಬೇಕೆಂದು ಕರೆ ನೀಡಿದರು.

ಅಲ್ಲಾಹನು ಪ್ರತಿಯೊಬ್ಬ ಅಹ್ಮದೀಯನಿಗೂ ಜಗತ್ತಿನಲ್ಲಿ ಏಕೈಕ ದೇವನ ಆಡಳಿತವನ್ನು ಸ್ಥಾಪಿಸಲು ಮತ್ತು ಶಾಂತಿ ಹಾಗೂ ಭದ್ರತೆಯನ್ನು ಹರಡಲು ತನ್ನ ಪಾತ್ರವನ್ನು ಸಮರ್ಥವಾಗಿ ನಿರ್ವಹಿಸುವ ಸಾಮರ್ಥ್ಯವನ್ನು ದಯಪಾಲಿಸಲಿ ಎಂದು ಅವರು ಪ್ರಾರ್ಥಿಸಿದರು.

ಇದಾದ ನಂತರ ಹುಝೂರ್ ಅನ್ವರ್ ಅವರು ಸಾಮೂಹಿಕ ದುಆ ನಡೆಸಿದರು.

ಸಮಾರೋಪದಲ್ಲಿ ಹುಝೂರ್ ಅನ್ವರ್ ಅವರು ಜಲ್ಸಾದ ಹಾಜರಾತಿ ವರದಿಯನ್ನು ಪ್ರಕಟಿಸಿದರು. ಒಟ್ಟು ಹಾಜರಾತಿ: 51,181 ಜನರು. ಭಾಗವಹಿಸಿದ ದೇಶಗಳು: 117 ದೇಶಗಳು.

----------*****----------

'ಬದರ್' ವಾರಪತ್ರಿಕೆಯನ್ನು Online ಮುಖಾಂತರ ಓದಲು ಸಂಪರ್ಕಿಸಿ ನಮ್ಮ ವೆಬ್‌ಸೈಟ್:
https://akhbarbadr.in/Kannada/#gsc.tab=0

ಪ್ರೀತಿ ಎಲ್ಲರಲ್ಲೂ, ದ್ವೇಶವಿಲ್ಲ ಯಾರಲ್ಲೂ

Love for All, Hatred for None



ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಪವಿತ್ರ ಜೀವನ

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ(ರ)

ಮಕ್ಕದಿಂದ ವಲಸೆ ಹೊರಟ ಹಝ್ರತ್ ಪೈಗಂಬರ್(ಸ) ಈಗ ಲೋಕದ ಚಕ್ರವರ್ತಿಯಾಗಿದ್ದರು. ಅವರು ಸ್ವತಃ ಇಹಲೋಕದಲ್ಲಿ ಇಲ್ಲದಿದ್ದರೂ ಅವರ ದಾಸರು ಅವರ ಭವಿಷ್ಯವಾಣಿಗಳು ಈಡೇರುತ್ತಾ ಇರುವುದನ್ನು ನೋಡುತ್ತಿದ್ದರು.

ಮದೀನಕ್ಕೆ ಹಝ್ರತ್ ಪೈಗಂಬರರ(ಸ) ಆಗಮನ

ಸುರಾಖಿರಿಗೆ ಸಂಬಂಧಿಸಿದ ಸಂಭವವು ಕಳೆದ ನಂತರ ಕೆಲವು ತಂಗುದಾಣಗಳನ್ನು ದಾಟಿಕೊಂಡು ಹಝ್ರತ್ ಪೈಗಂಬರ್(ಸ) ಮದೀನಕ್ಕೆ ತಲಪಿದರು. ಮದೀನದ ಜನರು ಅವರನ್ನು ಕಾತರದಿಂದ ಪ್ರತೀಕ್ಷಿಸುತ್ತಾ ಇದ್ದರು. ಮಕ್ಕದ ಜನರಿಗಾಗಿ ಉದಿಸಿದ ಸೂರ್ಯ ಈಗ ಮದೀನದ ಜನರ ಮೇಲೆ ಪ್ರಕಾಶಬೀರುವುದಕ್ಕಿಂತ ಹೆಚ್ಚಿನ ಒಳ್ಳೆಯ ಅದೃಷ್ಟವು ಅವರಿಗೆ ಬೇರೆ ಏನಾಗಲು ಸಾಧ್ಯವಿದ್ದಿತು? ಹಝ್ರತ್ ಪೈಗಂಬರ್(ಸ) ಮಕ್ಕದಿಂದ ಅಪ್ರತ್ಯಕ್ಷರಾಗಿರುವರು ಎಂಬ ವಾರ್ತೆಯು ಮದೀನದ ಜನರಿಗೆ ತಲಪಿದ ದಿನದಿಂದಲೇ ಅವರು ಹಝ್ರತ್ ಪೈಗಂಬರ್(ಸ) ಮದೀನಕ್ಕೆ ಆಗಮಿಸಬಹುದೆಂಬ ಪ್ರತೀಕ್ಷೆ ಹೊಂದಿದ್ದರು. ಮದೀನದ ಜನರ ಕೆಲವು ಪ್ರತಿನಿಧಿಗಳು ಪ್ರತಿದಿನ ಹೊರಟು ಅನೇಕ ಮೈಲುಗಳ ತನಕ ಹಝ್ರತ್ ಪೈಗಂಬರರನ್ನು(ಸ) ಬರಮಾಡಿಕೊಳ್ಳಲು ಮುಂದೆ ಸಾಗುತ್ತಿದ್ದರು. ಅನಂತರ ಸಂಜೆ ನಿರಾಶರಾಗಿ ಮರಳಿ ಬರುತ್ತಿದ್ದರು.

ಹಝ್ರತ್ ಪೈಗಂಬರ್(ಸ) ಮದೀನದ ಸಮೀಪ ತಲಪಿದಾಗ ಅದರ ಸಮೀಪವಾಗಿರುವ ಖುಬಾ ಎಂಬ ಗ್ರಾಮದಲ್ಲಿ ತಂಗಲು ನಿರ್ಧರಿಸಿದರು.

ಒಬ್ಬ ಯಹೂದಿಯು ಹಝ್ರತ್ ಪೈಗಂಬರರ(ಸ) ಒಂಟೆಗಳು ಬರುವುದನ್ನು ನೋಡಿ ಹಝ್ರತ್ ಪೈಗಂಬರ್(ಸ) ಮದೀನಕ್ಕೆ ತಲಪಿದರೆಂದು ತಿಳಿದುಕೊಂಡು ಒಂದು ಬೆಟ್ಟದ ಮೇಲೆ ಹತ್ತಿ ಉಚ್ಚ ಸ್ವರದಲ್ಲಿ ಹೀಗೆ ಕೂಗಿ ಹೇಳಿದನು: "ಓ ಖೈಲದ ಪುತ್ರರೇ, (ಖೈಲ ಮದೀನದ ಒಂದು ಕಣಿವೆ ಪ್ರದೇಶವಾಗಿದೆ) ನೀವು ಯಾರನ್ನು ಕಾಯುತ್ತಾ ಇದ್ದಿರೋ ಅವರು ಬಂದಿರುವರು."

ಈ ಧ್ವನಿ ಆಲಿಸಿದ ಕೂಡಲೇ ಮದೀನದ ಜನರು ಖುಬಾದ ಕಡೆಗೆ ಧಾವಿಸಿದರು. ಖುಬಾದ ಜನರು ಹಝ್ರತ್ ಪೈಗಂಬರ್(ಸ) ತಮ್ಮಲ್ಲಿ ತಂಗಲು ನಿರ್ಧರಿಸಿದುದನ್ನು ತಿಳಿದು ತುಂಬಾ ಹರ್ಷಿತರಾಗಿದ್ದರು.

ಆ ಸಂದರ್ಭದಲ್ಲಿ ನಡೆದ ಒಂದು ಸಂಭವ ಹಝ್ರತ್ ಪೈಗಂಬರರ(ಸ) ಅತ್ಯಂತ ಸರಳ ಸ್ವಭಾವವನ್ನು ಪ್ರತಿಬಿಂಬಿಸುತ್ತದೆ.

ಮದೀನದ ಬಹುತೇಕ ಜನರು ಹಝ್ರತ್ ಪೈಗಂಬರರ(ಸ) ದೇಹ ಸ್ವರೂಪದ ಬಗ್ಗೆ ಪರಿಚಿತರಾಗಿರಲಿಲ್ಲ. ಹಝ್ರತ್ ಪೈಗಂಬರ್(ಸ) ಖುಬಾದ ಹೊರಗೆ ಒಂದು ಮರದ ಕೆಳಗೆ ಕುಳಿತಿದ್ದರು. ಮದೀನದ ಜನರು ಅವರನ್ನು ಕಾಣಲು ಓಡುತ್ತಾ ಬರುತ್ತಿದ್ದರು. ಹಝ್ರತ್ ಪೈಗಂಬರ್(ಸ) ಬಹಳ ಸೌಮ್ಯತೆಯಿಂದ ಮರದ ಕೆಳಗೆ ಕುಳಿತಿದ್ದರು. ಅವರ ಜೊತೆಗಿದ್ದ ಹಝ್ರತ್ ಅಬೂಬಕರ್(ರ) ಪ್ರಾಯದಲ್ಲಿ ಹಝ್ರತ್ ಪೈಗಂಬರರಿಗಿಂತ(ಸ) ಚಿಕ್ಕವರಾಗಿದ್ದರೂ ಅವರ ಗಡ್ಡದಲ್ಲಿ ಕೆಲವು ಬಿಳಿಗೂದಲುಗಳು ಕಂಡು ಬರುತ್ತಿದ್ದುವು. ಅವರ ಉಡುಗೆ ತೊಡುಗೆಗಳು ಸಹ ಹಝ್ರತ್ ಪೈಗಂಬರರ(ಸ) ಉಡುಗೆ ತೊಡುಗೆಗಳಿಗಿಂತ ಉತ್ತಮವಾಗಿದ್ದುವು. ಆದುದರಿಂದ ಹಝ್ರತ್ ಪೈಗಂಬರರ(ಸ) ಪರಿಚಯವಿಲ್ಲದ ಜನರು ಹಝ್ರತ್ ಅಬೂಬಕರ್‌ರನ್ನು ಪೈಗಂಬರರೆಂದು ಭಾವಿಸಿ ಅವರ ಕಡೆಗೆ ಅಭಿಮುಖೀಕರಿಸಿ ವಿನಯದಿಂದ ಕುಳಿತುಕೊಳ್ಳಲು ತೊಡಗಿದಾಗ ಹಝ್ರತ್ ಅಬೂಬಕರ್(ರ) ಜನರ ತಪ್ಪುಗ್ರಹಿಕೆಯನ್ನು ಮನವರಿಕೆ ಮಾಡಿಕೊಂಡು, ಕೂಡಲೇ ಒಂದು ಚಾದರವನ್ನು ಎತ್ತಿಹಿಡಿದು ಹಝ್ರತ್ ಪೈಗಂಬರರೊಂದಿಗೆ(ಸ) ಹೇಳಿದರು: "ನಿಮ್ಮ ಮೇಲೆ ಬಿಸಿಲು ಬೀಳುತ್ತಿದೆ. ನಿಮ್ಮ ಮೇಲೆ ನೆರಳಾಗುವಂತೆ ನಾನು ಮಾಡುತ್ತೇನೆ."[30]

ಈ ರೀತಿ ಸೂಕ್ಷ್ಮವಾಗಿ ಜನರಿಗೆ ಅವರ ತಪ್ಪನ್ನು ಹಝ್ರತ್ ಅಬೂಬಕರ್(ರ) ಮನವರಿಕೆ ಮಾಡಿಕೊಟ್ಟರು.

ಖುಬಾದಲ್ಲಿ ಹತ್ತು ದಿನ ತಂಗಿದ ನಂತರ ಹಝ್ರತ್ ಪೈಗಂಬರರನ್ನು(ಸ) ಮದೀನದ ನಿವಾಸಿಗಳು ಮದೀನ ನಗರದೊಳಗೆ ಕರೆದುಕೊಂಡು ಹೋದರು. ಹಝ್ರತ್ ಪೈಗಂಬರ್(ಸ) ಮದೀನವನ್ನು ಪ್ರವೇಶಿಸುವಾಗ ಮುಸ್ಲಿಮ್ ಪುರುಷರೂ ಮಹಿಳೆಯರೂ ಮಕ್ಕಳೂ ಎಲ್ಲಾ ಮಾರ್ಗಗಳಲ್ಲೂ ಜಮಾಯಿಸಿ ಹಝ್ರತ್ ಪೈಗಂಬರರಿಗೆ(ಸ) ಸ್ವಾಗತ ಕೋರುತ್ತಿದ್ದರು. ಮಕ್ಕಳು ಮತ್ತು ಮಹಿಳೆಯರು ಹೀಗೆ ಹಾಡುತ್ತಿದ್ದರು:

ತಲಅಲ್‌ಬದ್‌ರು ಅಲೈನಾ ಮಿನ್ ಸನಿಯಾತಿಲ್ ವಿದಾಇ

ವಜಬಶ್ಶುಕ್‌ರು ಅಲೈನಾ ಮಾ ದಆ ಲಿಲ್ಲಾಹಿ ದಾಇ

ಅಯ್ಯುಹಲ್ ಮಬ್‌ಊಸು ಫೀನಾ ಜಿಅ್‌ತ ಬಿಲ್‌ಅಮ್ರಿಲ್ ಮುತಾಇ[31]

"ಪೂರ್ಣಿಮೆಯ ಚಂದ್ರನು ನಮ್ಮ ಮೇಲೆ ವಿದಾಅ್ ಶಿಖರದಿಂದ ಉದಿಸಿರುವನು. ಭೂಮಿಯಲ್ಲಿ ಅಲ್ಲಾಹನನ್ನು ಕರೆದು ಪ್ರಾರ್ಥಿಸುವ ಒಬ್ಬನಾದರೂ ಬಾಕಿಯಾಗಿ ಉಳಿಯುವ ತನಕ ನಮ್ಮ ಮೇಲೆ ಉಂಟಾಗಿರುವ ಅವರ ಉಪಕಾರಗಳನ್ನು ಸ್ಮರಿಸಬೇಕಾದುದು ಅವಶ್ಯಕವಾಗಿದೆ. ಓ ಅಲ್ಲಾಹನಿಂದ ನಮಗೆ ಕಳುಹಿಸಲ್ಪಟ್ಟವರೇ, ನಿಶ್ಚಯವಾಗಿಯೂ ನಿಮ್ಮ ಆಜ್ಞೆಗಳು ಅನುಸರಿಸಲ್ಪಡುವುವು."

ಹಝ್ರತ್ ಪೈಗಂಬರ್(ಸ) ಮದೀನವನ್ನು ಪ್ರವೇಶಿಸಿದುದು ಪೂರ್ವ ದಿಕ್ಕಿನಿಂದಾಗಿರಲಿಲ್ಲ. ಆದರೆ ಪೂರ್ಣಿಮೆಯ ಚಂದ್ರನು ಪೂರ್ವ ದಿಕ್ಕಿನಿಂದ ಉದಿಸುತ್ತಾನೆ. ನಿಜವಾದ ಚಂದ್ರ ಆಧ್ಯಾತ್ಮಿಕ ಚಂದ್ರನಾಗಿರುವನು ಎಂದು ಮದೀನದ ನಿವಾಸಿಗಳ ಉದ್ದೇಶವಾಗಿತ್ತು. ತಾವು ಇಷ್ಟರತನಕ ಅಂಧಕಾರದಲ್ಲಿದ್ದೆವು. ತಮ್ಮ ಮೇಲೆ ಈಗ ಚಂದ್ರನುದಿಸಿ ಬೆಳಕನ್ನು ನೀಡಿರುವನು. ಆ ಚಂದ್ರನು ಉದಿಸಿದುದು ಲೌಕಿಕ ಜಗತ್ತಿನ ಚಂದ್ರನುದಿಸುವ ದಿಕ್ಕಿನಿಂದಲ್ಲ ಎಂದು ಮದೀನದ ನಿವಾಸಿಗಳು ಹೇಳಬಯಸಿದ್ದರು.

ಹಝ್ರತ್ ಪೈಗಂಬರ್(ಸ) ಮದೀನವನ್ನು ಪ್ರವೇಶಿಸಿದುದು ಸೋಮವಾರದ ದಿನವಾಗಿತ್ತು. ಅವರು ಸೌರ್ ಗುಹೆಯಿಂದ ಹೊರಕ್ಕೆ ಬಂದ ದಿನವೂ ಸೋಮವಾರವಾಗಿತ್ತು. ಆಶ್ಚರ್ಯಕರ ವಿಷಯವೇನೆಂದರೆ, ಸೋಮವಾರದ ದಿನದಂದೇ ಮಕ್ಕ ನಗರವು ಹಝ್ರತ್ ಪೈಗಂಬರರಿಂದ(ಸ) ಜಯಿಸಲ್ಪಟ್ಟಿತು.

ಹಝ್ರತ್ ಪೈಗಂಬರ್(ಸ) ಮದೀನವನ್ನು ಪ್ರವೇಶಿಸಿದಾಗ ಮದೀನದ ಪ್ರತಿಯೊಬ್ಬ ವ್ಯಕ್ತಿ ತನ್ನ ಮನೆಯಲ್ಲಿ ಹಝ್ರತ್ ಪೈಗಂಬರ್(ಸ) ತಂಗಬೇಕೆಂದು ಬಯಸುತ್ತಿದ್ದರು. ಮದೀನದ ಮಾರ್ಗಗಳಲ್ಲಿ ಹಝ್ರತ್ ಪೈಗಂಬರರ(ಸ) ಒಂಟೆ ಹೋಗುತ್ತಿದ್ದಾಗ ಆ ಮಾರ್ಗಗಳ ಎರಡು ಬದಿಗಳಲ್ಲಿ ವಾಸವಿದ್ದ ವಿವಿಧ ಕುಟುಂಬಗಳ ಜನರು ತಮ್ಮ ಮನೆಗಳ ಮುಂದೆ ನಿಂತು ಹಝ್ರತ್ ಪೈಗಂಬರರನ್ನು(ಸ) ಸ್ವಾಗತಿಸುತ್ತಾ ಹೇಳುತ್ತಿದ್ದರು:

"ಓ ಅಲ್ಲಾಹನ ಪೈಗಂಬರರೇ, ನಮ್ಮ ಈ ಮನೆಗಳು, ನಮ್ಮ ಈ ಸಂಪತ್ತು ಮತ್ತು ನಮ್ಮ ಈ ದೇಹಗಳು ನಿಮ್ಮ ಸೇವೆಗಾಗಿ ಸಿದ್ಧವಾಗಿವೆ. ನಾವು ನಿಮ್ಮನ್ನು ರಕ್ಷಣೆ ಮಾಡಲು ಶಕ್ತರಾಗಿದ್ದೇವೆ. ನೀವು ನಮ್ಮ ಸಮೀಪವೇ ತಂಗಿರಿ."

ಕೆಲವರು ಉತ್ಸಾಹದಿಂದ ಮುಂದೆ ಬಂದು ಹಝ್ರತ್ ಪೈಗಂಬರರ(ಸ) ಒಂಟೆಯ ಹಗ್ಗ ಹಿಡಿದು ಅವರನ್ನು ತಮ್ಮ ಮನೆಯಲ್ಲಿ ಇಳಿಸಿಕೊಳ್ಳಲು ಪ್ರಯತ್ನಿಸುತ್ತಿದ್ದರು. ಹಝ್ರತ್ ಪೈಗಂಬರ್(ಸ) ಪ್ರತಿಯೊಬ್ಬರಿಗೆ ಹೀಗೆ ಹೇಳುತ್ತಿದ್ದರು:

"ನೀವು ಒಂಟೆಯನ್ನು ತಡೆದು ನಿಲ್ಲಿಸಬೇಡಿರಿ. ಸ್ವತಂತ್ರವಾಗಿ ಚಲಿಸಲು ಅದನ್ನು ಬಿಟ್ಟುಬಿಡಿರಿ. ಈ ದಿನ ಅದು ಅಲ್ಲಾಹನ ಆಜ್ಞೆ ಪ್ರಕಾರ ಅಲ್ಲಾಹನು ಇಚ್ಛಿಸುವ ಸ್ಥಳದಲ್ಲಿ ನಿಲ್ಲುವುದು."

ಒಂಟೆ ಮುಂದೆ ಸಾಗುತ್ತಾ ಮದೀನದ ಒಂದು ಅಂಚಿನಲ್ಲಿದ್ದ ಬನೂ ನಜ್ಜಾರ್ ಗೋತ್ರದ ಅನಾಥರಿಗೆ ಸೇರಿದ್ದ ಸ್ಥಳದ ಸಮೀಪಕ್ಕೆ ಹೋಗಿ ನಿಂತಿತು. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು:

"ನಾವು ಇಲ್ಲೇ ನಿಲ್ಲಬೇಕೆಂದು ಅಲ್ಲಾಹನ ಇಚ್ಛೆ ಎಂದು ತಿಳಿಯುತ್ತದೆ."

ಅನಂತರ ಕೇಳಿದರು:

"ಈ ಸ್ಥಳ ಯಾರಿಗೆ ಸೇರಿದೆ?"

ಆ ಜಮೀನು ಕೆಲವು ಅನಾಥರ ಸ್ವತ್ತಾಗಿತ್ತು. ಅನಾಥರ ಸಂರಕ್ಷಕನು ಬಂದು, ಅದು ಇಂತಿಂತಹ ಅನಾಥರ ಸ್ವತ್ತಾಗಿದೆ ಎಂದೂ ಅದನ್ನು ಪೈಗಂಬರರ ಸೇವೆಗಾಗಿ ಅರ್ಪಿಸಬಹುದಾಗಿದೆ ಎಂದೂ ಹೇಳಿದನು.

ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: "ನಾವು ಯಾರ ಸ್ವತ್ತನ್ನೂ ಪುಕ್ಕಟೆಯಾಗಿ ತೆಗೆದುಕೊಳ್ಳಲಾರೆವು."

(ಮುಂದುವರಿಯುವುದು)

"ತನ್ನಿಗಾಗಿ ಇಷ್ಟಪಡುವುದನ್ನೇ ತನ್ನ ಸಹೋದರನಿಗೂ ಇಷ್ಟಪಡುವವರೆಗೆ ಯಾರೂ ಪೂರ್ಣ ವಿಶ್ವಾಸಿಯಾಗುವುದಿಲ್ಲ"

(ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್)

ದುಆವಿನ ಆಕಾಂಕ್ಷಿ:
M.B. Nasir Ahmed Saheb & Family, Bengaluru, Karnataka

"ಸೌಮ್ಯತೆ ಯಾವ ವಿಷಯದಲ್ಲಿದ್ದರೂ ಅದನ್ನು ಸುಂದರಗೊಳಿಸುತ್ತದೆ."

(ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್)

ದುಆವಿನ ಆಕಾಂಕ್ಷಿ:
Late S.R Abdur Rauf Saheb & Family, Shimoga, Karnataka

ಹಝ್ರತ್ ಮಸೀಹ್ ಮೌಊದರ(ಅಲೈಹಿಸ್ಸಲಾಮ್) ಪವಿತ್ರ ಜೀವನ

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ(ರ)

(52) **ಬಿಸ್ಮಿಲ್ಲಾಹಿರ್ ರಹ್ಮಾನಿರ್ ರಹೀಮ್**. ಕಾಲಹುವಾಂ ನಿವಾಸಿ ಝಂಡಾ ಸಿಂಗ್ ಅವರು ನನ್ನೊಂದಿಗೆ ಹೇಳಿದ್ದು: "ನಾನು ದೊಡ್ಡ ಮಿರ್ಜಾ ಸಾಹಿಬ್ ಅವರ ಬಳಿಗೆ ಆಗಾಗ್ಗೆ ಹೋಗುತ್ತಿದ್ದೆ. ಒಮ್ಮೆ ದೊಡ್ಡ ಮಿರ್ಝಾ ಸಾಹಿಬ್ ಅವರು ನನಗೆ, 'ಹೋಗಿ ಗುಲಾಮ್ ಅಹ್ಮದ್ ಅವರನ್ನು ಕರೆದುಕೊಂಡು ಬಾ. ಜಿಲ್ಲೆಗೆ ಒಬ್ಬ ಇಂಗ್ಲಿಷ್ ಅಧಿಕಾರಿಯೊಬ್ಬರು ಬಂದಿದ್ದಾರೆ. ಅವರ ಇಚ್ಛೆಯಿದ್ದರೆ ನಿನ್ನನ್ನು ಯಾವುದಾದರೂ ಉತ್ತಮ ಹುದ್ದೆಯಲ್ಲಿ ಉದ್ಯೋಗಕ್ಕೆ ಸೇರಿಸಿಕೊಡಬಹುದು' ಎಂದು ಹೇಳಿದರು. ಝಂಡಾ ಸಿಂಗ್ ಹೇಳುತ್ತಿದ್ದರು: "ನಾನು ಮಿರ್ಝಾ ಸಾಹಿಬ್ ಅವರ ಬಳಿಗೆ ಹೋದೆ. ಅಲ್ಲಿ ನಾಲ್ಕೂ ಕಡೆ ಪುಸ್ತಕಗಳ ರಾಶಿಯನ್ನು ಹಾಕಿಕೊಂಡು ಅದರ ಮಧ್ಯದಲ್ಲಿ ಕುಳಿತು ಏನೋ ಅಧ್ಯಯನ ಮಾಡುತ್ತಿರುವುದನ್ನು ನೋಡಿದೆ. ನಾನು ದೊಡ್ಡ ಮಿರ್ಜಾ ಸಾಹಿಬ್ ಅವರ ಸಂದೇಶವನ್ನು ತಿಳಿಸಿದೆ. ಮಿರ್ಜಾ ಸಾಹಿಬ್ ಬಂದು ಉತ್ತರಿಸಿದರು: 'ನಾನು ಈಗಾಗಲೇ ಉದ್ಯೋಗಕ್ಕೆ ಸೇರಿದ್ದೇನೆ.' ದೊಡ್ಡ ಮಿರ್ಝಾ ಸಾಹಿಬ್ ಹೇಳಿದರು: 'ಹೌದಾ, ನಿಜವಾಗಿಯೂ ಉದ್ಯೋಗಕ್ಕೆ ಸೇರಿದ್ದೀಯಾ?' ಮಿರ್ಝಾ ಸಾಹಿಬ್ ಹೇಳಿದರು: 'ಹೌದು, ಸೇರಿದ್ದೇನೆ.' ಅದಕ್ಕೆ ದೊಡ್ಡ ಮಿರ್ಝಾ ಸಾಹಿಬ್ ಹೇಳಿದರು: 'ಹಾಗಾದರೆ ಸರಿ, ನಿಜವಾಗಿಯೂ ಉದ್ಯೋಗಕ್ಕೆ ಸೇರಿದ್ದರೆ ಪರವಾಗಿಲ್ಲ.'"

ಈ ವಿನೀತನು ಹೇಳುವುದೇನೆಂದರೆ, ಕಾಲಹುವಾಂ ಖಾದಿಯಾನ್‌ನ ದಕ್ಷಿಣಕ್ಕೆ ಎರಡು ಮೈಲುಗಳಷ್ಟು ದೂರದಲ್ಲಿರುವ ಒಂದು ಗ್ರಾಮವಾಗಿದೆ. ಇಲ್ಲಿ 'ಉದ್ಯೋಗಕ್ಕೆ ಸೇರಿದ್ದೇನೆ' ಎಂಬುದರ ಅರ್ಥ ದೇವನ ಸೇವೆಗೆ ಸೇರಿದ್ದೇನೆ ಎಂಬುದಾಗಿದೆ. ಇದಲ್ಲದೆ, ಝಂಡಾ ಸಿಂಗ್ ಈ ವರದಿಯನ್ನು ಅನೇಕ ಬಾರಿ ಹೇಳಿದ್ದಾನೆ. ಖಾದಿಯಾನ್‌ನ ಇಂದಿನ ಅಭಿವೃದ್ಧಿಯನ್ನು ನೋಡಿದಾಗ ಅವನು ಹಝ್ರತ್ ಮಸೀಹ್ ಮೌಊದ್ (ಅಲೈಹಿಸ್ಸಲಾಮ್) ಅವರ ಕುರಿತು ಬಹಳವಾಗಿ ಮಾತನಾಡುತ್ತಿದ್ದನು ಮತ್ತು ಅವರೊಂದಿಗೆ ಬಹಳ ಪ್ರೀತಿ ಹೊಂದಿದ್ದನು. ಇನ್ನೂ ನಾನು ಹೇಳುವುದೇನೆಂದರೆ, ನಮ್ಮ ತಾತನವರು ಕುಟುಂಬದಲ್ಲಿ ಎಲ್ಲರಿಗಿಂತ ಹಿರಿಯರು ಮತ್ತು ಗೌರವಾನ್ವಿತರಾಗಿದ್ದ ಕಾರಣ ಜನರು ಸಾಮಾನ್ಯವಾಗಿ ಅವರನ್ನು ದೊಡ್ಡ ಮಿರ್ಝಾ ಸಾಹಿಬ್ ಎಂದು ಕರೆಯುತ್ತಿದ್ದರು. ಸ್ವತಃ ಹಝ್ರತ್ ಮಸೀಹ್ ಮೌಊದ್ (ಅಲೈಹಿಸ್ಸಲಾಮ್) ಅವರೂ ಸಾಮಾನ್ಯವಾಗಿ ಅವರ ಕುರಿತು ಇದೇ ಪದಗಳನ್ನು ಬಳಸುತ್ತಿದ್ದರು.

(53) **ಬಿಸ್ಮಿಲ್ಲಾಹಿರ್ ರಹ್ಮಾನಿರ್ ರಹೀಮ್**. ಹಝ್ರತ್ ವಾಲಿದಾ ಸಾಹಿಬಾ ಅವರು ನನ್ನೊಂದಿಗೆ ಹೇಳಿದರು: ಹಝ್ರತ್ ಮಸೀಹ್ ಮೌಊದ್ (ಅಲೈಹಿಸ್ಸಲಾಮ್) ಅವರು ಬಹಳಷ್ಟು ಸದಖಾ ನೀಡುತ್ತಿದ್ದರು ಮತ್ತು ಸಾಮಾನ್ಯವಾಗಿ ಅಷ್ಟು ಗುಪ್ತವಾಗಿ ನೀಡುತ್ತಿದ್ದರು, ನಮಗೂ ಅದರ ಅರಿವಾಗುತ್ತಿರಲಿಲ್ಲ. ನಾನು ಕೇಳಿದೆ: "ಅವರು ಎಷ್ಟು ಸದಖಾ ನೀಡುತ್ತಿದ್ದರು?" ವಾಲಿದಾ ಸಾಹಿಬಾ ಹೇಳಿದರು: "ಬಹಳಷ್ಟು ನೀಡುತ್ತಿದ್ದರು. ಕೊನೆಯ ದಿನಗಳಲ್ಲಿ ಎಷ್ಟು ಹಣ ಬರುತ್ತಿತ್ತೋ, ಅದರ ಹತ್ತನೇ ಒಂದು ಭಾಗವನ್ನು ಸದಖಾಗಾಗಿ ಪ್ರತ್ಯೇಕವಾಗಿ ತೆಗೆದಿಡುತ್ತಿದ್ದರು ಮತ್ತು ಅದರಿಂದ ಸದಖಾ ನೀಡುತ್ತಿದ್ದರು." ವಾಲಿದಾ ಸಾಹಿಬಾ ವಿವರಿಸಿದರು: "ಇದರ ಅರ್ಥ ಹತ್ತನೇ ಒಂದು ಭಾಗಕ್ಕಿಂತ ಹೆಚ್ಚು ನೀಡುತ್ತಿರಲಿಲ್ಲ ಎಂದಲ್ಲ. ಅವರು ಹೇಳುತ್ತಿದ್ದರು: ಕೆಲವೊಮ್ಮೆ ಖರ್ಚುಗಳು ಹೆಚ್ಚಾದಾಗ ಮನುಷ್ಯ ಸದಖಾದಲ್ಲಿ ಕೊರತೆ ಮಾಡುತ್ತಾನೆ. ಆದರೆ ಸದಖಾದ ಹಣವನ್ನು ಮೊದಲೇ ಪ್ರತ್ಯೇಕವಾಗಿ ತೆಗೆದಿಟ್ಟರೆ ನಂತರ ಕೊರತೆ ಮಾಡುವ ಸಾಧ್ಯತೆ ಇರುವುದಿಲ್ಲ; ಏಕೆಂದರೆ ಆ ಹಣವನ್ನು ಬೇರೆ ಉದ್ದೇಶಕ್ಕೆ ಬಳಸಲು ಸಾಧ್ಯವಾಗುವುದಿಲ್ಲ." ವಾಲಿದಾ ಸಾಹಿಬಾ ಹೇಳಿದರು: "ಇದೇ ಉದ್ದೇಶದಿಂದ ಅವರು ತಮ್ಮ ಒಟ್ಟು ಆದಾಯದ ಹತ್ತನೇ ಒಂದು ಭಾಗವನ್ನು ಪ್ರತ್ಯೇಕವಾಗಿ ತೆಗೆದಿಡುತ್ತಿದ್ದರು. ಇಲ್ಲದಿದ್ದರೆ, ಸಾಮಾನ್ಯವಾಗಿ ಅವರು ಅದಕ್ಕಿಂತಲೂ ಹೆಚ್ಚು ಸದಖಾ ನೀಡುತ್ತಿದ್ದರು." ನಾನು ಕೇಳಿದೆ: "ನೀವು ಸದಖಾ ನೀಡುವಾಗ ಅಹ್ಮದೀ ಮತ್ತು ಗೈರ್ ಅಹ್ಮದೀ ಎಂಬ ಭೇದವನ್ನು ಗಮನಿಸುತ್ತಿದ್ದೀರಾ?" ವಾಲಿದಾ ಸಾಹಿಬಾ ಹೇಳಿದರು: "ಇಲ್ಲ, ಅವರು ಪ್ರತಿಯೊಬ್ಬ ಅಗತ್ಯವಂತನಿಗೂ ನೀಡುತ್ತಿದ್ದರು." ನಾನು ಹೇಳುವುದೇನೆಂದರೆ, ಆ ಕಾಲದಲ್ಲಿ ಖಾದಿಯಾನ್‌ನಲ್ಲಿ ಅಗತ್ಯವಿರುವ ಅಹ್ಮದೀಗಳ ಸಂಖ್ಯೆಯೂ ಬಹಳ ಕಡಿಮೆಯಾಗಿತ್ತು.

(54) **ಬಿಸ್ಮಿಲ್ಲಾಹಿರ್ ರಹ್ಮಾನಿರ್ ರಹೀಮ್**. ಹಝ್ರತ್ ವಾಲಿದಾ ಸಾಹಿಬಾ ಅವರು ನನ್ನೊಂದಿಗೆ ಹೇಳಿದರು: ಹಝ್ರತ್ ಮಸೀಹ್ ಮೌಊದ್ (ಅಲೈಹಿಸ್ಸಲಾಮ್) ಅವರು ಯಾರಿಂದಲಾದರೂ ಸಾಲ ಪಡೆದಾಗ, ಅದನ್ನು ಹಿಂದಿರುಗಿಸುವಾಗ ಸ್ವಲ್ಪ ಹೆಚ್ಚುವರಿ ಹಣವನ್ನು ನೀಡುತ್ತಿದ್ದರು. ನಾನು ಕೇಳಿದೆ: "ಇದಕ್ಕೆ ನಿಮಗೆ ಯಾವುದಾದರೂ ಉದಾಹರಣೆ ನೆನಪಿದೆಯೇ?" ವಾಲಿದಾ ಸಾಹಿಬಾ ಹೇಳಿದರು: "ಈಗ ಉದಾಹರಣೆ ನೆನಪಿಲ್ಲ. ಆದರೆ ಅವರು ಆಗಾಗ್ಗೆ ಹೇಳುತ್ತಿದ್ದರು: ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಂ ಅವರು ಹೀಗೆ ಮಾಡಲು ಹೇಳಿದ್ದಾರೆ." ವಾಲಿದಾ ಸಾಹಿಬಾ ಮತ್ತೂ ಹೇಳಿದರು: "ಹಝ್ರತ್ ಸಾಹಿಬ್ ಅವರು ತಾವು ಸ್ವತಃ ಆಚರಿಸದ ಯಾವುದೇ ನೆಕಿಯ ಮಾತನ್ನು ಹೇಳುತ್ತಿರಲಿಲ್ಲ." ನಾನು ಕೇಳಿದೆ: "ಹಝ್ರತ್ ಮಸೀಹ್ ಮೌಊದ್ (ಅಲೈಹಿಸ್ಸಲಾಮ್) ಅವರು ಎಂದಾದರೂ ಯಾರಿಗಾದರೂ ಸಾಲ ನೀಡಿದ್ದಾರೆಯೇ?" ವಾಲಿದಾ ಸಾಹಿಬಾ ಹೇಳಿದರು: "ಹೌದು, ಅನೇಕ ಬಾರಿ ನೀಡಿದ್ದಾರೆ." ಒಮ್ಮೆ ಮೌಲವಿ ಸಾಹಿಬ್ (ಖಲೀಫತುಲ್ ಮಸೀಹ್ ಅವ್ವಲ್) ಮತ್ತು ಹಕೀಮ್ ಫಝ್ಲ್ ದೀನ್ ಸಾಹಿಬ್ ಭೇರವಿ ಅವರು ಹಝ್ರತ್ ಸಾಹಿಬ್ ಅವರಿಂದ ಸಾಲ ಪಡೆದಿದ್ದರು. ಮೌಲವಿ ಸಾಹಿಬ್ ಅವರು ಸಾಲದ ಹಣವನ್ನು ಹಿಂದಿರುಗಿಸಿದಾಗ, ಹಝ್ರತ್ ಸಾಹಿಬ್ ಅವರು ಅದನ್ನು ಮರಳಿ ಕಳುಹಿಸಿ, "ನೀವು ನಮ್ಮ ಹಣವನ್ನು ನಿಮ್ಮ ಹಣದಿಂದ ಬೇರೆ ಎಂದು ಭಾವಿಸುತ್ತೀರಾ?" ಎಂದು ಸಂದೇಶ ಕಳುಹಿಸಿದರು. ಮೌಲವಿ ಸಾಹಿಬ್ ಅವರು ತಕ್ಷಣ ಹಕೀಮ್ ಫಝ್ಲ್ ದೀನ್ ಸಾಹಿಬ್ ಅವರಿಗೆ ಸಂದೇಶ ಕಳುಹಿಸಿ, "ನಾನು ಈ ತಪ್ಪು ಮಾಡಿ ಈಗಾಗಲೇ ಗದರಿಸಿಕೊಂಡಿದ್ದೇನೆ. ನೀವು ಹಣವನ್ನು ಹಿಂದಿರುಗಿಸಬೇಡಿ" ಎಂದು ಹೇಳಿದರು. ನಾನು ಯಾರೊಂದಿಗೋ ಕೇಳಿದ್ದೇನೆ: ಮೌಲವಿ ಸಾಹಿಬ್ ಅವರು ಹಕೀಮ್ ಸಾಹಿಬ್ ಅವರಿಗೆ, "ಅದನ್ನು ಖಂಡಿತವಾಗಿ ಹಿಂದಿರುಗಿಸಬೇಕೆಂದಿದ್ದರೆ ಬೇರೆ ರೀತಿಯಲ್ಲಿ ನೀಡಿ" ಎಂದೂ ಹೇಳಿದ್ದರು.

(55) **ಬಿಸ್ಮಿಲ್ಲಾಹಿರ್ ರಹ್ಮಾನಿರ್ ರಹೀಮ್**. ಹಝ್ರತ್ ವಾಲಿದಾ ಸಾಹಿಬಾ ಅವರು ನನ್ನೊಂದಿಗೆ ಹೇಳಿದರು: ಹಝ್ರತ್ ಮಸೀಹ್ ಮೌಊದ್ (ಅಲೈಹಿಸ್ಸಲಾಮ್) ಅವರು ತಮ್ಮ ಕೊನೆಯ ದಿನಗಳಲ್ಲಿ ಒಮ್ಮೆ ನನ್ನ ಮುಂದೆ ಹಜ್ಜ್ ಮಾಡುವ ಇಚ್ಛೆಯನ್ನು ವ್ಯಕ್ತಪಡಿಸಿದ್ದರು. ಅದರಂತೆ, ಅವರ ವಫಾತ್ ನಂತರ ನಾನು ಅವರ ಪರವಾಗಿ ಹಜ್ಜ್ ಮಾಡಿಸಿದೆ. ಹಝ್ರತ್ ವಾಲಿದಾ ಸಾಹಿಬಾ ಅವರು ಹಾಫಿಝ್ ಅಹ್ಮದ್ ಉಲ್ಲಾಹ್ ಸಾಹಿಬ್ ಮರಹೂಮ್ ಅವರನ್ನು ಕಳುಹಿಸಿ ಹಝ್ರತ್ ಸಾಹಿಬ್ ಅವರ ಪರವಾಗಿ ಹಜ್ಜ್ ಬದಲ್ ಮಾಡಿಸಿದ್ದರು. ಹಾಫಿಝ್ ಸಾಹಿಬ್ ಅವರ ಎಲ್ಲಾ ಖರ್ಚುಗಳನ್ನು ವಾಲಿದಾ ಸಾಹಿಬಾ ಅವರೇ ಭರಿಸಿದ್ದರು. ಹಾಫಿಝ್ ಸಾಹಿಬ್ ಹಳೆಯ ಸಹಾಬಿಗಳಲ್ಲಿ ಒಬ್ಬರಾಗಿದ್ದರು ಮತ್ತು ಬಹಳ ವರ್ಷಗಳ ಹಿಂದೆ ವಫಾತ್ ಹೊಂದಿದ್ದಾರೆ.

(56) **ಬಿಸ್ಮಿಲ್ಲಾಹಿರ್ ರಹ್ಮಾನಿರ್ ರಹೀಮ್**. ಹಝ್ರತ್ ವಾಲಿದಾ ಸಾಹಿಬಾ ಅವರು ನನ್ನೊಂದಿಗೆ ಹೇಳಿದರು: ಹಝ್ರತ್ ಮಸೀಹ್ ಮೌಊದ್ (ಅಲೈಹಿಸ್ಸಲಾಮ್) ಅವರು ಆಹಾರಗಳಲ್ಲಿ ಪಕ್ಷಿಯ ಮಾಂಸವನ್ನು ಹೆಚ್ಚು ಇಷ್ಟಪಡುತ್ತಿದ್ದರು. ಆರಂಭದಲ್ಲಿ ಅವರು ಬಟೇರ್‌ನ ಮಾಂಸವನ್ನೂ ಸೇವಿಸುತ್ತಿದ್ದರು. ಆದರೆ ತಾಊನ್‌ನ ಪ್ರಾರಂಭವಾದಾಗ ಅವರು ಅದರ ಮಾಂಸವನ್ನು ತಿನ್ನುವುದನ್ನು ಬಿಟ್ಟುಬಿಟ್ಟರು. ಏಕೆಂದರೆ ಅವರು ಹೇಳುತ್ತಿದ್ದರು: "ಇದರಲ್ಲಿ ತಾಊನ್‌ನ ಜೀವಾಣು ಇರುತ್ತದೆ." ಮೀನಿನ ಮಾಂಸವೂ ಹಝ್ರತ್ ಸಾಹಿಬ್ ಅವರಿಗೆ ಇಷ್ಟವಾಗಿತ್ತು. ಅವರು ನಿಯಮಿತವಾಗಿ ಉಪಾಹಾರ ಮಾಡುತ್ತಿರಲಿಲ್ಲ. ಆದರೆ ಸಾಮಾನ್ಯವಾಗಿ ಬೆಳಿಗ್ಗೆ ಹಾಲು ಕುಡಿಯುತ್ತಿದ್ದರು. ನಾನು ಕೇಳಿದೆ: "ಹಾಲು ಅವರಿಗೆ ಜೀರ್ಣವಾಗುತ್ತಿತ್ತೇ?" ವಾಲಿದಾ ಸಾಹಿಬಾ ಹೇಳಿದರು: "ಜೀರ್ಣವಾಗುತ್ತಿರಲಿಲ್ಲ, ಆದರೂ ಕುಡಿಯುತ್ತಿದ್ದರು." ವಾಲಿದಾ ಸಾಹಿಬಾ ಹೇಳಿದರು: "ಪಕೋಡೆಗಳೂ ಹಝ್ರತ್ ಸಾಹಿಬ್ ಅವರಿಗೆ ಇಷ್ಟವಾಗಿದ್ದವು. ಒಂದು ಕಾಲದಲ್ಲಿ ಅವರು ಬಹಳವಾಗಿ ಸಿಕಂಜಬೀನ್ ಪಾನೀಯವನ್ನು ಸೇವಿಸುತ್ತಿದ್ದರು, ಆದರೆ ನಂತರ ಅದನ್ನೂ ಬಿಟ್ಟರು." ಒಮ್ಮೆ ಅವರು ದೀರ್ಘಕಾಲದವರೆಗೆ ಯಾವುದೇ ಬೇಯಿಸಿದ ಆಹಾರವನ್ನು ಸೇವಿಸಲಿಲ್ಲ. ಸ್ವಲ್ಪ ಮೊಸರಿನೊಂದಿಗೆ ರೊಟ್ಟಿಯನ್ನು ಬೆರೆಸಿ ತಿನ್ನುತ್ತಿದ್ದರು. ಕೆಲವೊಮ್ಮೆ ಜೋಳದ ರೊಟ್ಟಿಯನ್ನೂ ಇಷ್ಟಪಡುತ್ತಿದ್ದರು. ಊಟ ಮಾಡುವಾಗ ಅವರು ರೊಟ್ಟಿಯನ್ನು ಸಣ್ಣ ಸಣ್ಣ ತುಂಡುಗಳಾಗಿ ಮಾಡುತ್ತಾ ಹೋಗುತ್ತಿದ್ದರು. ಕೆಲವು ತಿನ್ನುತ್ತಿದ್ದರು ಮತ್ತು ಕೆಲವು ಬಿಟ್ಟುಬಿಡುತ್ತಿದ್ದರು. ಊಟದ ನಂತರ ಅವರ ಮುಂದೆ ಅನೇಕ ರೊಟ್ಟಿಯ ತುಂಡುಗಳು ಉಳಿಯುತ್ತಿದ್ದವು. ಒಂದು ಕಾಲದಲ್ಲಿ ಅವರು ಚಹಾವನ್ನು ಬಹಳವಾಗಿ ಸೇವಿಸುತ್ತಿದ್ದರು, ಆದರೆ ನಂತರ ಅದನ್ನೂ ಬಿಟ್ಟರು. ವಾಲಿದಾ ಸಾಹಿಬಾ ಹೇಳಿದರು: "ಹಝ್ರತ್ ಸಾಹಿಬ್ ಬಹಳ ಕಡಿಮೆ ಆಹಾರ ಸೇವಿಸುತ್ತಿದ್ದರು. ಊಟದ ಸಮಯವೂ ನಿಶ್ಚಿತವಾಗಿರಲಿಲ್ಲ. ಬೆಳಗಿನ ಊಟವನ್ನು ಕೆಲವೊಮ್ಮೆ ಹನ್ನೆರಡು ಅಥವಾ ಒಂದು ಗಂಟೆಯಲ್ಲಿಯೂ ಮಾಡುತ್ತಿದ್ದರು. ಸಂಜೆ ಊಟವನ್ನು ಸಾಮಾನ್ಯವಾಗಿ ಮಗ್ರಿಬ್ ನಮಾಝ್ ನಂತರ ಮಾಡುತ್ತಿದ್ದರು; ಆದರೆ ಕೆಲವೊಮ್ಮೆ ಅದಕ್ಕೂ ಮೊದಲು ಮಾಡುತ್ತಿದ್ದರು. ಒಟ್ಟಿನಲ್ಲಿ ಯಾವುದೇ ನಿಗದಿತ ಸಮಯ ಇರಲಿಲ್ಲ. ಕೆಲವೊಮ್ಮೆ ಸ್ವತಃ ಊಟವನ್ನು ಕೇಳುತ್ತಿದ್ದರು: 'ಊಟವನ್ನು ತಂದುಕೊಡಿ, ಸಿದ್ಧವಾಗಿದೆಯೇ? ಹಾಗಾದರೆ ಕೊಡಿ; ನಂತರ ನಾನು ಕೆಲಸ ಪ್ರಾರಂಭಿಸಬೇಕಾಗಿದೆ.'" ನಾನು ಕೇಳಿದೆ: "ನೀವು ಯಾವ ಸಮಯದಲ್ಲಿ ಕೆಲಸ ಮಾಡುತ್ತಿದ್ದಿರಿ?" ವಾಲಿದಾ ಸಾಹಿಬಾ ಹೇಳಿದರು: "ಇಡೀ ದಿನ ಕೆಲಸದಲ್ಲೇ ಕಳೆಯುತ್ತಿತ್ತು. ಬೆಳಿಗ್ಗೆ ಹತ್ತು ಗಂಟೆಗೆ ಅಂಚೆ ಬರುತ್ತಿತ್ತು. ಆಗ ಅವರು ಅಂಚೆಯನ್ನು ಓದುತ್ತಿದ್ದರು. ಅದಕ್ಕೂ ಮೊದಲು ಕೆಲವೊಮ್ಮೆ ಬರವಣಿಗೆಯ ಕೆಲಸವನ್ನು ಪ್ರಾರಂಭಿಸುತ್ತಿರಲಿಲ್ಲ; ಅಂಚೆಯ ಕಾರಣದಿಂದ ಮಧ್ಯದಲ್ಲಿ ಕೆಲಸಕ್ಕೆ ವ್ಯತ್ಯಯವಾಗಬಾರದು ಎಂಬ ಉದ್ದೇಶದಿಂದ. ಆದರೆ ಕೆಲವೊಮ್ಮೆ ಅದಕ್ಕೂ ಮೊದಲು ಕೆಲಸ ಪ್ರಾರಂಭಿಸುತ್ತಿದ್ದರು." ನಾನು ಹೇಳುವುದೇನೆಂದರೆ, ಹಝ್ರತ್ ಮಸೀಹ್ ಮೌಊದ್ (ಅಲೈಹಿಸ್ಸಲಾಮ್) ಅವರು ಪ್ರತಿದಿನ ಅಖ್‌ಬಾರ್–ಎ–ಆಮ್ ಲಾಹೋರ್ ಪತ್ರಿಕೆಯನ್ನು ತರಿಸುತ್ತಿದ್ದರು ಮತ್ತು ನಿಯಮಿತವಾಗಿ ಓದುತ್ತಿದ್ದರು. ಕೊನೆಯ ದಿನಗಳಲ್ಲಿ ಅವರು ಸ್ವತಃ ಬೇರೆ ಯಾವುದೇ ಪತ್ರಿಕೆಯನ್ನು ತರಿಸುತ್ತಿರಲಿಲ್ಲ. ಆದರೆ ಯಾರಾದರೂ ಕಳುಹಿಸಿದರೆ ಅದನ್ನೂ ಓದುತ್ತಿದ್ದರು.

(ಮುಂದುವರಿಯುವುದು)

EDITOR
TARIQ AHMED IDRIS.
Mobile : +91 9902678609
e-mail:
akhbaarbadarkannadaqdn@gmail.com
website:www.akhbarbadr.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2026-28 Vol No.07, Thursday, 12 November 2026, Issue No. 46

Act. MANAGER
ATHAR AHMAD SHAMIM.
Mobile : +91 99156 39670
e-mail:managerbadrqnd@gmail.com
www.alislam.org/badr

ANNUAL SUBSCRIPTION: Rs.600/- (Per Issue: 10/-) (WEIGHT: 20-50, grms / issue)

ಸೈಯಿದುನಾ ಹಝ್ರತ್ ಅಮೀರುಲ್ ಮುಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ)ರವರ ಜರ್ಮನಿಯ ಪ್ರವಾಸ ಆಗಷ್ಟ್, ಸೆಪ್ಟೆಂಬರ್ 2023

* ಬೋಸ್ನಿಯಾದ ಅಹ್ಮದಿ ಸ್ನೇಹಿತ ಸಲೇಮ್ ಅಲಿಚ್ ಹೇಳುತ್ತಾರೆ: ಆರೋಗ್ಯ ಕಳಪೆಯಾಗಿದ್ದರೂ ಇಷ್ಟು ದೀರ್ಘ ಪ್ರಯಾಣವನ್ನು ಪ್ರಾರಂಭಿಸಲು ಏಕೈಕ ಕಾರಣವೆಂದರೆ ಖಲೀಫಾ ಅವರನ್ನು ಭೇಟಿಯಾಗುವ ಬಯಕೆ ಮತ್ತು ಈ ಸ್ವೀಕಾರಾರ್ಹ ಸಮಯದಲ್ಲಿ, ದೇವರ ಸಮ್ಮುಖದಲ್ಲಿ ಸ್ವೀಕಾರಾರ್ಹ ಪ್ರಾರ್ಥನೆಗಳ ಆಶೀರ್ವಾದವನ್ನು ಪಡೆಯಲು ಅವರ ಹೆಜ್ಜೆಗುರುತುಗಳಲ್ಲಿ ಪ್ರಾರ್ಥನೆ ಸಲ್ಲಿಸುವ ಹಂಬಲ ಮತ್ತು ಆಕರ್ಷಣೆ. ಈ ಪ್ರಯಾಣದ ಮೊದಲು, ಉರಿಯೂತದಿಂದಾಗಿ ನನ್ನ ಪಾದಗಳಲ್ಲಿ ತೀವ್ರವಾದ ನೋವು ಇತ್ತು ಮತ್ತು ಅದು ಹೋಗುತ್ತಿರಲಿಲ್ಲ, ಆದರೆ ನಾನು ಈ ಪ್ರಯಾಣವನ್ನು ಪ್ರಾರಂಭಿಸಿದಾಗಿನಿಂದ, ನನ್ನ ಪಾದಗಳಲ್ಲಿ ಯಾವುದೇ ನೋವು ಇರಲಿಲ್ಲ ಎಂದು ತೋರುತ್ತದೆ ಎಂಬುದಕ್ಕೆ ಅಲ್ಲಾಹನು ಸಾಕ್ಷಿಯಾಗಿದ್ದಾನೆ.

ಹುಝೂರ್ ಅನ್ವರ್(ಅತಬಿಅ) ಅವರೊಂದಿಗಿನ ಭೇಟಿಯಿಂದ ನನ್ನ ಹೃದಯವು ತೃಪ್ತರಾಗಿರಲಿಲ್ಲ, ಈ ಸಭೆ ಎಂದಿಗೂ ಕೊನೆಗೊಳ್ಳಬಾರದು ಮತ್ತು ನಾವು ಹುಝೂರ್ ಅನ್ವರ್(ಅತಬಿಅ) ಅವರ ವ್ಯಕ್ತಿತ್ವವನ್ನು ನೋಡುವುದನ್ನು ಮುಂದುವರಿಸಬೇಕೆಂದು ನಾನು ಬಯಸುತ್ತೇನೆ.

* ರೆಡ್ ಕ್ರಾಸ್‌ನ ಕಾರ್ಯದರ್ಶಿಯಾಗಿರುವ ಬೋಸ್ನಿಯಾದ ಮಹಿಳೆ ಇಂದಿರಾ ಹೈದರ್ ಹೇಳುತ್ತಾರೆ: ಫ್ರಾಂಕ್‌ಫರ್ಟ್‌ನಲ್ಲಿ ಖಲೀಫಾ ಅವರನ್ನು ಭೇಟಿಯಾಗುವುದು ತುಂಬಾ ಸಂತೋಷದಾಯಕವಾಗಿತ್ತು. ಕಾರಣವೆಂದರೆ ನೀವು ಪ್ರತಿಯೊಬ್ಬ ವ್ಯಕ್ತಿಗೂ ಒಳ್ಳೆಯದನ್ನು ಬಯಸುವ ಮತ್ತು ಎಲ್ಲರೂ ಒಳ್ಳೆಯದನ್ನು ಮಾಡಲು ಪ್ರೋತ್ಸಾಹಿಸುವ ವ್ಯಕ್ತಿ. ಅಹ್ಮದಿಯಾ ಜಮಾಅತ್ತಿನ ಇಮಾಮ್ ಅವರ ಮಾತುಗಳನ್ನು ನೇರವಾಗಿ ಕೇಳುವ ಅವಕಾಶ ನನಗೆ ಸಿಕ್ಕಿತು, ಅವರು ತಮ್ಮ ಅಮೂಲ್ಯ ಸಮಯವನ್ನು ತಮ್ಮ ಜೀವನದಲ್ಲಿ ಮೊದಲ ಬಾರಿಗೆ ನೋಡುತ್ತಿದ್ದ "ನಮ್ಮಂತಹ ಸಾಮಾನ್ಯ ಜನರಿಗಾಗಿ" ಕಳೆದರು, ಆದರೆ ಅವರು ಅವರನ್ನು ಬೆಚ್ಚಗಿನ ನಗು ಮತ್ತು ಆಶೀರ್ವಾದಗಳಿಂದ ತುಂಬಿದ ಮಾತುಗಳಿಂದ ಸ್ವಾಗತಿಸಿದರು. ವಿವಿಧ ತೊಂದರೆಗಳ ನಡುವೆಯೂ ಅಹ್ಮದಿಯಾ ಸಮುದಾಯ ಮತ್ತು Humanity First ನಮ್ಮ ದೇಶದಲ್ಲಿ ಕೆಲಸ ಮಾಡುತ್ತಿರುವ ಪ್ರಾಮಾಣಿಕತೆ, ಇಲ್ಲಿಗೆ ಬಂದು ಖಲೀಫಾ ಅವರನ್ನು ಭೇಟಿಯಾದ ನಂತರ, ಅವರ ಸ್ವಯಂಸೇವಕರಲ್ಲಿ ಮಾನವೀಯತೆಗೆ ಅಂತಹ ನಿಸ್ವಾರ್ಥ ಸೇವೆಯ ಮೂಲವು ವಾಸ್ತವವಾಗಿ ಅವರ ಖಲೀಫಾ ಅವರ ಮೂಲತತ್ವ ಎಂದು ನನಗೆ ಮನವರಿಕೆಯಾಯಿತು. ಸತ್ಯವೆಂದರೆ ಈ ಪ್ರಯಾಣದ ಸಾರವು ವಾಸ್ತವವಾಗಿ ಖಲೀಫಾ ಅವರ ಸಹವಾಸದಲ್ಲಿ ಕೆಲವು ಕ್ಷಣಗಳನ್ನು ಕಳೆಯುವ ಸವಲತ್ತು.

ಅಹ್ಮದಿಯಾ ಜಮಾಅತ್ ಪ್ರಪಂಚದ ವಿವಿಧ ಭಾಗಗಳಿಂದ ವಿವಿಧ ಜನರನ್ನು ಏಕತೆಯ ಸರಪಳಿಗೆ ತಂದಿದೆ, ಎಲ್ಲಾ ಮಾನವಕುಲವನ್ನು ಒಂದೇ ಉಮ್ಮಾವನ್ನಾಗಿ ಮಾಡುವಲ್ಲಿ ಮತ್ತು ಪ್ರಪಂಚದ ಸುಧಾರಣೆಗಾಗಿ ನನ್ನ ಪಾತ್ರವನ್ನು ನಿರ್ವಹಿಸುವಲ್ಲಿ ಎಷ್ಟು ಆಳವಾಗಿ ತೊಡಗಿಸಿಕೊಂಡಿದೆ ಎಂಬುದರ ಬಗ್ಗೆ ಈ ಅನುಭವವು ನನ್ನ ತಿಳುವಳಿಕೆಯನ್ನು ಹೆಚ್ಚಿಸಿದೆ ಎಂದು ನಾನು ಭಾವಿಸಿದೆ. ಈ ಅವಕಾಶವು ಮುಸ್ಲಿಂ ಆಗಿರುವ ನನ್ನ ಹೆಮ್ಮೆಯನ್ನು ಬಲಪಡಿಸಿತು ಮಾತ್ರವಲ್ಲದೆ ಮಾನವೀಯ ಪ್ರಯತ್ನಗಳು ಮತ್ತು ಅಂತರಧರ್ಮದ ಸಂವಾದದ ಪ್ರಚಾರದಲ್ಲಿ ಹೆಚ್ಚು ತೊಡಗಿಸಿಕೊಳ್ಳಲು ನನ್ನನ್ನು ಪ್ರೋತ್ಸಾಹಿಸಿತು.

* ಮಾಂಟೆನೆಗ್ರೊದ ಅತಿಥಿ ರುಜ್ಮಿರ್ ಒಸ್ಮಾನೋವಿಚ್ ಹೇಳುತ್ತಾರೆ: ಜಲ್ಸದ ಕಾರ್ಯಕ್ರಮವು ಶೈಕ್ಷಣಿಕ ಮತ್ತು ವೈವಿಧ್ಯಮಯವಾಗಿತ್ತು. ಪ್ರಪಂಚದಾದ್ಯಂತದ ನನ್ನ ಆತ್ಮೀಯ ಸ್ನೇಹಿತರನ್ನು ಭೇಟಿಯಾಗಲು ಸಂತೋಷವಾಯಿತು. ಕಾರ್ಯಕ್ರಮದಲ್ಲಿ ಹಾಜರಿದ್ದ ಸಾಮರಸ್ಯ ಮತ್ತು ಎಲ್ಲಾ ಭಾಗವಹಿಸುವವರ ಅತ್ಯುತ್ತಮ ಉಪನ್ಯಾಸಗಳಿಂದ ನಾನು ತುಂಬಾ ಸಂತೋಷಪಟ್ಟೆ. ಖಲೀಫಾ ಅವರನ್ನು ಭೇಟಿಯಾಗುವುದು ಅವಿಸ್ಮರಣೀಯವಾಗಿತ್ತು. ನಾನು ಸುಂದರವಾದ ನೆನಪುಗಳು, ಜ್ಞಾನ ಮತ್ತು ಹೊಸ ಸ್ನೇಹಗಳೊಂದಿಗೆ ಮಾಂಟೆನೆಗ್ರೊಗೆ ಹಿಂತಿರುಗುತ್ತಿದ್ದೇನೆ. ಈ ಹೊಸ ಜ್ಞಾನವು ನನಗೆ ಇನ್ನಷ್ಟು ಓದಲು, ಧರ್ಮದ ಬಗ್ಗೆ ಕಲಿಯಲು ಮತ್ತು ಸಮಾಜದ ಹೆಚ್ಚು ಜವಾಬ್ದಾರಿಯುತ ಸದಸ್ಯನಾಗಲು ಸ್ಫೂರ್ತಿ ನೀಡುತ್ತದೆ ಎಂದು ನಾನು ಭಾವಿಸುತ್ತೇನೆ.

4 ಸೆಪ್ಟೆಂಬರ್ 2023, ಸೋಮವಾರ

(ವರದಿಯ ಮುಂದುವರಿದ ಭಾಗ)

ಮ್ಯಾಸಿಡೋನಿಯಾದಿಂದ ಆಗಮಿಸಿದ ನಿಯೋಗದ ಭೇಟಿಯ ವರದಿ

ತದನಂತರ ಕಾರ್ಯಕ್ರಮದ ಪ್ರಕಾರ ಮ್ಯಾಸಿಡೋನಿಯಾದಿಂದ ಆಗಮಿಸಿದ ನಿಯೋಗವು ಹಝ್ರತ್ ಅಮೀರುಲ್ ಮುಮಿನೀನ್ ಖಲೀಫತುಲ್ ಮಸೀಹ್ ಅಯ್ಯದುಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಅವರೊಂದಿಗೆ ಭೇಟಿಯಾಗುವ ಸೌಭಾಗ್ಯವನ್ನು ಪಡೆಯಿತು. ಮ್ಯಾಸಿಡೋನಿಯಾದಿಂದ ಆಗಮಿಸಿದ ನಿಯೋಗದಲ್ಲಿ ಒಟ್ಟು 49 ಮಂದಿ ಇದ್ದರು.

ಹುಝೂರ್ ಅನ್ವರ್(ಅತಬಿಅ) ಅವರು ವಿಚಾರಿಸಿದರು: **"ಕವಿತೆ (ನಝ್ಮ್) ಪಠಿಸುತ್ತಿದ್ದ ಆ ಯುವಕನು ಬಂದಿಲ್ಲವೇ?"** ಇದಕ್ಕೆ ಮಿಷನರಿಯವರು ಈ ವರ್ಷ ಬೈರನ್ ಬಂದಿಲ್ಲವೆಂದು ಹೇಳಿದರು.

(ಮುಂದುವರಿಯುವುದು)

(ಪುಟ ಸಂಖ್ಯೆ 01ರ ತಫ್ಸೀರ್‌ನ ಉಳಿದ ಭಾಗ)

ಆ ಆಹಾರವನ್ನು ತಿನ್ನಲು ನೀಡಲಾಗುತ್ತದೆ. ನಂತರ ವೈದ್ಯರು ಅದನ್ನು ಸೇವಿಸುತ್ತಾರೆ. ಆನಂತರವೇ ಅದನ್ನು ರಾಜರ ಮುಂದೆ ಬಡಿಸಲಾಗುತ್ತದೆ. ಅಂದರೆ, ಅವರಿಗೆ ಪ್ರತಿಯೊಂದು ಕ್ಷಣವೂ ಅಪಾಯದ ಭಯವಿರುತ್ತದೆ ಮತ್ತು ನಿರಂತರ ಮುನ್ನೆಚ್ಚರಿಕೆಗಳನ್ನು ವಹಿಸುತ್ತಿರುತ್ತಾರೆ. ಹೀಗೆ ಅವರು ಸದಾ ಆತಂಕ ಮತ್ತು ಅಶಾಂತಿಯಲ್ಲಿಯೇ ಇರುತ್ತಾರೆ. ಆದರೆ ನಮ್ಮ ಪ್ರಿಯ ಪ್ರವಾದಿ ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್(ಸ) ಅವರ ಜೀವನವನ್ನು ನೋಡಿ. ಅವರ ಸುತ್ತಲೂ ಎಲ್ಲೆಡೆ ಶತ್ರುಗಳೇ ಇದ್ದರೂ ಅವರಿಗೆ ಯಾವುದೇ ಭಯ ಅಥವಾ ಆತಂಕವಿರಲಿಲ್ಲ. ಬದಲಾಗಿ, ಅವರು ಸಂಪೂರ್ಣ ನೆಮ್ಮದಿ ಮತ್ತು ಸಂತೋಷದಿಂದ ಇರುತ್ತಿದ್ದರು. ಶತ್ರುಗಳೇ ಊಟಕ್ಕೆ ಆಹ್ವಾನಿಸಿದರೂ ಯಾವುದೇ ಹಿಂಜರಿಕೆಯಿಲ್ಲದೆ ಅಲ್ಲಿಗೆ ತೆರಳುತ್ತಿದ್ದರು. ಒಮ್ಮೆ ಒಬ್ಬ ಯಹೂದಿ ಮಹಿಳೆಯು ಪ್ರವಾದಿಯವರಿಗೆ ವಿಷವನ್ನೂ ನೀಡಿದ್ದಳು. ಆದರೂ ಅಲ್ಲಾಹನ ಇಲ್ಹಾಮ್ (ದೈವಿಕ ಸಂದೇಶ) ಮೂಲಕ ಈ ವಿಷಯವು ಪ್ರವಾದಿಯವರಿಗೆ ತಿಳಿದುಬಂದಿತು ಮತ್ತು ಅವರು ಅದರಿಂದ ರಕ್ಷಿಸಲ್ಪಟ್ಟರು. (ಸೀರತುನ್ನಬಿ, ಇಬ್ನ್ ಹಿಶಾಮ್, 'ಅಮ್ರ್ ಖೈಬರ್' ಎಂಬ ಶೀರ್ಷಿಕೆಯ ಅಡಿಯಲ್ಲಿ) ಪ್ರವಾದಿಯವರಿಗೆ ಇಷ್ಟೊಂದು ನೆಮ್ಮದಿ ಮತ್ತು ನಿರಾತಂಕತೆ ಏಕೆ ಇತ್ತು? ಅದಕ್ಕೆ ಕಾರಣವೇನೆಂದರೆ, ಅವರು ಅಗೋಚರ ವಿಷಯಗಳನ್ನೂ ತಿಳಿದಿರುವಂತಹ ಮಹಾನ್ ಅಸ್ತಿತ್ವವಾದ ಅಲ್ಲಾಹ್ ತಆಲಾರೊಂದಿಗೆ ಅತ್ಯಂತ ಗಾಢವಾದ ಸಂಬಂಧವನ್ನು ಸ್ಥಾಪಿಸಿಕೊಂಡಿದ್ದರು. ಯಾವ ವ್ಯಕ್ತಿಯು ಅಂತಹ ಅಸ್ತಿತ್ವದೊಂದಿಗೆ ಸಂಬಂಧವನ್ನು ಬೆಳೆಸಿಕೊಳ್ಳುತ್ತಾನೋ, ಅಲ್ಲಾಹ್ ತಆಲಾ ತನ್ನ ಅಗೋಚರ ಜ್ಞಾನದಿಂದ ಅಗತ್ಯಕ್ಕೆ ಅನುಗುಣವಾಗಿ ಆತನಿಗೆ ಕೆಲವು ವಿಷಯಗಳನ್ನು ತಿಳಿಸುತ್ತಿರುತ್ತಾನೆ. ಆದ್ದರಿಂದ, ಅಲ್ಲಾಹನೊಂದಿಗೆ ಸಂಬಂಧವನ್ನು ಹೊಂದಿರುವ ವ್ಯಕ್ತಿಯು ಸದಾ ನೆಮ್ಮದಿ ಮತ್ತು ಆತ್ಮತೃಪ್ತಿಯಿಂದ ಇರುತ್ತಾನೆ." **(ತಫ್ಸೀರ್ ಕಬೀರ್, ಸಂಪುಟ 5, ಪುಟ 67, ಸೂರತುರ್ ರಅದ್ (13), ಆನ್‌ಲೈನ್ ಆವೃತ್ತಿ).**

----------*****----------

ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:

NATIONAL TOLL FREE : 1800-103-2131

ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ

(ಶುಕ್ರವಾರ ರಜೆ)

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.